Reg. No. M. 1550

KODAGU

7—2—1936

IF NOT

*delivered*

*please return to*

"KODAGU"
OFFICE,
MERCARA.

# ಕೊಡಗು

ಅಚ್ಚುಮೆಚ್ಚಿನ
ಮುದ್ರಣ ಕಲಸಕ್ಕೆ
"ಕೊಡಗು"
ಪ್ರೆಸ್ಸು,
ಮಡಿಕೇರಿ.

—•—

ಹೆಚ್ಚಿನ ವಿಷಯಕ್ಕೆ
ಕೂಡಲೆ ವಿಚಾರಿಸಿರಿ.

ಕತ್ಮೇನ ಭೂತದಯಯಾಽವಿದ್ಮಾ ಏೀತಿ ಪ್ರಯುಕ್ಮಕಾಃ॥ ಐಕ್ಮಮುಕ್ಮೇಸ ಜೇಶಾಸಾಂ ಸುಸ್ಥಿರಾ ರಾಜ್ಮ ಸಂಪದಾ

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಪಂಡ್ಯಂಡ ಐ. ಬೆಳ್ಯಪ್ಪ.

ಸಂಪುಟ ೧೫] ಮಡಿಕೇರಿ, ಸನ್ ೧೯೩೬ನೇ ಇಸವಿ ಫೆಬ್ರವರಿ ತಾರೀಕು ೭ನೇ ಶುಕ್ರವಾರ. [ಸಂಚಿಕೆ ೩೯

Telephon;
3145

By Appointment
To H. E. The Governor of Madras.

Telegrams:
'PRECIOUS.'

Brooch



Ring.

Ring.

Necklace.

V. SUBRAMANIA IYER.

Jeweller, & Diamond Merchant,

52—11 2 & 3 Kuppumuthu Street Tiruvateswaranpet. POST BOX 423 TRIPLICANE. P. O., MADRAS.

Catalogue & special designs with quotations (free) on enqu ry.

ಇ ೧ ೦ ೬ ರಲ್ಲಿ ಸ್ಥಾಪಿತವಾದದ್ದು.

ದಿ ಕೆನರಾ ಬ್ಯಾಂಕಿಂಗ್ ಕೊರ್ಪರೇಷನ್ ಉಡುಪಿ—ಲಿಮಿಟೆಡ್.

(ಬ್ರಿಟಿಷ್ ಇಂಡಿಯದಲ್ಲಿ ರಿಜಿಸ್ಟರ್ ಆದದ್ದು.)

ಹೆಡ್ ಆಫೀಸು—ಉಡುಪಿ.

ಶಾಖೆಗಳು.

(1) ಉಡುಪಿ
(2) ಕುಂದಾಪುರ
(3) ಮಂಗಳೂರು—ರಥಬೀದಿ
(4) ಮಂಗಳೂರು—ಬಂದರ್
(5) ಮದರಾಸು
(6) ಶಿವಮೊಗ್ಗಾ
(7) ಮಡಿಕೇರಿ
(8) ವೀರರಾಜೇಂದ್ರಪೇಟೆ

ಬೇಂಕರರು.

(1) ಬೊಂಬಾಯಿ
(2) ಕಲ್ಕತ್ತಾ
(3) ಕರಾಚಿ
(4) ಕೊಚ್ಚಿನ್
(5) ಮೈಸೂರು
(6) ಬೆಂಗಳೂರು ಅಕ್ಕೌಂಟ್ ಕಲಸಲ್ಲಿ

ನಿಮ್ಮ ಸೇವೆಯೇ ನಮ್ಮ ಧ್ಯೇಯ.

ತಾ. 15—1—1936ರಿಂದ ಚಿನ್ನಾಭರಣಗಳ ಮೇಲಣ ಸಾಲಗಳ ಬಡ್ಡಿಯ ದರವನ್ನು ಅತೀ ಕಡಿಮೆ ದರಕ್ಕೆ ಇಳಿಸಲಾಗಿದೆ.

ನಿಖಿಲ ಠೇವಣಾತಿಗಳನ್ನು ಶೇಕಡ 5ರ ವರೆಗಿನ ಬಡ್ಡಿಯಲ್ಲಿ ಈಗ ಸ್ವೀಕರಿಸಲಾಗುತ್ತದೆ.

ಚಾಲ್ತಿ, ಸೇವಿಂಗ್ಸ್‌ಬ್ಯಾಂಕ್, ಕ್ಯುಮಿಲೇಟಿವ್ ಠೇವಣಾತಿಗಳನ್ನು ಅತೀ ಲಾಭದಾಯಕವಾದ ಬಡ್ಡಿಯಲ್ಲಿ ತೆರೆಯೋಣಾಗುತ್ತವೆ.

ಅಲ್ಲದೆ

ಎಲ್ಲಾ ತರಹ ಬ್ಯಾಂಕಿಂಗ್ ವಹಿವಾಟುಗಳು ನಡಿಸಲ್ಪಡುತ್ತವೆ.

ಹೆಚ್ಚಿನ ವಿವರಗಳಿಗೆ ನಮ್ಮ ಯಾವುದೇ ಆಫೀಸ್ಸಿಂದ ಪಡೆಯಬಹುದು.

"ಜನರಲ್ ಅಷ್ಯೂರೆನ್ಸ್" ಅಜ್ಮೀರ್.

ಉದಾರವಾದ ಕೈಟ್ಟೆ ಭೂಕಂಪ ಸೌಲಭ್ಯಗಳು.

(1) ಆರು ತಿಂಗಳುಗಳವರೆಗೆ ಪ್ರೀಮಿಯಂ ಇಲ್ಲದೆ ಪಾಲಿಸಿಗಳು ಜಾರಿಯಲ್ಲಿರುವವು.
(2) ಕ್ಲೇಮ್ಸುಗಳು ಮತ್ತು ಪಾವತಿಯು ಅತೀ ವಿನಯ ಮತ್ತು ಕ್ಷಿಪ್ರದಲ್ಲಾಗುವುದು.
(3) ಸಾಲಗಳಮೇಲಿನ ಬಡ್ಡಿಯ ದರವು 4½%ಗೆ ಇಳಿಸಲ್ಪಟ್ಟಿದೆ.
(4) ಪುನಃ ಜಾರಿಗೆ ತರುವ ಶರತ್ತುಗಳು ಸುಲಭ ರೀತಿಯಲ್ಲಿವೆ.

ಜಾರಿಯಲ್ಲಿರುವ ವಿಮೆಮೊಬಲಗು (ಹೆಚ್ಚು) 265 ಲಕ್ಷ
ಲೇವಾದೇವಿಯಲ್ಲಿರುವಮೊಬಲಗು ಸುಮಾರು 70 ಲಕ್ಷ
ವಾರ್ಷಿಕ ಉತ್ಪತ್ತಿಗಳು (ಹೆಚ್ಚು) ರೂ. 16 ಲಕ್ಷ
ವಿವೂ ಹಕ್ಕುಗಳ ಪಾವತಿ ರೂ 33 ಲಕ್ಷ

ಜೋನಸ್ಸು ಬೇರೆ ಕಂಪೆನಿಗಳಿಗಿಂತ ಅಧಿಕ

ಜೀವಾವಧಿ ಪಾಲಿಸಿಗಳಿಗೆ ಸಾಲಯೂನೂ. 25%o
ಎಂಡೋಮೆಂಟ್ ಪಾಲ್ಸಿಗಳಿಗೆ ಸಾಲಯೂನ ರೂ. 20%o

ಪಬ್ಲಿಸ್ಸಿಯು ವಿಯಮಗಳು ವಿಶೇಷ ಲಾಭದಾಯಕ

ಇತರ ವಿವರಗಳಿಗೆ ಕೂಡಲೇ ಈ ಕೆಳಗಿನವರಿಗೆ ಬರೆಯಿರಿ:—

ಸಿ. ಡಿ. ಭಾಗವನ, ಎಫ್. ಎಸ್. ಎಸ್. (ಲಂಡನ್),
ಜನರಲ್ ಮೇನೇಜರ್, ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್, ಅಜ್ಮೀರ್. ಅಥವಾ:—
ಎ. ಎಸ್ ಎಸ್ ಅಯ್ಯಂಗಾರ್,
ಸುಪರಿಂಟೆಂಡೆಂಟ್, ಜನರಲ್ ಅಷ್ಯೂರೆನ್ಸ್ ಬಿಲ್ಡಿಂಗ್, ಚಾಮರಾಜಪೇಟೆ, 3ನೇ ರೋಡ್,

# ವಿವಿಧ ವಾರ್ತೆಗಳು.

## ಎಡ್ವರ್ಡ ಚಕ್ರವರ್ತಿಗಳು ಹಿಂದೂಸ್ಥಾನಕ್ಕೆ.

1937ನೇ ಇಸವಿಯಲ್ಲಿ ನಮ್ಮ ಈಗಿನ ಚಕ್ರವರ್ತಿಗಳಾದ ಎಡ್ವರ್ಡ್ ಪ್ರಭುಗಳು ಹಿಂದೂದೇಶಕ್ಕೆ ಬಂದು ದರ್ಬಾರು ನಡಿಸಲಿರುವರೆಂದೂ ಆಗ್ಗೆ ರಾಕೀಯ ಘಟನೆಯಲ್ಲಿ ಮಹತ್ತಾದ ಬದಲಾವಣೆಗಳಾಗುವವೆಂದೂ ತಿಳಿದು ಬರುತ್ತದೆ.

—೦೦೦—

## ಕಾಂಗ್ರೆಸಿಗೆ ಬೆಂಬಲ.

ಮದ್ರಾಸಿನ ಯುನೈಟೆಡ್ ನ್ಯಾಶನಲಿಸ್ಟ್ ಪಕ್ಷದವರು ಸಭೆಸೇರಿ ತಾವು ಕಾಂಗ್ರೆಸ್ ಪಕ್ಷದವರೊಡನೆ ಸೇರಬೇಕೆಂದು ನಿರ್ಧರಿಸಿದ್ದಾರೆ. ಈಗಾಗಲೆ ಹಲವರು ಕಾಂಗ್ರೆಸಿನ ಪ್ರನೂಣ ಪತ್ರಕ್ಕೆ ಸಹಿಹಾಕಿದ್ದಾರೆ. ಇನ್ನೂ ಅನೇಕರು ಸದ್ಯದಲ್ಲಿಯೇ ಸೇರಲಿರುವರೆಂದು ತಿಳಿದುಬರುತ್ತದೆ.

—೦೦೦—

## ಸುಭಾಷ್ಚಂದ್ರಬೋಸರಿಗೆ ಅಪೂರ್ವ ಸ್ವಾಗತ.

ಸುಭಾಷ್ಚಂದ್ರಬೋಸರು ಈ ತಾ. 3ರಲ್ಲಿ ಏರ್ಲಂಡಿನ ಡಬ್ಲಿನ್ ನಗರಕ್ಕೆ ಫ್ರಾನ್ಸಿನಿಂದ ಹೊರಟು ತಲಪಿದರು. ಅಲ್ಲಿ ಅವರಿಗೆ ಅಪೂರ್ವ ಸ್ವಾಗತವಾಯಿತು. ಅಲ್ಲದೆ ಏರ್ಲಂಡಿನ ಪ್ರೆಸಿಡೆಂಟರಾದ ಡಿವೆಲರು ಅವರನ್ನು ಬರ ಮಾಡಿಕೊಂಡು ಅವರೊಡನೆ ಅನೇಕ ಮುಖ್ಯ ವಿಷಯಗಳನ್ನು ಕುರಿತು ಮಾತು ಕತೆ ನಡೆಸಿದರು.

—೦೦೦—

## ಸೋತ ಮೆಕ್ಡೊನಾಲ್ಡರು ಗೆದ್ದರು!

ಬ್ರಿಟಿಷ್ ಪಾರ್ಲಿಮೆಂಟಿನ ಕಳೆದ ಮಹಾ ಚುನಾವಣೆಯಲ್ಲಿ ಅಪಜಯವನ್ನು ಹೊಂದಿದ ಮಾಜಿ ಪ್ರಧಾನ ಮಂತ್ರಿಗಳಾದ ಮೆ. ರಾಮ್ಸೆಮೆಕ್ಡೊನಾಲ್ಡರು ಸ್ಕಾಟಿಷ್ ಯೂನಿವರ್ಸಿಟಿಯ ಪರವಾಗಿ ನಡೆದ ಉಪಚುನಾವಣೆಯಲ್ಲಿ ಯಶಸ್ವಿಯಾಗಿರುವರು. ಅವರ ಎದುರಾಳುಗಳಾಗಿದ್ದ ಮೆ. ಡೆವಾರ ಗಿಬ್ಸ್ ಮತ್ತು ಮೆ. ಥಾಮ್ಸನ್ರವರಿಗೆ ಅನುಕ್ರಮವಾಗಿ 9,034 ಮತ್ತು 3,597 ಓಟುಗಳೂ ಮೆಕ್ಡೊನಾಲ್ಡರಿಗೆ 16,393 ಓಟುಗಳೂ ದೊರೆತವು.

—೫೦೫—

## ಕೃಪಾಣದ ಸತ್ಯಾಗ್ರಹ ಮುಗಿಯಿತು.

ಕೃಪಾಣಧರಿಸಕೂಡದೆಂಬದಾಗಿ ಹೊರಡಿಸಿದ ಮೇಜಿಸ್ಟ್ರೇಟರ ಆಜ್ಞೆಯ ಅವಧಿಯು ಕಳೆದ ತಿಂಗಳ ಅಂತ್ಯಕ್ಕೆ ಮುಗಿದ ದ್ದರಿಂದ ಜತೇದಾರ ಆಚಾರ್ಯಸಿಂಗರ ನೇತೃತ್ವದಲ್ಲಿ ಸಿಖ್ಖರ ಜಟಿಯು ಕೃಪಾಣಗಳನ್ನು ಹಿಡಿದುಕೊಂಡು ಅನೇಕ ಗುರುದ್ವಾರಗಳಿಗೆ ಹೋದರೂ ಪೊಲೀಸರು ಅಡ್ಡಿ ಮಾಡಲಿಲ್ಲ. ಆಚಾರ್ಯ ಸಿಂಗರು ಕೃಪಾಣ ಸತ್ಯಾಗ್ರಹಕ್ಕಾಗಿಯೇ 45 ದಿವಸಗಳ ತಿಕ್ಷೆಯನ್ನು ಅನುಭವಿಸಿ ಕಳೆದ ತಾ. 31ರಲ್ಲಿ ಬಿಡುಗಡೆ ಹೊಂದಿದರು.

—೫೦೦—

## ಮಹಾತ್ಮರಿಗೆ ಆಮಂತ್ರಣ.

'ಪೌರಾತ್ಯ ದೇಶಗಳ ಪ್ರೇಮಬಾಂಧವ್ಯವನ್ನು ಸಾಧಿಸ ತಕ್ಕವರು ಮಹಾತ್ಮರೇ ಎಂದು ವಿಧಿವಿಧಿತವಾದಂತೆ ನಮಗನ್ನಿಸುತ್ತದೆ. ಮಹಾತ್ಮರು ಜಪಾನಿಗೆ ಖಂಡಿತವಾಗಿ ಬರಬೇಕು. ಕ್ಷಾಮ ಕಾಲದಲ್ಲಿ ನೀರಿಗೆ ಬಾಯಿಬಿಡುವಂತೆ, ನಾವು ಮಹಾತ್ಮರ ದರ್ಶನಕ್ಕಾಗಿ, ಅವರ ಉಪದೇಶಕ್ಕಾಗಿ ತಹತಹಪಡುತ್ತಿದ್ದೇವೆ. ನಮ್ಮ ಭಕ್ತಿ ಪೂರ್ವಕವಾದ ಆಹ್ವಾನವನ್ನು ಅವರಿಗೆ ನೀಡಬಯಸುತ್ತೇವೆ.'

ಡಾ. ಟೋಮಿಕೋ ಕೋರಾರವರ ಮಾತುಗಳು ಇವು ಡಾ. ಕೋರಾರವರು ಜಪಾನ ಸ್ತ್ರೀ ವಿಶ್ವವಿದ್ಯಾನಿಲಯದ ಆಚಾರ್ಯಸ್ಥಾನವನ್ನಲಂಕರಿಸಿದ್ದಾರೆ. ಮಹಾತ್ಮ ಗಾಂಧಿಯವರನ್ನು ಜಪಾನಿಗೆ ಆಹ್ವಾನಿಸಲು ಈಗ ವಾರ್ಧಾನಗರಕ್ಕೆ ಬಂದಿದ್ದಾರೆ.

—೦೦೦—

## ಜೈನಾದಲ್ಲಿ ಅಶಾಂತಿ.

ಮೂವತ್ತು ಸಾವಿರ ಕಮ್ಯೂನಿಸ್ಟರು ಜೈನದ ಹ್ಯೂನಾನ್ ಪ್ರಾಂತದಿಂದ ದಕ್ಷಿಣ ಜೈನಕ್ಕೆ ಮುಂದುವರಿಯುತ್ತಿರುವರು ಕ್ಯೂಯೊಂಗಿನ ಸಮೀಪದಲ್ಲಿರುವ ವೆಂಗಾನ್ ನಗರವನ್ನು ವಶಪಡಿಸಿಕೊಂಡಿರುವರು. ಕ್ಯೂಯೊಂಗಿನಿಂದ 35 ಮೈಲು ದೂರದಲ್ಲಿರುವ ಕ್ವೇಟಿಂಗ್ ನಗರವು ಅವರ ಸ್ವಾಧೀನವಾಗುವುದರಲ್ಲಿದೆ. ಸರಕಾರದ ಸಿಪಾಯಿಗಳು ಕಮ್ಯೂನಿಷ್ಟರನ್ನು ಇದಿರಿಸುವುದಕ್ಕಾಗಿ ತಮ್ಮ ಸ್ಥಳವನ್ನು ಭದ್ರಪಡಿಸಿಕೊಳ್ಳುತ್ತಿದ್ದಾರೆ.

ಕ್ವೇಟೊ ಎಂಬಲ್ಲಿ ಕಮ್ಯೂನಿಸ್ಟರಿಗೂ ಸರಕಾರದ ಸೈನಿಕರಿಗೂ ಯುದ್ಧವಾಗಿ ಕಮೂನಿಸ್ಟರು ಕ್ವೇಟಿಂಗನ್ನು ಹಿಡಿದರು. ಕಮ್ಯೂನಿಸ್ಟರ ದಳವು 30,000 ಇದ್ದು ತಮ್ಮ ಇದಿರಿಗೆ ಬಂದುದನ್ನೆಲ್ಲಾ ನಾಶಮಾಡುತ್ತಿರುವರು, ಎಂದು ಕ್ಯಾಂಟನ್ನಿನ ವಾರ್ತೆಯಿಂದ ತಿಳಿದುಬರುತ್ತದೆ.

—೦೦೦—

## ಕಾಂಗ್ರೆಸ್ಸಿನ ಆಧ್ಯಕ್ಷಪಟ್ಟವು ಪ. ಜವಾಹರಲಾಲರಿಗೆ



ಪಂಡಿತ ಜವಾಹರಲಾಲರೇ ಲಕ್ನೋ ಕಾಂಗ್ರೆಸ್ಸಿನ ಅಧ್ಯಕ್ಷರಾಗಬೇಕೆಂದು ಬಹುಮತ ಪ್ರಾಂತಗಳು ಸೂಚಿಸಿರುವದರಿಂದ ಅವರೇ ಮುಂದಿನ ಕಾಂಗ್ರೆಸಿನ ಅಧ್ಯಕ್ಷರಾಗುವರು. ಈ ವಾರ್ತೆಯನ್ನು ತಿಳಿದೊಡನೆ ಪಂಡಿತರು ತಮ್ಮ ಕೃತಜ್ಞತೆಯನ್ನು ಸೂಚಿಸಿ, ಈ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲೋಸುಗ ಅನೇಕ ಮುಖಂಡರೊಡನೆ ವಿಚಾರ ವಿನಿಮಯ ಮಾಡಲು ಶೀಘ್ರದಲ್ಲಿ ಭಾರತಕ್ಕೆ ಬರುವೆನೆಂದು ಪ್ರಕಟಣೆ ಹೊರಡಿಸಿರುವರು.

—೦೦೦—

## ಲಕ್ನೊ ಮುನ್ಸಿಪಾಲಿಟಿ.

ಅಖಿಲಭಾರತ ಕಾಂಗ್ರೆಸ್ಸಿನ ಮಹಾ ಸಮ್ಮೇಳನವು ಲಕ್ನೋ ನಗರದಲ್ಲಿ ನಡೆಯುತ್ತದಷ್ಟೆ. ಲಕ್ನೋ ಪೌರಸಭೆಯಲ್ಲಿ ಕಾಂಗ್ರೆಸ್ ಸದಸ್ಯರೇ ಬಹು ಸಂಖ್ಯಾತರು. ಪೌರಸ್ಥ ಭಾಧ್ಯಕ್ಷರೂ ಕಾಂಗ್ರೆಸಿನವರೇ. ಅವರೆಲ್ಲರೂ ಸೇರಿ ಕಾಂಗ್ರೆಸ್ ನಡೆಯುವಾಗ ಬೇಕಾಗುವ ಸವ್ರಕರ್ಯಗಳನ್ನೂ (ಬೆಳಕು, ನೀರು, ಸೈನ್ಯರ್ಷ್ಣ ಇತ್ಯಾದಿ) ತನ್ನ ಸ್ವಂತ ವೆಚ್ಚದಿಂದ ಪೌರ ಸಭೆಯೇ ವಹಿಸಬೇಕೆಂದು ಒಂದು ಠರಾವು ಪಾಸು ಮಾಡಿದರು. ಕಮಿಷನರು ಕಾಂಗ್ರೆಸಿಗಾಗಿ ಆಗುವ ವೆಚ್ಚವನ್ನು ಪೌರ ಸಭೆಯು ವಹಿಸಿಕೊಳ್ಳಲು ತಾವು ಅನುಮತಿ ಕೊಡುವುದಿಲ್ಲವೆಂದು ತಿರಸ್ಕರಿಸಿಬಿಟ್ಟರು.

ಪೌರ ಸಭೆಯು ಈ ತೀರ್ಮಾನವನ್ನು ಪರಿಶೀಲಿಸಲು ಸೇರಿ, ತೀರ್ಮಾನಕ್ಕೆ ವಿರೋಧವಾಗಿ ಎಲ್ಲ ವೆಚ್ಚವನ್ನು ಪೌರ ಸಭೆಯೇ ವಹಿಸಿಕೊಳ್ಳಬೇಕೆಂದು ಪುನಹ ನಿರ್ಣಯವುಂಡಿಬಿಟ್ಟಿದೆ. ಇನ್ನು ಮುಂದೇನಾಗುತ್ತದೆಯೋ ನೋಡಬೇಕು!

—೦೦೦—

## ಈಜಿಪ್ಟಿನಿಂದ ಪಾಠ ಕಲಿಯಬೇಕು.

'ಈಜಿಪ್ಟ್ ರಾಷ್ಟ್ರವನ್ನು ತಮ್ಮ ದಾಸ್ಯದಲ್ಲಿ ಮತ್ತಷ್ಟು ಹಾಕಿಕೊಳ್ಳಬೇಕೆಂದು ಬ್ರಿಟಿಷ್ ರಾಜಕಾರಣ ಚದುರರು ಏನೇನೋ ಆಟಕಟ್ಟಿದರು. ಆದರೆ ಐಗುಪ್ತರು ಇವರ ಆಟಕ್ಕೆ ಮರುಳಾಗಲಿಲ್ಲ. ಸ್ಪತಿಯೂಗಿ ಬಿಗಿಯೂದರು. ಸ್ವಾತಂತ್ರ್ಯವನ್ನೇ ಪಡೆಯಬೇಕೆಂದು ಹಟಹಿಡಿದರು. ಈಗ ಅದೇ ಚದುರರು ಏನು ಮಾಡುತ್ತಿದ್ದಾರೆ? ಕ್ರಮಕ್ರಮವಾಗಿ ಹಡಕ್ಕೆ ಬರುತ್ತಿದ್ದಾರೆ''

ಎಂದು ಪ್ರಾರಂಭಗೊಂಡು ತಾ. ''ಅವೃತ ಬಜಾರು ಸಕ್ತಿಕೆ'ಯು ಇದ್ದರಿಂದ ಭಾರತವು ಕಲಿಯುವ ಪಾಠವೊಂದಿದೆಯೆಂದು ಮುಂದುವರಿಯುತ್ತದೆ.

'ಕಾಂಗ್ರೆಸು ದೇಹಿ, ದೇಹಿ' ಎಂದು ಬೇಡುತ್ತಿದ್ದವರಿಗೂ, ಸರಕಾರವು ಲೆಕ್ಕಿಸುತ್ತಿರಲಿಲ್ಲ. ಆ ಮೇಲೆ ತಾವುಸಹಗಾಮಿಗಳು ಕಾಂಗ್ರೆಸಿನಿಂದ ದೂರವಾದರು. ತಮ್ಮ ಉಗ್ರಗಾಮಿಗಳ ಕೈಸೇರಿತು. ಈಗ ಭಾರತ ಸರಕಾರವು ಕಾಂಗ್ರೆಸೆಂದರೆ ಸ್ವಲ್ಪ ಹಿಂದು ಮುಂದು ನೋಡುತ್ತದೆ. ಇದಕ್ಕೆ ಕಾಂಗ್ರೆಸಿನ ಕಾರ್ಯಪ್ರೌಢಿಮೆಯೇ ಕಾರಣ. ಮುಂದೆ ಬರುವ ಕಾಂಗ್ರೆಸಿನವರು ಪೂರ್ಣ ಸ್ವರಾಜ್ಯವಲ್ಲದೆ ಮತ್ತಾವುದನ್ನೂ ಸ್ವೀಕರಿಸುವುದು ಸಹಾ ಇಲ್ಲವೆಂದು ಸಂಕಲ್ಪತೊಟ್ಟು ಆ ದಕ್ಕೆ ತಕ್ಕ ಕಾರ್ಯಕ್ರಮಕ್ಕೆ ಕೈಹಚ್ಚಿದರೆ, ಬ್ರಿಟಿಷ್ ಸಾಮ್ರಾಜ್ಯವಾದಿಗಳು ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನಾದರೂ ಕೊಡಬಹುದಲ್ಲವೆ? ಈಜಿಪ್ಟಿನ ನಿದರ್ಶನವು ಕಣ್ಮೆದುರಿಗೆ ಇದೆಯಲ್ಲ!'

—೦೦೦—

## ಹಿಟ್ಲರರ ನಿಜರೂಪ!

ಮ್ಯೂನಿಚಿನಲ್ಲಿ ಸೇರಿದ್ದ ವಿದ್ಯಾರ್ಥಿಗಳ ಸಭೆಯೊಂದರಲ್ಲಿ ಭಾಷಣ ಮಾಡುತ್ತಾ ಹಿಟ್ಲರು ಹೇಳಿದ್ದೇನಂದರೆ—

'ಭಾರತೀಯರು ಅಳುತ್ತಾ ಇಂಗ್ಲಂಡದ ಹತ್ತಿರ ಹೋಗಿ ನಮಗೆ ನಡೆಯುವದನ್ನು ಕಲಿಸಿಕೊಡಿರೆಂದು ಕೇಳಲಿಲ್ಲ. ನಡೆಯುವದನ್ನು ಕಲಿಸಲು ಇಂಗ್ಲಿಷರೇ ಹಿಂದುಸ್ಥಾನಕ್ಕೆ ಹೋದರು. ಅವರು ಅಲ್ಲಿಗೆ ಯಾತಕ್ಕೆ ಹೋದರು? ಯಾತಕ್ಕೆಂದರೆ, ಬಿಳಿಯ ಜನಾಂಗಕ್ಕೆ ಕರಿಯ ಜನರನ್ನು ಆಳುವ ದೈವೀದತ್ತ ಹಕ್ಕು ಇದೆ. ತಮ್ಮ ವೀರ ಜೀವನದಿಂದ ಅವರು ಅದನ್ನು ಸಡೆದಿದ್ದಾರೆ. ಮೊದಲು ಕೆಲಕಾಲ ಅವರು ತೊಂದರೆ ಪಟ್ಟರು. ಆದರೆ ಕೊನೆಗೆ ಎಲ್ಲರನ್ನೂ ತಮ್ಮ ಅಡಳಿತಕ್ಕೆ ತಂದುಕೊಂಡು, ಭಾರತೀಯರಿಗೆ ನಡೆಯುವದನ್ನು ಕಲಿಸಿಕೊಟ್ಟರು ರಾಷ್ಟ್ರಗಳು ಕ್ಷಮೆಯಿಂದ ವಸಾಹತುಗಳನ್ನು ಪಡೆಯುವದು ಸುಳ್ಳು. ಆ ರಾಷ್ಟ್ರಗಳು ಕರಿಯ ಜನರಿಗೆ ನಾಗರಿಕತೆ ಸಂಸ್ಕೃತಿಗಳೆಂಬ ಬಿಳಿಯ ಬಂಗಾರಿಳಿಯಲು ಹೋಗುತ್ತಿವೆ ಅವರಿಗೆ ಸ್ವರಾಜ್ಯದ ಮಾಹಿತಿ ತಿಳಿಸುತ್ತಾರೆ. ಯುರೋಪಿನ ರಾಷ್ಟ್ರಗಳು ಈ ಉದಾರ, ಅಶಕ್ತ ತತ್ವವನ್ನಾಚರಿಸಿದ್ದರಿಂದಲೇ, ವಸಾಹತುಗಳು ತಿರಿಗಿ ಬಿದ್ದು, ಯೂರೋಪಿನ ರಾಷ್ಟ್ರಗಳನ್ನು ತೆಗೆದೊಗೆಯುತ್ತವೆ.'

—೦೦೦—

## ಹಿಟ್ಲರನಿಗೆ ಒಂದೇ ಉತ್ತರ.

**ಕೆ. ಎಫ್. ನರಿಮನರ ಪ್ರಕಟಣೆ**

**ಜರ್ಮನ್ ಸರಕುಗಳನ್ನು ಬಹಿಷ್ಕರಿಸಿರಿ.**

ಹಿಂದುಸ್ಥಾನವು ತನ್ನ ಮಾನ ಕಾಯ್ದುಕೊಳ್ಳಬೇಕಿದ್ದರೆ ಈಗ ಜಾಗ್ರತವಾಗಿ ಹಿಟ್ಲರನಿಗೆ ಯೋಗ್ಯ ಉತ್ತರ ಕೊಡಲೇ ಸಂಘಟಿತವಾಗಬೇಕು. ಜರ್ಮನಿಯ ವಸಾಹತು ಸಾಮ್ರಾಜ್ಯದ ಅಡ್ಡ ಹೋಗುವದು ಹಿಂದುಸ್ಥಾನದ ಇಚ್ಛೆ ಇಲ್ಲ. ಅಂಮೇಲೆ ತಮ್ಮ ಜಗಳದಲ್ಲಿ ಹಿಟ್ಲರನು ಹಿಂದೂಸ್ಥಾನದ ಹೆಸರು ಸುಮ್ಮ ಸುಮ್ಮನೆ ತಂದದ್ದೇಕೆ? ಜಾತಿ, ಪಂಥ ಭೇದಗಳನ್ನಣಿಸದೆ ಎಲ್ಲರೂ ಒಕ್ಕಟ್ಟಾಗಿ ಜರ್ಮನಿಯ ಸರಕುಗಳನ್ನು ಬಹಿಷ್ಕರಿಸಬೇಕು. ಮತ್ತು ಇಡೀ ಜರ್ಮನಿ ದೇಶವು ಸರ್ವಾಧಿಕಾರಿಯ ಭಾಷಣವು ತನಗೆ ಸನ್ಮತವಿಲ್ಲೆಂದು ಸಾರುವರೆಗೆ ಬಹಿಷ್ಕಾರ ಚಳವಳಿಯನ್ನು ಹೀಗೆಯೇ ಸಾಗಿಸಬೇಕು. ಇದು ಹಿಟ್ಲರನಿಗೆ ಯೋಗ್ಯವಾದ ಉತ್ತರವಾಗುವುದು.

# ನಮ್ಮವರೇ ತಾವಾಗಿ ತಂದುಕೊಂಡ ಕ್ಷಾಮ.

## ಕವೀಂದ್ರ ರವೀಂದ್ರರ ಅಭಿಪ್ರಾಯಗಳು.

### ಕೊಟ್ಟಿದ ಅಕ್ಕಿ.

ಜನರ ಆಹಾರವು ಸತ್ವವಿಲ್ಲದ ದಾರಯನ್ನು ಹಿಡಿಯಲು ಪ್ರಾರಂಭಿಸಿತೆಂದರೆ, ಪರದೇಶದವರು ಯಾರೂ ಮಾಡದಷ್ಟು ರಾನಿಯು ನಮಗೆ ಅದರಿಂದ ಉಂಟಾಗುತ್ತವೆ ನಮ್ಮ ದೇ ದ ಸ್ಥಿತಿ ಹಾಗಾಗಿದೆ. ಅನೇಕ ಶತಮಾನಗಳಿಂದ ಅಕ್ಕಿಯು ನಮ್ಮ ಮುಖ್ಯ ಆಹಾರವಾಗಿದೆ. ಅದರಿಂದ ನಾವು ಶಕ್ತಿಯ ನ್ನೂ, ಸತ್ವವನ್ನೂ ಆರೋಗ್ಯವನ್ನೂ ಹೊಂದುತ್ತಿದ್ದೇವೆ ಆ ಪರೆ ನಮ್ಮ ಮೇಲೆ ತಾಗಿತಿಯು ಜನರಲ್ಲಿ ಒಂದು ವಿಚಿತ್ರವಾ ನ ಮಾಧ್ಯ ತಲೆಹಾಕಿಕೊಂಡಿದೆ. ಅದರಿಂದ ಅವರು ಈ ಅ ನಾರೋಗ್ಯವಾದ ಆಹಾರದ ಸತ್ವವನ್ನೇ ನಾಶಗೊಳಿಸುವ ಅಭ್ಯಾ ವನ್ನು ಪ್ರಾರಂಭಿಸಿಕೊಂಡಿದ್ದಾರೆ. ದೇಶದಲ್ಲೆಲ್ಲಾ ಭತ್ತದ ಯಂತ್ರಗಳು ಹೆಚ್ಚಾಗಿವೆ. ಅವು ಯವರಾಜನ ಬಾವುಟಗ ಂತೆ ಮಲೇರಿಯಾ ಕಾಲರಾ ಮುಂತಾದವುಗಳನ್ನು ದೇಶದ ಕೋಲೆಲ್ಲಾ ಹಂಡುತ್ತಾ ಜನರಿಗೆ ದೊಂಕುವ ಆಹಾರದ ಸತ್ವ ನ್ನು ಕದಿಮೆ ಮಾಡುತ್ತಿವೆ. ನಾವು ಅಕ್ಕಿಯ ಸತ್ವ ಹಾಣ ರೂಡಲು ಅದನ್ನ ಕುದಿಸಿ ಬೇಯಿಸುವುದಲ್ಲದೆ ಅದರ ಸಿಪ್ಪೆ ಯನ್ನೂ ಹೊಟ್ಟನ್ನೂ ಯಂತ್ರಗಳಲ್ಲಿ ಪಾಲಿಷ್ ಮಾಡಿ ನಾಶ ಗೊಳಿಸುತ್ತೇವೆ.

ಮೊದಲೇ ತಕ್ಕಷ್ಟು ಹಾಲು, ತುಪ್ಪ ಮುಂತಾದ ಆಹಾರ ಸಾಮಗ್ರಿಗಳಿಲ್ಲದೆ ನರಳುತ್ತಿರುವ ಜನರು, ಬೀದಿಯಲ್ಲಿ ಹೋಗುವ ಮೂರಿಯನ್ನು ಮಗೆ ಹೊಗಿಸಿಕೊಂಡಿರುತೆ, ಹೋ ಗಿಸಿಕೊಂಡಿರುವ ಕ್ಷಾಮ ಇದು.

ಈ ಕೇಡನ್ನು ತಪ್ಪಿಸಲು ಸರಕಾರದವರು ಕಾನೂನು ಮಾ ಡಬೇಕೆಂದು ಪ್ರಯತ್ನಿಸಿದ್ದರೆಂದು ಕೇಳಿದೆ. ಅದು ಜಯಶೀ ಲವಾಗದಿದ್ದಂದ ನನಗೆ ಸಂತೋಷವೇ ಆಯಿತು. ಯಾ ಕೆಂದರೆ ಒನ್ನು ಎಂದೆಂದಿಗೂ ಮಕ್ಕಳೇ ಅಲ್ಲ. ಅವರ ಅವಿ ವೇಕವನ್ನು ನಾಶಮಾಡಿ ಅವರನ್ನು ಯಾವಾಗಲೂ ಸುಂಕ್ಕಿ ಯಿತ್ತಿರಲು ಅವರಿಗೆ ಈದ್ದಾದಿಯಂ ಅವಶ್ಯಕತೆಯಿಲ್ಲ. ನಮ್ಮ ಆರೋಗ್ಯಕ್ಕೂ ಶಕ್ತಿಗೂ ಅವಶ್ಯಕವಾದ ಆಹಾರವನ್ನು ಆರಿಸಿ ಕೊಳ್ಳುವುದು ನಮ್ಮ ಕೆಲಸವಾಗಿರಬೇಕು. ಯಂತ್ರಗಳನ್ನೂ ಯಂತ್ರದ ಗಾಣಗಳ ಪಶುಶಕ್ತಿಯನ್ನೂ ಉಪಯೋಗಿಸುವುದು. ನಮ್ಮ ಸತ್ವಕ್ಕೆ ಹಾನಿಯೆಂಬುದನ್ನು ಜನರು ತಾವೇ ತಿಳಿದು ಕೊಳ್ಳಬೇಕು.

ಸತ್ವಪೂರ್ಣವಾದ ಆಹಾರ ಸೇವನೆಯಿಂದ ದೊರೆಯುವ ರೋಗಶಕ್ತಿಯ ಬೆಲೆಯೂದುದು. ಜನರ ಸಂವಾದನಾ ಶಕ್ತಿ ಯನ್ನೂ ಅದು ಹೆಚ್ಚಿಸುತ್ತದೆ. ಮತ್ತು ಈ ಕಬ್ಬಿಣದ ರಕ್ತ ವನ್ನು, ನಾಗರೀಕರು ವರ್ಷಗಳಿಂದ ನಡೆದು ಬರುತ್ತಿದ್ದ ನಮ್ಮ ತಪ್ಪಿಗಾಡಿನವರು ಒಂದು ತುತ್ತು ಅನ್ನವನ್ನೂ ನಿರ್ದಾಯದಿಂದ ಹಿಸಿಯುತ್ತಿರುವುದನ್ನೂ ನಾವು ಜ್ಞಾಪಕದಲ್ಲಿ ಇಟ್ಟು ಕೊಳ್ಳಬೇಕು. ಈ ಬಾಡರಿಯಣ ಕಾಲದಿಂದ ಒಂದ ಪದ್ಧ ತಿಯನ್ನು ನಾವು ಬಿಟ್ಟುದು ಸುಮಾರು ವಿನ ನಡೆದಿದೆ. ಗಲ್ಲ ಬುಗಳಲ್ಲಿ ನಿರುದ್ಯೋಗ, ಹಸಿವು ತುಂಬಿಕೊಂಡಿದೆ.

ಕೈಯಲ್ಲಿ ಕುಟ್ಟಿದ ಅಕ್ಕಿಯನ್ನೇ ಉಪಯೋಗಿಸುತ್ತೇವೆ. ಮೂ, ಅದರ ಸತ್ವವು ನಾಶವಾಗಲು ಅವಕಾಶ ಕೊಡುವುದಿಲ್ಲ ವೆಂದೂ ಪ್ರತಿಜ್ಞೆಮಾಡುವ ಸ್ವಯಂಸೇವಕರು ಗುಂಪೊಂದು ಸಿಕ್ಕಿಲಾರದೆ? ನಾವಲ್ಲಾ ಪ್ರತಿದಿನವೂ ಮನೆಯಲ್ಲಿ ನಡೆಸುತ್ತಿ ರುವ ಈ ಆತ್ಮಹತ್ಯೆ ಪ್ರಯತ್ನವನ್ನು ನಮ್ಮ ದೇಶದ ದೊಡ್ಡ ರೋ ಗದ ಪ್ರಚಾರವೆಂಬುದು ಅವರ ಮನಸ್ಸಿಗೆ ಹತ್ತಲಾರದೆ?

* *

### ಮಾನವನ ಪ್ರಕೃತಿ.

'ನಮಗಳ ಅಂತರಾತ್ಮದಲ್ಲಿ ಸತ್ಯಾನಂದದ ದೀಗುವೊಂ ದಿದೆ. ನಮ್ಮ ಸುತ್ತಮುತ್ತಲಿರುವ ಹೋರಾಟದ ಗೊಂದಲಕ್ಕೆ ಸಿಕ್ಕಿಬಿದ್ದ ನಾವು ನಮ್ಮ ಹೃದಯದಲ್ಲಿರುವ ಈ ಅಮೂಲ್ಯ ನಿಕ್ಷೇಪವನ್ನು ತಿಳಿದುಕೊಳ್ಳಲಾರದ ಅತ್ಮವಂಚಿತರಾಗುತ್ತೇವೆ ಪರಮಾತ್ಮನ ದಿವ್ಯ ಸೌಂದರ್ಯವು, ಪರಮಾನಂದವು, ಪರಮ ವೈಭವವು ಸೂರ್ಯೋದಯದಲ್ಲೂ ಸೂರ್ಯಾಸ್ತಮಯದಲ್ಲೂ, ಅನಂತವಾದ ಗಗನ ಗಾಂಭೀರ್ಯದಲ್ಲೂ, ಅನಂತವಾದ ಜೀ ವಿಯ ವೈವಿಧ್ಯತೆಯಲ್ಲೂ ನನಗೆ ಪ್ರತ್ಯಕ್ಷವಾಗಿ ನಿಂತಿ ರುತ್ತದೆ. ಬಾಹ್ಯಜೀವನ ಸಂದರ್ಭಗಳೇನೇ ಇರಲಿ ಇವು ಮಾತ್ರ ತಮ್ಮ ಪ್ರಭಾವವನ್ನು ಜೀವನದ ಮೇಲೆ ಕಡಿಮೆ ಮಾ ಡುವುದಿಲ್ಲ.

'ಮನುಷ್ಯನೊಬ್ಬ ಚಿರಯಾತ್ರಿ, ಕಲ್ಪ ಕಲ್ಪಗಳಿಂದಲೂ ತ ನ್ನ ಯಾತ್ರೆಯನ್ನು ಮಾಡುತ್ತಲೇ ಇದ್ದಾನೆ. ಆದರೆ 'ಈ ಯಾತ್ರೆಯ ಕಡೆಯೆಲ್ಲಿಗೆ?' ಎಂಬ ಅನಂತವಾದ ಪ್ರಶ್ನೆಯು ಅವನನ್ನು ಹೆಜ್ಜೆ ಹೆಜ್ಜೆಗೂ ಬಾಧಿಸುತ್ತಿದೆ. ಈ ತವಕವು ಜೀ ವನಯಾತ್ರೆಯ ಉದ್ದಿಷ್ಟಸ್ಥಾನವಾವುದೆನ್ನುವುದನ್ನ ವಾಚಾ ಪ್ರಕಾಶಪಡಿಸುವುದರಿಂದಲಾಗಲಿ, ಬುದ್ಧಿಯಿಂದ ವಿಚಾರ ಮಾ ಡುವುದರಿಂದಲಾಗಲಿ ತೃಪ್ತಿಗೊಂಡು ಶಾಂತಿಯನ್ನು ನೀಡುವು ದಿಲ್ಲ. ಆ ತವಕ್ಕವು ಆ ಯತವುನೇ ಅನ್ಯಕ್ಕೆ ಸಕ್ಕಾಸಾಧ್ಯವಾದ ಸೌಂದರ್ಯ ಕಾತರತ್ವೆಯು ಜ್ಞಾನಸಾಧನೆಯ ಪಥವನ್ನು ತೋರಿಸುವುದರಿಂದ ಪ್ರಾಪ್ತ ಶಾಂತಿಯನ್ನಾದೀತು ಈ ಯೊ ತ್ಯಾಶ್ರಯವು ಸಾರ್ಥಕವಾಗಬೇಕಾದರೆ ತ್ಯಾಗ ವೈರಾಗ್ಯಗಳ ಮಧುವಾ ನವೇಕು ಅದೊಂದೇ ಆನಂತಾನಂದದ ಅನುಭೋಗಕ್ಕೆ ಮಾ ರ್ಗ ವಿಕ್ಕುದಿಲ್ಲ ನಿಶ್ಚಯ

'ಈಗ ಅಸಂಖ್ಯಾತವಾಗಿ, ಅನಂತರೂಪ, ಅನೇಕ ವ್ಯಾಜ ಗಳಿಗಾಗಿ ನಾವಧೆಯು ನಡೆಯುತ್ತಿದೆ. ಇದಕ್ಕೆಲ್ಲ ಕೃಪಣ ತೆ, ಲೋಭವೇ ಕಾರಣ. ಜ್ಞಾನಿಗಳಾದ ನಮ್ಮ ಋಷಿಗಳು, ಮುಮುಕ್ಷುಗಳು ಮಾನವ ವೈಕ್ಷಕ್ಕೆ 'ವಾಗೃಧಾ' ಎಂಬ ಮಂತ್ರವು ಅಶ್ಯನಶ್ಯಕವೆಂದು ಹೇಳಿದ್ದಾರೆ. ಇ ದರ ಸಾರ್ಥಕತೆಯ ವೈಶಿಷ್ಟ್ಯವನ್ನು ಈಗ ನಾವು ಕಂಡುಕೊ ಳ್ಳಬಹುದು. ಮತ್ತೊಬ್ಬರ ಒಡವೆಗೆ ಆಶೆ, ಅತಿ ಆಶೆಗಳನ್ನು ಬಿಟ್ಟರೆ ಸ್ವಪಂಚದ ಕಷ್ಟದೌಖಾಗಳು ಅರ್ಧ ಹೋಗುತ್ತವೆ.'

'ವಿ ಕ'

---

## ಸಂತಾನ ನಿರೋಧ ಸಾಧನೆಯೋ ಮೃತ್ಯುಪಾಶವೋ!

ಲೇಖಕರು:—ವೈದ್ಯಭಾನು ಶ್ರೀ. ಡಿ. ಕೆ. ಭಾರದ್ವಾಜ, ಎಂ. ಡಿ. (ಆಯುರ್ವೇದ) ಬೆಂಗಳೂರು.

ಈ ನವೀನ ನಾಗರೀಕತೆಯು ಹೆಸರಿನಲ್ಲಿ ಸಾಮಾಜಿಕ ಜೀ ವನದಲ್ಲಿ ಅನೇಕ ಬದಲಾವಣೆಗಳು ಆಗುತ್ತಿವೆ ಕಾಲ ಚ ಕ್ರವು ಸುತ್ತಿದಂತೆ ಪೂರ್ವದ ಸೂರ್ಯನು ಪಶ್ಚಿಮಕ್ಕೆ ಹೋಗು ವನು, ಪಶ್ಚಿಮದವನು ಮತ್ತೆ ಪೂರ್ವಕ್ಕೆ ಬರುವನು ಹೀಗಿ ರುವಾಗ ಅದೇ ಕಾಲಚಕ್ರದ ಸುಳಿಗೆ ಸಿಕ್ಕಿ, ಕಾಲ ಚಕ್ರದಂತೆ ಸುತ್ತುತ್ತಿರುವ ಈ ಪೃಥ್ವಿಗೋಳ ಮತ್ತು ಅದರಲ್ಲಿರುವ ಅ ನೇಕ ರಾಷ್ಟ್ರಗಳ ಇತಿಹಾಸವೂ ಚಕ್ರನೇಮಿ ಕ್ರಮದಿಂದಲೇ ಬದಲಾಗುತ್ತಿರುವುದು. ಈ ಇತಿಹಾಸವನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಮಾನವ ಸಮಾಜದ ಉತ್ಕೃಷ್ಟತೆಯು ಬಗೆಯನು ನೋಡಿ ಸಮಾಜದಲ್ಲಿ ಯಾವುದಾದರೊಂದು ಪ್ರತಿಷ್ಠಿತ ವ್ಯಕ್ತಿ ಅಥವಾ ತತ್ಕಾಲಕ್ಕೆ ಪ್ರಬಲವೆನಿಸುವ ರಾಷ್ಟ್ರವು ತನ್ನ ಜೀವ ನ ಕ್ರಮವನ್ನು ಹೇಗೆ ನಡಿಸುವುದೋ ಹಾಗೆ ಸಮಾಜವು ಅಥ ವಾ ಬೇರೆ ರಾಷ್ಟ್ರವು ಅನುಸರಿಸಲೆಚ್ಚಿಸುವುದು ಆ ಬಗೆಯ ಜೀವನದ ಬದಲಾವಣೆಯಲ್ಲಿ ಆ ಸಮಾಜದ ಅಥವಾ ರಾಷ್ಟ್ರದ ಪೂರ್ವ ಸಂಸ್ಕೃತಿಯು ನಿರರ್ಥಮವಾಗಿ ಹೋಗಬಹುದು ಆದರೆ ಆ ಸಂಸ್ಕೃತಿಯು ಸನಾತನ ನಿಯಮೂಧಾರವುಳ್ಳದಾಗಿ ದ್ದರೆ ಬೇರೆ ರಾಷ್ಟ್ರ, ಸಮಾಜಗಳ ಮೇಲೆ ತನ ಪ್ರಭಾವವ ನ್ನು ಬೀರಬಹುದು. ಈಗ ನಮ್ಮ ಭಾರತ ವರ್ಷವನ್ನೇ ಉ ದಾಹರಣೆಗಾಗಿ ತೆಗೆದುಕೊಂಡರೆ, ಭಾರತ ದೇಶದ ಅನೇಕ ಸು ಶಿಕ್ಷಿತ ಸ್ತ್ರೀ ಪುರುಷರಿಗೆ ಪಾಶ್ಚಾತ್ಯ ದೇಶವೇ ಆದರ್ಶವಾಗಿದೆ.

ಆದರೆ ಈಗ ಅಲ್ಲಿ ಅನುಭವಿಗಳೆನಿಸಿದ ಶಾಸ್ತ್ರಜ್ಞರು ಪಾ ಶ್ಚಾತ್ಯ ಸಂಸ್ಕೃತಿಯ ಕಡೆಗೆ ನೋಡಲಾರಂಭಿಸಿರುವ ಸಂಗತಿಗ ಳನ್ನು ನಮ್ಮ ಸುಶಿಕ್ಷಿತ ಸ್ತ್ರೀ ಪುರುಷರು ತಿಳಿಯಲಿಚ್ಛಿಸುವುದಿ ಲ್ಲ. ನಾವೀನ್ಯವೆಲ್ಲದೆಯೋ ಅಲ್ಲಿ ಆಕರ್ಷಣೆ ಹೆಚ್ಚಾಗಿರು ವುದು ಸಹಜ. ಆದರೆ ನಮಗೆ ನವೀನವೆನಿಸಿದ ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಪಾಶ್ಚಾತ್ಯರು ಮುಳುಗೆದ್ದು, ಆ ಬಗೆಯ ಸಂ ಸ್ಕೃತಿಯಲ್ಲಿ ಅವರಿಗೆ ಬೇಸರವಾಗಿ ಅವರು ತಮ್ಮ ಸಾಮಾಜಿ ಕ ಜೀವನದಲ್ಲಿ ಪೌರ್ವಾತ್ಯ ಸಂಸ್ಕೃತಿಯ ಕೆಲವು ಸೂತ್ರಗ ಳನ್ನು ಜೀವನ ಸವುಕರ್ಯಕ್ಕಾಗಿ ಸೇರಿಸಿಕೊಳ್ಳಲಪೇಕ್ಷಿಸುತ್ತಿ ರುವರುವರು. ಆದರೆ ನಮ್ಮ ದೇಶದ ರಾಜಕೀಯ ಪಾಶ್ಚಾತ್ಯ ಶಾಸ್ತ್ರಜ್ಞರು ಅನುಭವದ ಮೇರೆ ತ್ಯಾಜ್ಯವೆಂದು ಸಾರಿರುವ ಪಾಶ್ಚಾತ್ಯ ಸಂಸ್ಕೃತಿಯ ಸೂತ್ರಗಳನ್ನು ತಮ್ಮ ಜೀವನ ಸವುಕರ್ಯಕ್ಕಾಗಿ ಅನುಸರಿಸಬೇಕೆನ್ನುವರು.

ಹಿಂದೆಮ್ಮೆ ಪಾಶ್ಚಾತ್ಯ ದೇಶದಲ್ಲಿ ಜನಸಂಖ್ಯೆಯು ತಾ ತಮ್ಮ ರಾಷ್ಟ್ರದಲ್ಲಿ ಹೆಚ್ಚುತ್ತಿರುವುದನ್ನು ಕಂಡು ಭಾವೀ ಸಂತಾನವನ್ನು ಪೋಷಿಸುವ ಬಗೆ ಹೇಗೆ ಎಂಬ ಯೋಚನೆ ಹುಟ್ಟಿ ಸಂತಾನ ನಿರೋಧ ಕ್ರಮದ ಸಂಶೋಧನೆಗೆ ಮೊದಲಾ ಯಿತು. ಆಗ ಪೃಥ್ವಿಯು ವಿಶಾಲವಾಗಿತ್ತು. ಆದ್ದರಿಂದ ತಮ್ಮ ಭಾವೀ ಸಂತಾನಕ್ಕೆ ಆ ಭಾಗವನ್ನು ಒಪ್ಪಿಸಬಹುದೆಂಬ ಯೋಚನೆ ಇದ್ದಿರಬಹುದು—ಸರಿ. ಗರ್ಭ ನಿರೋಧಕ ಸಾಧ ನೆಗಳು ಹುಟ್ಟಿದವು ನಾಗರೀಕತೆಯು ಹೆಚ್ಚಿತು. ಶಾಸ್ತ್ರ ಸಂಶೋಧನೆಗಳು ಬೆಳೆದವು. ಸರಿಯಾದ ಯುದ್ಧ ಸಾಮಗ್ರಿ ಗಳಿಲ್ಲದ ಜನಾಂಗವನ್ನು ಶಾಸ್ತ್ರೀಯ ಶಸ್ತ್ರ ಸಾಧನೆಗಳಿಂದ ನಿ ರ್ಮೂಲಗೊಳಿಸಿ ಅಲ್ಲಿ ತನ್ನ ರಾಜ್ಯವನ್ನು ವಿಸ್ತರಿಸಬಹುದೆಂ ಬ ಆಲೋಚನೆಯು ಅವರಿಗೆ ಇರಲಿಲ್ಲ. ಈಗ ಅವರಿಗೆ ಪ್ರಪಂಚದಲ್ಲೆಲ್ಲ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಬೇಕೆಂಬ ಯೋಚನೆ ಹುಟ್ಟಿದೆ. ಈಗ ಅವರಿಗೆ ಜನಸಂಖ್ಯೆಯು ಹೆಚ್ಚ ಬೇ ಕಾಗಿದೆ ಈಗ ಹಿಂದೆ ತಾವು ಮಾಡಿದ ಗರ್ಭ ನಿರೋಧ ಕ್ರಿಯೆಗಳನ್ನು ಖಂಡಿಸಿ ಹೆಚ್ಚು ಮಕ್ಕಳುಳ್ಳವರಿಗೆ ಬಹುಮಾನ ಕೊಡಲಾರಂಭಿಸಿದ್ದಾರೆ. ಈ ಗರ್ಭ ನಿರೋಧ ಕ್ರಿಯೆಗಳಿಂದ ಹೆಂಗಸರಲ್ಲಿ ಒಂಜೆತನ ವಾತ್ಯವಲ್ಲದೆ ಬೇರೆ ಗರ್ಭ ಕೋಶ ಮ ತ್ತು ಯೋನಿ ರೋಗಗಳು ಸಂಭವಿಸುವವೆಂದು ಡಾ. ಫೆಕ್ಟ್ ಎಂಬಾತನು ಅನೇಕ ರೋಗಿಗಳನ್ನು ಪರೀಕ್ಷಿಸಿ ಕಂಡು ಹಿಡಿದಿ ರುವನು ಆ ವಿಚಾರವನ್ನು ಅಮೇರಿಕದ 'ದಿ ಜರ್ನಲ್ ಆಫ್ ದಿ ಅಮೇರಿಕನ್ ಮೆಡಿಕಲ್ ಅಸೋಸಿಯೇಷನ್'ನಲ್ಲಿ ಪ್ರಕಟಿಸಿ ರುವರು. ಅದನ್ನು ಇಲ್ಲಿ ನಮ್ಮ ವಾಚಕರಿಗಾಗಿ ಪ್ರಕಟಿಸಲಾಗಿ ದೆ:—'ಪುರುಷನ ವೀರ್ಯ ಜೀವಾಣು (Spermatoza) ಗಳ ಚೈತನ ಶಕ್ತಿಯನ್ನು ಕಡಿಮೆ ಮಾಡಿ, ಅದರಿಂದ ಗರ್ಭಕೋಶದ ಜರ್ನು ದ ಪೊರೆಗೆ ಅಪಾಯವುಂಟಾಗುವುದು, ಮತ್ತೆ ಅದರಿಂದ ಶ್ವೇ ತಪ್ರದರವೆಂಬ (ಬಿಳುಪು ಹೋಗುವ) ರೋಗವೂ ಬರುವುದು ಮತ್ತೆ ಗರ್ಭ ಕೋಶದ ಹಳೆಯ ಬಾವು ಉಂಟಾಗಿ ಅದು ಗ ರ್ಭನಾಳಗಳಿಗೂ ಹರಡಿ, ಆ ನಾಳದ ವರ್ಗವನ್ನು ಕಟ್ಟಿ, ಶು ಶ್ರೂತವಾದ ಬಂಜೆತನವನ್ನೂ ಅದು ಉಂಟು ಮಾಡಬಹುದು 1925ನೆಯ ಇಸವಿಯಿಂದ ಡಾ. ಫೆಕ್ಟರು 350 ಜನ ಸ್ತ್ರೀಯರ ರನ್ನು ಪರೀಕ್ಷಿಸಿದುದರಲ್ಲಿ 150 ಜನರ ಬಂಜೆತನಕ್ಕೆ ಈ ರ ಸಾಯನಿಕ ದ್ರವ್ಯಗಳ ಉಪಯೋಗವೇ ಮೂಲ ಕಾರಣವಾ ಗಿಯೂ, 200 ಜನರ (ಮೊದಲು ಮಕ್ಕಳನ್ನು ಪಡೆದ ಮೇಲೆ ಉಂಟಾದ) ಬಂಜೆತನಕ್ಕೆ ಈ ರಸಾಯನಿಕ ಸಾಧನಗಳೇ ಕಾರ ಣವಾಗಿಯೂ ಕಂಡು ಬಂದಿತು. ಇವೆರಲ್ಲದೆ ಬೇರೆ 275 ಮಂದಿ ಸ್ತ್ರೀಯರಿಗೆ ಗರ್ಭಕೋಶದ ಕಂಠದ ಹಳೆಯ ಬಾವು ಬಂದಿದ್ದಕ್ಕೆ ಈ ಡಾಕ್ಟರು ಚಿಕಿತ್ಸೆ ನಡೆಸಿದರು. ಇವರೆಲ್ಲ ರೂ ಹೆಚ್ಚು ಕಾಲ ಗರ್ಭ ನಿರೋಧ ರಾಸಾಯನಿಕ ದ್ರವ್ಯಗಳ ನ್ನು (Chemical contraceptives) ಉಪಯೋಗಿಸುತ್ತಿದ್ದ ವರೆ; ಮತ್ತೆ ಬೇರೆ 200 ಜನ ಸ್ತ್ರೀಯರಿಗೆ ಇವರಿಂದ ಗರ್ಭ ನಾಳಗಳ ಬಾವು ಬಂದಿತು. ಈ ರಾಸಾಯನಿಕ ಸಾಧನಗಳಿಂ ದ ಹಳೆ ತುರಿ (ತರಿಕೆ) ಯು ಹೆಚ್ಚುತ್ತ ಬಂದು, ಅಪಾಯವ 'ಕಾರ್ಸಿನೋಮೆ' ಎಂಬ ವ್ರಣ ವ್ಯಾಧಿಯು ಹುಟ್ಟಬಹು ದು. ಅಥವಾ ಗರ್ಭ ಕೋಶದ ಮುಖ ಮತ್ತು ಯೋನಿಯ ಲ್ಲಿ ಈ ರಾಸಾಯನಿಕ ದ್ರವ್ಯಗಳಿಂದಾಗುವ ಬಾವಿನಿಂದಲೂ 'ಕಾರ್ಸಿನೋಮೆ' ವ್ರಣವ್ಯಾಧಿಯು ಬರಬಹುದು. ಮತ್ತೆ ಆ ಡಾಕ್ಟರು ಪರೀಕ್ಷಿಸಿದ ಅನೇಕ ವ್ಯಾಧಿ ವ್ರಣ ಮತ್ತು ಗ ರ್ಭಕೋಶ ವ್ರಣ ವ್ಯಾಧಿಯಲ್ಲಿ ಈ ನಿಧಾನವೇ ಸರಿಯಾಗಿರು ವಂತೆ ಕಂಡು ಬಂದಿದೆ. ಈ ರಸಾಯನಿಕ ಸಾಧನಗಳಿಂದ ಮತ್ತೊಂದು ದೊಡ್ಡ ಅಪಾಯವಾಗುವುದಿದೆ. ಅದನ್ನು ಎಲ್ಲ ರೂ ಲಕ್ಷ್ಯದಲ್ಲಿಡಬೇಕು. ಈ ಸಾಧನಗಳಲ್ಲಿ ವೀರ್ಯ ಜೀ ವಾಣುಗಳ ಚೇತನವನ್ನು ಸಂಪೂರ್ಣವಾಗಿ ನಾಶಗೊಳಿಸುವ ಶಕ್ತಿ ಜೈಕಿಸ್ಯವಿರುವುದಿಲ್ಲ. ಹಾಗಾಗಿ ಅಶಕ್ತ ತತ್ರಾಣವನ್ನು ಕಳೆದುಕೊಂಡ ವೀರ್ಯ ಜೀವಾಣುವಿನಿಂದ ಗರ್ಭಧಾರಣೆಯಾದ ರೆ ಅದರಿಂದ ವಿಕಲಾಂಗ ಸಂತಾನವು ಜನಿಸುವುದು. ಆ ಡಾ ಕ್ಟರು ಪರೀಕ್ಷಿಸಿದ ಅಥವಾ ಸಂತಾನಗಳಲ್ಲಿ ಮೊದಲನೆಯುದು ಶಾರೀರಿಕ ಊನತೆಯುಳ್ಳದ್ದಾಗಿಯೂ ಇದ್ದಿತು. ಮತ್ತೆ ಬೇರೆ ಮೂರು ಊನಾಂಗ ಸಂತತಿಗೆ ಈ ರಸಾಯನಿಕ ಸಾ ಧನವೇ ಮೂಲ ಕಾರಣ ವಾಗಿತ್ತೆಂದು ಕಂಡು ಬಂದಿತು.' ಇ ದನ್ನು ನೋಡಿದ ಮೇಲೆ ಪಾಶ್ಚಾತ್ಯ ದೇಶದಲ್ಲಿ ಪ್ರಚಾರಕ್ಕೆ ಬಂದ ಯಾವುದೊಂದು ಔಷಧಿಯನ್ನೂ ಇಲ್ಲಿ ಉಪಯೋಗ ಸಲಾರಂಭಿಸುವುದು ಸಾಮಾನ್ಯ ಪದ್ಧತಿಯಾಗಿದೆ. ಆದರೆ ಅ ಲ್ಲಿನ ಡಾಕ್ಟರು ತಮ್ಮದೇ ಆದ ವೈದ್ಯಾಲಯಗಳಲ್ಲಿ ಅಂಥವುಗಳ ನ್ನು ತಮ್ಮ ರೋಗಿಗಳ ಮೇಲೆ ಉಪಯೋಗಿಸಿ ಅವರ ಪರಿ ಣಾಮಗಳನ್ನು ಜನರ ಹಿತಕ್ಕಾಗಿ ಡಾ. ಫೆಕ್ಟರಂತೆ ಪ್ರಕಟಿಸುವ ರು. ನಮ್ಮವರಲ್ಲಿ ಅಂಥಾ ಅನುಕೂಲತೆ ಕಾಣೆ ಅಥವಾ ಅನುಕೂಲತೆ ಇದ್ದ ಡಾಕ್ಟರರಿಗೆ ತಾಳ್ಮೆಯು ಕಾಣೆ. ಆದ್ದ ರಿಂದ ಜನರಾದರೂ ಈ ವಿಚಾರದಲ್ಲಿ ಎಚ್ಚರಿಕೆಯನ್ನು ತೆಗೆ ದುಕೊಳ್ಳುವುದು ಉತ್ತಮ. ಮತ್ತೆ ಇದರಲ್ಲಿ ನೈತಿಕಾದಿ ಪ್ರಶ್ನೆಗಳು ಅಡಗಿರುವುದಕ್ಕೂ, ಈ ಗರ್ಭ ನಿರೋಧಕ್ಕೆ ಪ್ರಸಿದ್ಧ ಪಾಶ್ಚಾತ್ಯ ಡಾಕ್ಟರುಗಳು ಕೂಡ ಹೇಗೆ ವಿರೋಧಿಗಳಾಗಿ ದ್ದಾರೆಂಬುದಕ್ಕೂ ವಾಚಕರು ಈಗ ತಾನೆ ಮದ್ರಾಸಿನಲ್ಲಿ ಫಾ ದರ್ Basenach, S J. B Sc Ph. d. Loyola College, Madras ಇವರಿಂದ ಪ್ರಕಟಿತವಾದ 'Birth Control—A

(8ನೇ ಪುಟಕ್ಕೆ ಸಾಗಿದೆ)

# ಕೊ ಡ ಗು

ಫೆಬ್ರವರಿ ತಾ. 2ನೇ ಶುಕ್ರವಾರ ೧೯೩೬.


## ೧೯೩೫–೩೫ನೇ ವರ್ಷದ ಕೊಡಗಿನ ಆಡಳಿತ ವರದಿ.

ಕೊಡಗು ಪ್ರಾಂತ್ಯದ 1934—35ನೇ ವರ್ಷದ ಆಡಳಿತ ವರದಿಯ ಪ್ರತಿ ಒಂದು ನಮಗೆ ತಲಪಿದೆ. ಅದು ವಾಡಿಕೆಯ ವಾರ್ಷಿಕ ವರದಿಯಂತಿದ್ದರೂ ಶಿಂಕಿಸುವ ವಿಷಯಗಳು ಅದರಲ್ಲಿ ಇಲ್ಲದಿಲ್ಲ. 'ವರದಿಯ ವರ್ಷದಲ್ಲಿ ಪವನ ಧಾನ್ಯಗಳ ಬೆಲೆಯು ಹಿಂದಿನ ವರ್ಷಕ್ಕಿಂತ ಸ್ವಲ್ಪ ಉತ್ತಮವಾಗಿತ್ತು; ಆದರೂ ಕೂಡ ವಾಡಿಕೆಯ ಧಾರಣೆಗಿಂತ ಕಡಿಮೆಯಾಗಿತ್ತು. ತಮ್ಮ ಜೀವನ ನಡಿಸಲು ವ್ಯವಸಾಯವನ್ನೇ ಅವಲಂಬಿಸಿಕೊಂಡಿದ್ದವರಿಗೆ ಖರ್ಚು ನಿರ್ವಹಿಸಲು ಕಷ್ಟವಾಗಿತ್ತು.' ಎಂದು ಸರ್ಕಾರದವರು ವ್ಯವಸಾಯಗಾರರ ಕಷ್ಟವನ್ನು ಒಪ್ಪಿಕೊಂಡರೂ ಅವರಿಗೆ ಮಾಡಿದ್ದ ಸಹಾಯವೇನು ? ಕಂದಾಯ ಮತ್ತು ಟಕಾವಿ ಸಾಲ ಕಟ್ಟಲು ಹೆಚ್ಚಿನ ಅವಧಿಯು ಕೊಡಲಾಯಿತೆಂದೂ, 1933—34ರಲ್ಲಿ ವಸೂಲಿ ಮಾಡಲು ಬಾಕಿ ಮಾಡಿದ್ದ ಕಂದಾಯದ ಶೇಕಡ ರೂ 9—6—0ಷ್ಟಕ್ಕೆ ಇನ್ನೊಂದು ವರ್ಷದ ಅವಧಿಯ ಮತ್ತು 1934—35ಕ್ಕೆ ಶೇಕಡ 12½ರಂತೆ ತತ್ಕಾಲ ವಸೂಲಿ ಬಾಕಿಯ ರಿಯಾಯಿತಿಯನ್ನು ತೋರಿಸಿದರು. ಸಹಕಾರಿ ಸ್ಪೋರ್ಟಿನಲ್ಲಿ ಭತ್ತ ಇಟ್ಟವರಿಗೆ, ತಮ್ಮ ಭತ್ತವನ್ನು ಮಾರಾಟ ಮಾಡುವ ವರೆಗೆ ಕಂದಾಯ ಕೊಡಲು ಅವಧಿ ಕೊಟ್ಟದ್ದರಿಂದ ಅವರಿಗೆ ಸಾಹಾಯವಾಯಿತೆಂಬುವುದರಲ್ಲಿ ಸಂಶಯವಿಲ್ಲ. ಅಧಿಕಾರಿಗಳು ಇದೇ ರೀತಿ ಮುಂದಕ್ಕೂ ಮಾಡುವರೆಂದು ನಂಬುತ್ತೇವೆ. ಆದರೆ ಸರ್ಕಾರದವರು ಕಂದಾಯದಲ್ಲಿ ತೋರಿಸಿದ ರಿಯಾಯಿತಿಯು ಎಂದೂ ತೃಪ್ತಿಕರವಲ್ಲ ಅದು ರೈತರ ಹೀನ ಸ್ಥಿತಿಗೆ ಸರಿಯಾದುದಲ್ಲ. ಆ ಅಲ್ಪ ಸ್ವಲ್ಪ ರಿಯಾಯಿತಿಯಲ್ಲೂ ಸರ್ಕಾರದವರು ತಮ್ಮ ಉದಾರಭಾವವನ್ನು ಜೆನ್ನಾಗಿ ತೋರಿಸಲಿಲ್ಲ. ಕಂದಾಯದ ಸ್ವಲ್ಪ ಭಾಗದ ಮಾಫಿಯು ತಾತ್ಕಾಲಿಕವಾದದ್ದಾಗಿದೆ. ಅದರಿಂದ ಜನರಿಗೆ ಹೆಚ್ಚಿನ ಸಹಾಯವೇನೂ ಆಗಲಿಲ್ಲ. ಇನ್ನಾದರೂ ಅದನ್ನು ಪಾಂತ್ಯದಲ್ಲಿ ಮಾಡಿರುವಂತೆ ಖಾಯಂ ಮಾಫಿ ಮಾಡುವುದು ಅಗತ್ಯವಾಗಿದೆ.

ಪೊಲೀಸು ಇಲಾಖೆಯಲ್ಲಿ ಒಂದು ಯೋಗ್ಯವಾದ ಬದಲಾವಣೆ ಮಾಡಲ್ಪಟ್ಟಿತು. ಪೊಲೀಸ್ ಡಿಪ್ಪಿ ಸುಪರಿಂಟೆಂಡೆಂಟರು ಡಿಸ್ಟ್ರಿಕ್ಟ್ ಸುಪರಿಂಟೆಂಡೆಂಟರೆಂದು ಕರೆಯಲ್ಪಟ್ಟು, ಪೊಲೀಸ್ ಸುಪರಿಂಟೆಂಡೆಂಟರ ಅಧಿಕಾರವು 1935ನೇ ಜನವರಿ 1 ರಲ್ಲಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಿಂದ ಇವರಿಗೆ ವರ್ಗಾಯಿಸಲ್ಪಟ್ಟಿತು. ಇದು ಒಹು ಮೊದಲೇ ಮಾಡಬೇಕಾಗಿದ್ದ ಬದಲಾವಣೆಯಾಗಿತ್ತು. ಕೇಸು ನಡಿಸುವವರೂ, ಅದನ್ನು ತೀರ್ಮಾನಿಸುವ ಜಡ್ಜರೂ ಒಬ್ಬರೇ ಆಗಿರುವುದು ಎಂದೂ ಸರಿಯಲ್ಲ. ಈ ಸ್ಥಿತಿಯನ್ನು ತಡವಾಗಿಯಾದರೂ ಸರ್ಕಾರದವರು ಅರಿತುಕೊಂಡು ಬದಲಾಯಿಸಿದ್ದು ಉಚಿತವಾಗಿದೆ.

ಸಿವಿಲ್ ಕೋರ್ಟುಗಳಲ್ಲಿ ದಾಖಲಾದ ಕೇಸುಗಳ ಸಂಖ್ಯೆಯು ಇಳಿಯುತ್ತಾ ಬಂದಿದೆ. ಅದು 1932—33ರಲ್ಲಿ 2,596 ಆಗಿದ್ದದ್ದು 1933—34ರಲ್ಲಿ 2,133ಕ್ಕೆ ಇಳಿಯಿತು. ಅದು ಪುನಹ ವರದಿಯ ವರ್ಷದಲ್ಲಿ 1,866ಕ್ಕೆ ಇಳಿದಿದೆ. ಇದಕ್ಕೆ ಜನರ ಆರ್ಥಿಕ ಹೀನಸ್ಥಿತಿಯು ಕಾರಣವಾಗಿರಬಹುದೆಂದು ಸೂಚಿಸಲಾಗಿದೆ. ಈಗಿರುವ ಸಿವಿಲ್ ಕೋರ್ಟುಗಳ ಕೆಲಸವೇ ಒಹು ಕಡಿಮೆಯಾಗಿರುವಾಗ್ಯೆ ಮತ್ತು ಜನರ ಆರ್ಥಿಕ ಸ್ಥಿತಿಯು ಬೇಗನೆ ಉತ್ತಮಗೊಳ್ಳುವ ಚಿನ್ಹೆಗಳೇನೂ ಇಲ್ಲದಿರುವಾಗ್ಯೆ ಹೆಚ್ಚಿಗೆ ಇನ್ನೊಂದು ಸಿವಿಲ್ ಕೋರ್ಟನ್ನು ಸ್ಥಾಪಿಸಲು ಸರ್ಕಾರದವರು ನಿಶ್ಚಯಿಸಿರುವುದು ಯಾರಿಗೆ ತಾನೇ ಆಶ್ಚರ್ಯವನ್ನುಂಟುಮಾಡದಿರುವುದು. ಅದರಲ್ಲೂ ಈಗಿರುವ ಪಿರ್ಜಿಗೇನೇ ಹಣ ಸಾಲದೆ ಸ್ಥಳೀಯ ಸರ್ಕಾರವು ಇಂಡಿಯಾ ಸರ್ಕಾರದಿಂದ ಸಾಲ ಮಾಡಿದ ಆದರೂ ಕೂಡ ಮಡಿಕೇರಿಯಲ್ಲಿ ಒಬ್ಬ ಮುನಸೀಫರನ್ನು ಇಡುವ ಅನಾವಶ್ಯದ ದುಂದುಗಾರಿಕೆಯ ವೆಚ್ಚಕ್ಕಾಗಿ ದೇಶದ ಮುಂದಿನ ಸರ್ಕಾರದ ಮೇಲೆ ಸಾಲದ ಹೊರೆಯನ್ನು ಹೆಚ್ಚಿಸುವುದು ಅನ್ಯಾಯವೂ, ಖಂಡನೀಯವೂ ಆಗಿದೆ.

'ವ್ಯವಸಾಯ ಇಲಾಖೆಯು ಹಿಂದಿನ ವರ್ಷಗಳಂತೆಯೇ ಕೆಲಸ ನಡಿಸಿತು. ಗೋಣಿಕೊಪ್ಪಲು ಒಳಿ ಕಿತ್ತಳೆ ತೋಟದ ಪರೀಕ್ಷಾ ಕ್ಷೇತ್ರವೊಂದು ತೆರೆಯಲ್ಪಟ್ಟಿದೆ; ಅದರ ಫಲಿತಾಂಶವನ್ನು ಇನ್ನು ನೋಡಲಿಕ್ಕಿದೆ.' ಎಂದು ವರದಿಯಲ್ಲಿ ಬರೆಯಲಾಗಿದೆ. ವ್ಯವಸಾಯ ಇಲಾಖೆಯವರ ಈ ಕೆಲಸವು ಎಷ್ಟು ಮಾತ್ರಕ್ಕೂ ತೃಪ್ತಿಕರವಲ್ಲ. ರೈತರ ಆರ್ಥಿಕ ಹೀನಸ್ಥಿತಿಯನ್ನು ಹೋಗಲಾಡಿಸಲು ಆರ್ಥಿಕ ವಿಚಾರಣಾ ಕಮಿಟಿಯವರ ಸಿಫಾರಸ್ಸಿನಂತೆ ಅವರಿಗೆ ದೀರ್ಘ ಕಂತಿನ ಸಾಲವನ್ನು ಒದಗಿಸಿಕೊಟ್ಟರೆ ಸಾಲದು. ಅವರ ಉತ್ಪತ್ತಿಯನ್ನು ಹೆಚ್ಚಿಸುವಂತೆ ಮಾಡಬೇಕು. ಈಗ ಒಂದು ಕಾಳು ಬೆಳೆಯುವಲ್ಲಿ ಎರಡು ಕಾಳಾದರೂ ಬೆಳೆಯುವ ವಿಧಾನವನ್ನು ಅವರಿಗೆ ತೋರಿಸಿಕೊಡಬೇಕು. ಇದು ವ್ಯವಸಾಯ ಇಲಾಖೆಯವರ ಕೆಲಸವಾಗಿದೆ ಕೊಡಗಿನಂಥಾ ವ್ಯವಸಾಯದ ಪಾಂತ್ಯದಲ್ಲಿ ಸರ್ಕಾರದವರು ವ್ಯವಸಾಯದ ಅಭಿವೃದ್ಧಿಗೆ ಏನೊಂದೂ ನಿಗವಿಡದೆ ಇರುವುದು ತುಂಬಾ ವ್ಯಸನಕರವೂ, ನಾಚಿಗೆಗೇಡೂ ಆಗಿದೆ. ರೈತರ ಉದ್ಧಾರವೇ ಸರ್ಕಾರದ ಬಲವೆಂಬುದನ್ನು ಮರೆಯದೆ ಸರ್ಕಾರದವರು ಇನ್ನಾದರೂ ವ್ಯವಸಾಯಾಭಿವೃದ್ಧಿಗೆ ತಕ್ಕಷ್ಟು ಗಮನವನ್ನೀಯುವುದು ಅತ್ಯಗತ್ಯವಾಗಿದೆ.

1934—35ರಲ್ಲಿ ಫಾರೆಷ್ಟು ಇಲಾಖೆಯ ಆದಾಯವು ರೂ. 76,851ರಷ್ಟು ಕಡಿಮೆಯಾಯಿತು; ಆದರೆ ಆ ಇಲಾಖೆಯ ಖರ್ಚು ರೂ. 12,351 ಹೆಚ್ಚಾಯಿತು. ಇದು ವಿಶೇಷವೇ ಸರಿ. ಉತ್ಪತ್ತಿ ಕಡಿಮೆಯಾದರೆ ಖರ್ಚನ್ನೂ ಕಡಿಮೆ ಮಾಡಿದ್ದೇನು ಜಾರಿಗೆ ಬುದ್ಧಿ ಹೇಳುವ ಸರ್ಕಾರದವರೇ ಆದಾಯ ಕಡಿಮೆಯಾದರೂ ವ್ಯಯವನ್ನು ಹೆಚ್ಚು ಮಾಡಿರುವುದು ಯಾವ ತತ್ವವೋ ತಿಳಿಯದು. ಆದರೆ ಅವರನ್ನು ಕೇಳುವವರಾದರೂ ಯಾರು ?

ಅಬ್ಕಾರಿ ಇಲಾಖೆಯ ಉತ್ಪತ್ತಿಯು ರೂ. 14,250 ರಷ್ಟು ಕಡಿಮೆಯಾಗಿತ್ತು. ಇದಕ್ಕೆ ಜನರ ಆರ್ಥಿಕ ದುಃಸ್ಥಿತಿಯೇ ಕಾರಣವಂತೆ. ಆದರೂ ಸಾರಾಯಿ ಅಂಗಡಿಗಳ ಸಂಖ್ಯೆಯನ್ನು 28 ರಿಂದ 29 ಕ್ಕೂ, ಸೇಂದಿ ಅಂಗಡಿಗಳ ಸಂಖ್ಯೆಯನ್ನು 44 ರಿಂದ 45 ಕ್ಕೂ ಮತ್ತು ವಿದೇಶೀ ಅಮಲು ಪದಾರ್ಥ ಅಂಗಡಿಗಳ ಸಂಖ್ಯೆಯನ್ನು 8 ರಿಂದ 9 ಕ್ಕೂ ಏರಿಸಿದ ಸರ್ಕಾರದವರ ತತ್ವವು ಏನಿರಬಹುದೆಂದು ವಾಚಕರು ಊಹಿಸಿಕೊಳ್ಳಬಹುದು. ಜನರು ಎಷ್ಟು ಒಡಕನದಲ್ಲಿ ಬಿದ್ದು ನರಳುತ್ತಿದ್ದರೂ ಅವರಿಗೆ ಕುಡುಕನದ ಅವಕಾಶವನ್ನು ಹೆಚ್ಚಿಸಿಕೊಟ್ಟು, ಆ ಮೂಲಕ ಅವರ ಕಷ್ಟಾರ್ಜಿತ ಹಣದಿಂದ ಸರ್ಕಾರದ ಬೊಕ್ಕಸ ತುಂಬಿಸಬೇಕೆಂಬುದು ಯಾರಿಗಾದರೂ ಯೋಗ್ಯವೇ ? ಇನ್ನಾದರೂ ಸರ್ಕಾರದವರು ಈ ವಿಷಯದಲ್ಲಿ ತಮ್ಮ ಧೋರಣೆಯನ್ನು ಒದಲಾಯಿಸುವರೇ ?

ವಿದ್ಯಾ ಇಲಾಖೆಯಲ್ಲಿ ಹೆಚ್ಚಿನ ಬದಲಾವಣೆಗಳೇನೂ ಇಲ್ಲ. ಎಂಡು ಪೈನುರಿ ಶಾಲೆಗಳಲ್ಲಿ ವೇಲು ತರಗತಿಗಳು ತೆರೆಯಲ್ಪಟ್ಟು, ಅವು ಹಯರ್ ಎಲಿಮೆಂಟರಿ ಶಾಲೆಗಳಾಗಿ ಮಾಡಲ್ಪಟ್ಟವು, ಮತ್ತು ಒಂದು ಖಾಸಗಿ ಶಾಲೆಗೆ ರೂ. 10 ಗ್ರಾಂಟು ಕೂಡಲಾಯಿತು. ಆದರೆ ಸರ್ಕಾರದಿಂದ ಅಂಗೀಕರಿಸಲ್ಪಟ್ಟ ಶಾಲೆಗಳ ಸಂಖ್ಯೆಯು 122ರಿಂದ 121ಕ್ಕೂ, ವಿದ್ಯಾರ್ಥಿಗಳ ಸಂಖ್ಯೆಯು 11,208 ರಿಂದ 11,130 ಕ್ಕೂ ಇಳಿದವು. ಬೇರೆ ಎಲ್ಲಾ ಕಡೆ ವಿದ್ಯಾಭ್ಯಾಸವು ಅಭಿವೃದ್ಧಿಗೊಳ್ಳುತ್ತಿರುವಾಗ್ಯೆ ಕೊಡಗಿನಲ್ಲಿ ಕಡಿಮೆಯಾಗುತ್ತಿರುವುದು ಶೋಚನೀಯ. ಆದರೆ ಹರಿಜನ ವಿದ್ಯಾರ್ಥಿಗಳ ಸಂಖ್ಯೆಯು 348 ರಿಂದ 418 ಏರಿದ್ದು ಸಂತೋಷಕರ. ಇತ್ತಲಾಗಿ ಮೂರು ಹರಿಜನ ಶಾಲೆಗಳನ್ನು ಮುಚ್ಚಿ, ಅವುಗಳನ್ನು ಉತ್ತಮ ಹಿಂದೂಗಳ ಶಾಲೆಗಳೊಂದಿಗೆ ಸೇರಿಸಲು ಡಿಸ್ಟ್ರಿಕ್ಟ್ ಬೋರ್ಡಿನವರು ತೀರ್ಮಾನಿಸಿದ್ದು ಹರಿಜನರ ಮಕ್ಕಳಿಗೆ ದೊಡ್ಡ ಅನ್ಯಾಯವೂಡದಂತಾಗಿದೆ. ತಮ್ಮ ಊರಿನೊಳಗಿದ್ದ ತಮ್ಮ ಪ್ರತ್ಯೇಕ ಶಾಲೆಗಳಿಗೆ ಹೋಗುತ್ತಿದ್ದಷ್ಟು ಹರಿಜನರ ಮಕ್ಕಳು ದೂರ ವಿಶ್ರಶಾಲೆಗಳಿಗೆ ಹೋಗಲಾರರು. ಇದರಿಂದ ಹರಿಜನರ ವಿದ್ಯಾಭ್ಯಾಸಕ್ಕೆ ದೊಡ್ಡ ಧಕ್ಕೆ ಉಂಟಾಗುವುದು.

## ಸಾರ್ವಜನಿಕ ಸಭೆಗಳು.

### ಜಮಾಬಂದಿಯ ಸಂಘದ ಆಶ್ರಯದಲ್ಲಿ.

ಕೊಡಗು ಜಮಾಬಂದಿಯ ಸಂಘದ ಸೆಕ್ರೆಟರಿಯವರು ಈ ಪತ್ರಿಕೆಯ ಮೂಲಕ ಪ್ರಕಟಿಸಿದ್ದ ನೋಟೀಸು ಮೇರೆ, ಕಂದಾಯ ಮಾಫಿ, ಭೂಮಿ ಗಿರ್ವಿ ಬ್ಯಾಂಕು ಮತ್ತು ರಾಜಕೀಯ ಸುಧಾರಣೆಗಳ ವಿಷಯ ಚರ್ಚಿಸಲು ಈ ಕೆಳಗಿನ ಸ್ಥಳಗಳಲ್ಲಿ ಸಾರ್ವಜನಿಕ ಸಭೆಗಳು ನೆರೆದಿದ್ದವು.

### ಸುಂಟಿಕೊಪ್ಪಲು.

ಈ ತಾ. 2ನೇ ಆದಿತ್ಯವಾರ ಮಧ್ಯಾಹ್ನ 2 ಗಂಟೆಗೆ ಸುಂಟಿಕೊಪ್ಪಲು ಕಚ್ಚೇರಿ ಒಳ ಮೈದಾನದಲ್ಲಿ ಸುಂಟಿಕೊಪ್ಪನಾಡಿನ ಗಾಣುಸ್ಥರ ಪಬ್ಲಿಕ್ ಮೀಟಿಂಗು ನಡೆಯಿತು. ಮ. ರಾ. ಕೆ. ಕಾರ್ಯಪ್ಪನವರು ಅಧ್ಯಕ್ಷರಾಗಿದ್ದರು. ಅಧ್ಯಕ್ಷರ ಕೋರಿಕೆ ಮೇರೆ ಜಮಾಬಂದಿ ಸಂಘದ ಪ್ರೆಸಿಡೆಂಟರಾದ ಮ. ರಾ. ಪಿ. ಐ. ಬೆಳ್ಯಪ್ಪನವರು ಕೊಡಗಿನಲ್ಲಿ ಹೊಸದಾಗಿ ಸ್ಥಾಪಿಸಬೇಕೆಂದು ಆರ್ಥಿಕ ವಿಚಾರಣಾ ಕಮಿಟಿಯವರು ಸಿಫಾರಸು ಮಾಡಿರುವ ಭೂಮಿ ಗಿರ್ವಿ ಬ್ಯಾಂಕಿನಿಂದ ದೇಶದ ರೈತರಿಗೆ ಉಂಟಾಗುವ ಪ್ರಯೋಜನಗಳು ಮತ್ತು ಕಷ್ಟ ನಷ್ಟಗಳನ್ನು ಕುರಿತು ಭಾಷಣ ಮಾಡಿದರು. ಭೂಮಿ ಗಿರ್ವಿ ಬ್ಯಾಂಕು ಇಲ್ಲದೇನೇ ಜಮ್ಮ ಎಗ್ಗೈರಿ ರಿಯಾಯಿತಿಯ ಹಿಡುವಳಿಗಳು ಕಂದಾಯ, ತಕಾವಿ ಸಾಲ ಮೊದಲಾದವುಗಳ ಬಾಕಿಗಾಗಿ ಹರಾಜಾಗಿ ಹೋಗುವುದನ್ನು ತಡೆಯುವುದು ಹೇಗೆಂದು ಮುಂತಾಗಿ ಅಧ್ಯಕ್ಷರು ಪ್ರಶ್ನೆ ಕೇಳಿದ್ದಕ್ಕೆ ಬೆಳ್ಯಪ್ಪನವರು ಸಮರ್ಪಕವಾದ ಉತ್ತರವನ್ನಿತ್ತರು. ಮೆ. ಎ. ಯಂ. ಕಾಳಪ್ಪನವರು ಭೂಮಿ ಗಿರ್ವಿ ಬ್ಯಾಂಕಿನಿಂದ ರೈತರಿಗೆ ಪ್ರಯೋಜನಕ್ಕಿಂತ ಹೆಚ್ಚು ಹಾನಿ ಉಂಟಾಗುವುದರಿಂದ ಅದಕ್ಕೆ ಯಾರೂ ಬೆಂಬಲ ಕೊಡಬಾರದೆಂದು ಮಾತಾಡಿದರು. ನಂತರ ಕೆಳಗಿನ ಠರಾವು ಸರ್ವಸಮ್ಮತದಿಂದ ಮಂಜೂರಾಯಿತು.

1. 'ಕೊಡಗಿನಲ್ಲಿ ಭೂಮಿ ಗಿರ್ವಿ ಬ್ಯಾಂಕನ್ನು ಪ್ರತ್ಯೇಕವಾಗಿ ಸ್ಥಾಪಿಸುವುದರ ಬದಲು ದೀರ್ಘ ಕಂತಿನ ಸಾಲ ಕೊಡುವ ವಿಭಾಗವನ್ನು ಸಹಕಾರಿ ಸೆಂಟ್ರಲ್ ಬ್ಯಾಂಕಿನಲ್ಲೇ ಮಾಡುವುದು ಉತ್ತಮವೆಂದು ಈ ಸಭೆಯ ಅಭಿಪ್ರಾಯವಾಗಿದೆ.'

2. 'ಈ ವರ್ಷದ ಬೆಳೆ ಫಸಲು ಉತ್ತಮವಾಗಿಲ್ಲದ್ದರಿಂದಲೂ, ಬೆಲೆಯು ಕಡಿಮೆಯಾಗಿರುವುದರಿಂದಲೂ ಈ ಸಾಲಿನ ಕಂದಾಯದಲ್ಲಿ ಮೂರರಲ್ಲಿ ಒಂದು ಭಾಗವನ್ನು ಮಾಫಿ ಬಿಡಬೇಕೆಂದೂ, ಕಳೆದ ಎರಡು ವರ್ಷಗಳಲ್ಲಿ ತೋರಿಸಿದ ತಾತ್ಕಾಲಿಕ ಕಂದಾಯ ರಿಯಾಯಿತಿಯನ್ನು ಖಾಯಂ ಮಾಫೀ ಮಾಡಬೇಕೆಂದೂ ಈ ಸಭೆಯವರ ಕೋರಿಕೆಯಾಗಿದೆ.' ಎಂಬ ಗೊತ್ತುವಳಿಯನ್ನು ಸಭೆಯ ಮುಂದಿಟ್ಟು ಮೆ. ಪಿ. ಐ. ಬೆಳ್ಯಪ್ಪನವರು ಕೆಲವು ಮಾತುಗಳನ್ನಾಡಿದರು. ಠರಾವು ಏಕ ಮತದಿಂದ ಪಾಸಾಯಿತು.

3. ಮೆ. ಎ. ಯಸ್. ಮಾಚಯ್ಯನವರು ಕೆಳಗಿನ ಠರಾವನ್ನು ಸೂಚಿಸಿದರು—

'ಕೊಡಗಿಗೆ ರಾಜಕೀಯ ಸುಧಾರಣೆಗಳನ್ನೇನೂ ಕೊಡಲು ಏರ್ಪಾಡು ಮಾಡದಿರುವುದು ತುಂಬಾ ಅತೃಪ್ತಿಕರ ಮತ್ತು ಅಸಮಂಜಸಕರ. ಆದುದರಿಂದ ಪೂರ್ಣ ಜವಾಬ್ದಾರಿ ಸರ್ಕಾರ ಪದ್ಧತಿಯನ್ನು ಕೊಡಲು ಕೂಡಲೇ ಏರ್ಪಾಡು ಮಾಡತಕ್ಕದ್ದು.'

ಮೆ. ಪಿ. ಬೆಳ್ಯಪ್ಪನವರು ಈ ಗೊತ್ತುವಳಿಯನ್ನು ಸಮರ್ಥಿಸಿ ಮಾತಾಡಿದ ಮೇಲೆ ಯಾರ ವಿರೋಧವಿಲ್ಲದೆ ಮಂಜೂರಾಯಿತು.

ಅಧ್ಯಕ್ಷರು—ಜಮಾಬಂದಿಯವರ ಸಂಘವು ಹಲವು ವರ್ಷಗಳಿಂದ ದೇಶದ ಜನರ ಅಭ್ಯುದಯಕ್ಕಾಗಿ ಎಡೆಬಿಡದೆ ಪ್ರಯತ್ನಿಸುತ್ತಿರುವುದರಿಂದ ಅದಕ್ಕೆ ಎಲ್ಲರೂ ತಾಲ್ಲೂಕಿಗೆ ಚಂದಾ ಕೊಟ್ಟು ಮೆಂಬರಾಗಬೇಕೆಂದು ಹೇಳಿ, ಆ ಸಂಘದ ಪ್ರೆಸಿಡೆಂಟರಿಗೂ, ನೆರೆದಿದ್ದ ಸಭಿಕರಿಗೂ ವಂದಿಸಿದರು. ಮೆ. ಎ. ಮಾಚಯ್ಯನವರು ಅಧ್ಯಕ್ಷರಿಗೆ ವಂದಿಸಿದ ಮೇಲೆ ಸಭೆಯು ಬರಕಾಸ್ತಾಯಿತು.

### ಸೋಮವಾರಪೇಟೆ.

ಈ ತಾ. 3ನೇ ಸೋಮವಾರ ಮಧ್ಯಾಹ್ನದ ಮೇಲೆ 3 ಗಂಟೆಗೆ ಹೊಸ ಸಂತೆಮೊಳದ ಪಕ್ಕದಲ್ಲಿರುವ ಮೈದಾನದಲ್ಲಿ ಸಾರ್ವಜನಿಕ ಸಭೆಯೊಂದು ಕೂಡಿತು. ಮೆ. ಸಿಂಗೂರು ಮಾದಪ್ಪನವರು ಸಭೆಯ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಜಮಾಬಂದಿ ಸಂಘದ ಅಧ್ಯಕ್ಷರು ಮೀಟಿಂಗಿನ ಉದ್ದಿಶ್ಯವನ್ನು ವಿವರಿಸಿ, ಹೊಸ ವಿಷಯವಾದ ಭೂಮಿ ಅಡವಾನ ಬ್ಯಾಂಕಿನ ಸಾಧಕ ಬಾಧಕಗಳನ್ನು ಕುರಿತು ಸಾಂಗವಾಗಿ ಭಾಷಣ ಮಾಡಿದರು. ನಂತರ ಕಂದಾಯ ಮಾಫಿ ಕೇಳಲು ಇರುವ ತಕ್ಕ ಕಾರಣಗಳನ್ನೂ ಸೂಚಿಸಿದರು. ಭೂಮಿ ಗಿರ್ವಿ ಬ್ಯಾಂಕನ್ನು ಕುರಿತು ಮತ್ತು ಕಂದಾಯ ಮಾಫಿಯ ವಿಷಯ ಮೇಲೆ ಕೂಣಂಗಿಸಿದ (ಸುಂಟಿಕೊಪ್ಪಲಿನ ಮೀಟಿಂಗಿನ ವಿವರದಲ್ಲಿ ಕಾಣಿಸಿದ) ಠರಾವುಗಳು ಸರ್ವಸಮ್ಮತದಿಂದ ಮಂಜೂರಾದವು.

ಆ ಮೇಲೆ ರಾಜಕೀಯ ಸುಧಾರಣೆಗಳನ್ನು ಕುರಿತ ಠರಾವನ್ನು ಸಭೆಯ ಮುಂದಿಟ್ಟು ಮೆ. ಪಿ. ಬೆಳ್ಯಪ್ಪನವರು ಮಾತಾಡುತ್ತಿದ್ದಾಗ್ಯೆ ಮೆ. ಚೌಡ್ಲು ಕಾಳಪ್ಪನವರು ಸಭೆಗೆ ಬಂದು, ಈ ಠರಾವಿಗೆ ಒತ್ತಾಸೆಯಾಗಿ ಭಾಷಣ ಮಾಡಿದರು. ಈ ವಿಷಯದ ಠರಾವೂ ಮೇಲೆ ಕಾಣಿಸಿದ ರೂಪದಲ್ಲಿಯೇ ಮಂಜೂರಾಯಿತು.

ನಂತರ ಭೂಮಿ ಗಿರ್ವಿ ಬ್ಯಾಂಕಿನ ವಿಷಯ ಯಾವ ತರದ ಠರಾವು ಈ ಮೊದಲು ಪಾಸಾಗಿತ್ತೆಂಬುದನ್ನು ತಿಳಿಯದೆ ಮೆ. ಚೌ. ಕಾಳಪ್ಪನವರು ರೈತರಿಗೆ ದೀರ್ಘ ಕಂತಿನ, ಕಮ್ಮಿ ಬಡ್ಡಿಯ ಸಾಲ ದೊರಕಿಸುವಂಥ ಸಂಸ್ಥೆಯೊಂದು ಬೇಕೆಂದು ಮಾತಾಡಿದರು. ಕೂಡಲೆ ಮೆ. ಮಂಗಗನ ಮಲ್ಲಪ್ಪನವರು ಮತ್ತು ಮೆ. ಕುಂದಳ್ಳಿ ಯಸ್. ಚಂಗಪ್ಪನವರು ಭೂಮಿ ಗಿರ್ವಿ ಬ್ಯಾಂಕಿಗೆ ಪೂರ್ಣ ವಿರೋಧಿಸಿ, ದೀರ್ಘ ಕಂತಿನ ಸಾಲದ ವಿಭಾಗವನ್ನು ಸೆಂಟ್ರಲ್ ಸಹಕಾರಿ ಬ್ಯಾಂಕಿನಲ್ಲೇ ಮಾಡುವಂತೆ ಈ ಮೊದಲು ಪಾಸು ಮಾಡಿದ ಠರಾವನ್ನೇ ಸನ್ನಿಧಿಸಿದರು. ಇದಕ್ಕೆ ಮೆ. ಕಾಳಪ್ಪನವರೂ ಒಪ್ಪಿದರು.

ಮೆ. ಮರುಗನ ಮಲ್ಲಪ್ಪನವರು—ಜಮಾಬಂದಿಯವರ ಸಂಘದ ಅಧ್ಯಕ್ಷರು ರೈತರ ಪ್ರಯೋಜನಕ್ಕಾಗಿ ಇಷ್ಟು ಶ್ರಮವಹಿಸಿ ಮೀಟಿಂಗು ನಡಿಸಿದಕ್ಕೂ, ಸಭಿಕರು ತಾಳ್ಮೆಯಿಂದ ಭಾಷಣಗಳನ್ನು ಕೇಳಿದಕ್ಕೂ, ಮೆ. ಮಾದಪ್ಪನವರೂ ಸಭೆಯ ಕಾರ್ಯವನ್ನು ಸಾಂಗವಾಗಿ ನಡಿಸಿಕೊಟ್ಟದ್ದಕ್ಕೂ ವಂದಿಸಿದ ನಂತರ ಮೀಟಿಂಗು ಮುಕ್ತಾಯವಾಯಿತು.

(8ನೇ ಪುಟಕ್ಕೆ ಸಾಗಿದೆ)

# 1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಿಗಳು

## ೧. ಧಾತುಪುಷ್ಟಿ ಲೇಹ

**(ಸುವರ್ಣ, ಸಾಲಾಮಿಶ್ರಿ, ಕಲ್ಮದ, ಮಿಶ್ರ.)**

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೂಡನೆ ಹೊರಹೋಗುವಿಕೆ,




ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನೆಹೋಗಲಾಡಿಸಿ ವೀರ್ಯವೃದ್ಧಿಯನ್ನೂ, ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕ ಶಕ್ತಿಯನ್ನೂ ವೃದ್ಧಿಮಾಡುವುದು. ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು. **ಬಾಟ್ಲಿ 1ರ ರೂಪಾಯಿ 2–8–0. ಬಾಟ್ಲಿ 3ರ ರೂಪಾಯಿ 7—0—0.**

## ೨. ಶತಮುಲ ಮಿಶ್ರಣ

ಅಮೂಲ್ಯವಾದ ಹಲವು ಔಷಧಿಗಳ ಮಿಶ್ರಣದಿಂದ ತಯಾರಿಸಿದ ಶಕ್ತಿವರ್ಧಕ ರಸಾಯನವು. ಈ ಔಷಧಿಯು ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ದೈಹಿಕಶಕ್ತಿಯನ್ನು ಹೆಚ್ಚಿಸಿ ಉತ್ಸಾಹವನ್ನುಂಟು ಮಾಡುವುದು. ಅಶಕ್ತಿಯಿಂದ ಉಂಟಾಗುವ ಎಲ್ಲಾ ದೋಷಗಳನ್ನು ಹೋಗಲಾಡಿಸುವುದು. ಕೆಮ್ಮು, ಉಬ್ಬಸ, ಖಾಸಶ್ವಾಸ, ಕ್ಷಯ, ರಕ್ತಹೀನತೆ, ಒಳಜ್ವರ, ಮಲಬದ್ಧತೆ, ಅರುಚಿ ಇವುಗಳನ್ನು ಹೋಗಲಾಡಿಸಿ ಹಸಿವನ್ನುಂಟು ಮಾಡಿ ದೇಹ ಕಾಂತಿಯನ್ನು ಹುಟ್ಟಿಸುವುದು.

**ಕ್ರಯ 24 ಔನ್ಸು ಬಾಟ್ಲಿ 1ರ ರೂಪಾಯಿ 3.**
**12 ಔನ್ಸು 1—9–0. 8 ಔನ್ಸು 1–2–0.**

## ೩. ಮಲೇರಿಯಾ ನಿವಾರಿಣಿ

ಚಳಿಜ್ವರ, ದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಗೆಡ್ಡೆ ಬಂದ ಜ್ವರ, ಪುರಾಣ ಜ್ವರ, ವಾಯಿದೆ ಜ್ವರ, ಇನ್‌ಫ್ಲುಯೆಂಜಾ, ನಿಮೊನಿಯಾ ಜ್ವರ, ಕಫಜ್ವರ, ಜ್ವರಗೆಡ್ಡೆ, ಮಲಬದ್ಧತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಶಕ್ತಿಯನ್ನು ಉಂಟುಮಾಡುವುದು. ಮಲೇರಿಯಾ ಜ್ವರ ಇರತಕ್ಕ ಪ್ರಾಂತ್ಯಗಳಲ್ಲಿ ವಾಸಿಸುವವರಿಗೆ ಇದಕ್ಕಿಂತಲೂ ಉತ್ತಮವಾದ ಔಷಧಿ ಬೇರೊಂದಿಲ್ಲ.

**ಬಾಟ್ಲಿ 1ರ ರೂಪಾಯಿ 1—8–0. ಸಣ್ಣ ಬಾಟ್ಲಿ 1ರ ಆಣೆ 13.**

## ೪. ಚ್ಯವನಪ್ರಾಶ ಲೇಹ

ಇದು ಅತ್ಯಂತ ಶಕ್ತಿವರ್ಧಕ ರಸಾಯನ. ಸರ್ವ ತರದ ನರಗಳ ದೌರ್ಬಲ್ಯಕ್ಕೂ, ಧಾತು ಕ್ಷೀಣತೆಗೊ, ಕೆಮ್ಮು, ಕಫ, ಉಬ್ಬಸ, ಖಾಸ ಶ್ವಾಸ, ಸ್ವರಭಂಗ, ಎದೆನೋವು, ಕ್ಷಯ ಮೊದಲಾದ ದೋಷಗಳಿಗೆ ಅತ್ಯುತ್ತಮ. ದೇಹಶಕ್ತಿಯನ್ನು ಹೆಚ್ಚಿಸಿ ಆರೋಗ್ಯವನ್ನೂ, ಜೀರ್ಣಶಕ್ತಿಯನ್ನೂ ಅಭಿವೃದ್ಧಿಗೊಳಿಸುವುದು. ಶಕ್ತಿಹೀನರು ಶಕ್ತಿವಂತರಾಗಿ ದೃಢಕಾಯರಾಗುವರು. ಆಬಾಲವೃದ್ಧರೂ ಇದನ್ನು ಪೌಷ್ಟಿಕ ರಸಾಯನವನ್ನಾಗಿ ಸೇವಿಸಬಹುದು.

**ಕ್ರಯ ರಾತಲಿಗೆ ರೂಪಾಯಿ 2–8–0.**
**½ ರಾತಲಿಗೆ ರೂಪಾಯಿ 1—5—0. ¼ ರಾತಲಿಗೆ ಆಣೆ 12**

## ೫. ಕಸ್ತೂರಿಯುಕ್ತ ದಶಮೂಲಾರಿಷ್ಟ

ಇದು ಸೇವಿಸಲಿಕ್ಕೆ ಬಹು ರುಚಿಕರವಾಗಿರುತ್ತದೆ. ಅರುಚಿ, ವಾಂತಿ, ಅಜೀರ್ಣ, ಅಗ್ನಿಮಾಂದ್ಯ, ಅಶಕ್ತಿ, ಕ್ಷಯ, ಕಫ, ಕೆಮ್ಮು, ದಮ್ಮು, ಖಾಸ ಶ್ವಾಸ, ಗ್ರಹಣಿ, ಮೂತ್ರವಿಕಾರ, ಪಾಂಡು, ಕಾಮಲೆ, ಒಳಜ್ವರ ಮೊದಲಾದುವುಗಳನ್ನು ಗುಣಪಡಿಸುವುದು. ಇದನ್ನು ಬಾಳಾಂತಿಯರು ಸಹ ಉಪಯೋಗಿಸಬಹುದು. **24 ಔನ್ಸು ಬಾಟ್ಲಿ 1ರ ರೂಪಾಯಿ 3.**
**12 ಔನ್ಸು ಬಾಟ್ಲಿ 1ರ ರೂಪಾಯಿ 1-8-0.**
**8 ಔನ್ಸು ಬಾಟ್ಲಿ 1ರ ರೂಪಾಯಿ 1—0—0.**

## ೬. ದಂತಕಾಂತಿ ಚೂರ್ಣ

ಆಗಾಗ ಹಲ್ಲುನೋವು ಆಗುವುದು, ವಸಡುಗಳು ಬಾತುಕೊಳ್ಳುವುದು, ಬಾಯಿ ವಾಸನೆ, ಹಲ್ಲಿನಿಂದ ಕೀವು ವ ರಕ್ತ ಬರುವುದನ್ನು ನಿಲ್ಲಿಸಿ, ಹಲ್ಲುಗಳನ್ನು ಮುತ್ತಿನಂತೆ ಶುಭ್ರಪಡಿಸುವುದು.

**ಡಬ್ಬಿ 1ರ ರೂಪಾಯಿ 0—2—6. ಡಜನಿಗೆ 1—12—0.**

## ೭. ಅಶೋಕಾರಿಷ್ಟ ಮತ್ತು ಮಾತ್ರೆ

ಇದು ಸ್ತ್ರೀಯರಿಗೆ ಉತ್ತಮವಾದ ಟಾನಿಕ್. ಋತುಶೂಲೆ, ಕ್ರಮ ತಪ್ಪಿ ಮುಟ್ಟಾಗುವಿಕೆ, ಅತಿರೇಕ ಅಥವಾ ಅತ್ಯಲ್ಪ ಸ್ರಾವ, ಮುಟ್ಟು ಸಂಪೂರ್ಣವಾಗಿ ನಿಲ್ಲುವುದು, ಬಿಳಿದು ಹೋಗುವುದು, ಬಂಜೆತನ, ನಡುವಿನ ನೋವು, ರಕ್ತಹೀನತೆ, ಒಳಜ್ವರ, ತಲೆನೋವು, ಮಲಬದ್ಧತೆ, ಕೈಕಾಲು ಬಚ್ಚಿಕೊಳ್ಳುವುದು, ಅಕಾಲದಲ್ಲಿ ಗರ್ಭಪತನವಾಗುವಿಕೆ ಮತ್ತು ಸ್ತ್ರೀಯರಿಗೆ ಸಂಬಂಧಪಟ್ಟ ಇತರ ಎಲ್ಲಾ ದೋಷಗಳನ್ನು ಹೋಗಲಾಡಿಸಿ ಸೌಂದರ್ಯವನ್ನೂ, ತೇಜಸ್ಸನ್ನೂ ಉಂಟುಮಾಡುತ್ತದೆ. **ಬಾಟ್ಲಿ 1ರ ರೂ. 2–4—0.**

## ೮. ಮೇಹಕುಠಾರ

ಪ್ರಮೇಹ, ಮೂತ್ರಕೃಚ್ಛ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಸೊಂಟನೋವು, ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಮೂತ್ರವು ತೊಟ್ಟು ತೊಟ್ಟಾಗಿ ಬೀಳುವಿಕೆ, ಅಡಿಗಡಿಗೂ ಮೂತ್ರ ವಿಸರ್ಜನೆ ಮುಂತಾದ್ದನ್ನು ನಿವರ್ತಿಸಿ ಎಂಥ ನಮೂನೆಯ ಮೇಹರೋಗಗಳನ್ನು ಗುಣಪಡಿಸುವುದು. ಮೂತ್ರನಾಳವನ್ನು ಶುಭ್ರಮಾಡಿ ನರಗಳಿಗೆ ಅತ್ಯಧಿಕವಾದ ಬಲವನ್ನು ಉಂಟುಮಾಡುವುದು.

**ಕ್ರಯ ಡಬ್ಬಿ 1ರ ರೂಪಾಯಿ 2–8–0.**

## ೯. ಅಶೋಕಾರಿಷ್ಟ ಮತ್ತು ಮಾತ್ರೆ

ಇದು ಸ್ತ್ರೀಯರಿಗೆ ಉತ್ತಮವಾದ ಟಾನಿಕ್. ಋತುಶೂಲೆ, ಕ್ರಮ ತಪ್ಪಿ ಮುಟ್ಟಾಗುವಿಕೆ, ಅತಿರೇಕ ಅಥವಾ ಅತ್ಯಲ್ಪ ಸ್ರಾವ, ಮುಟ್ಟು ಸಂಪೂರ್ಣವಾಗಿ ನಿಲ್ಲುವುದು, ಬಿಳಿದು ಹೋಗುವುದು, ಬಂಜೆತನ, ನಡುವಿನ ನೋವು, ರಕ್ತಹೀನತೆ, ಒಳಜ್ವರ, ತಲೆನೋವು, ಮಲಬದ್ಧತೆ, ಕೈಕಾಲು ಬಚ್ಚಿಕೊಳ್ಳುವುದು, ಅಕಾಲದಲ್ಲಿ ಗರ್ಭಪತನವಾಗುವಿಕೆ ಮತ್ತು ಸ್ತ್ರೀಯರಿಗೆ ಸಂಬಂಧಪಟ್ಟ ಇತರ ಎಲ್ಲಾ ದೋಷಗಳನ್ನು ಹೋಗಲಾಡಿಸಿ ಸೌಂದರ್ಯವನ್ನೂ, ತೇಜಸ್ಸನ್ನೂ ಉಂಟುಮಾಡುತ್ತದೆ. **ಬಾಟ್ಲಿ 1ರ ರೂ. 2–4—0.**

## ೧೦. ಮೇಹಕುಠಾರ

ಪ್ರಮೇಹ, ಮೂತ್ರಕೃಚ್ಛ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಸೊಂಟನೋವು, ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಮೂತ್ರವು ತೊಟ್ಟು ತೊಟ್ಟಾಗಿ ಬೀಳುವಿಕೆ, ಅಡಿಗಡಿಗೂ ಮೂತ್ರ ವಿಸರ್ಜನೆ ಮುಂತಾದ್ದನ್ನು ನಿವರ್ತಿಸಿ ಎಂಥ ನಮೂನೆಯ ಮೇಹರೋಗಗಳನ್ನು ಗುಣಪಡಿಸುವುದು. ಮೂತ್ರನಾಳವನ್ನು ಶುಭ್ರಮಾಡಿ ನರಗಳಿಗೆ ಅತ್ಯಧಿಕವಾದ ಬಲವನ್ನು ಉಂಟುಮಾಡುವುದು.

**ಕ್ರಯ ಡಬ್ಬಿ 1ರ ರೂಪಾಯಿ 2–8–0.**

## ೧೧. ದ್ರಾಕ್ಷಾರಿಷ್ಟ

ದೇಹಕ್ಕೂ ಮೆದುಳಿಗೂ ಉಲ್ಲಾಸವನ್ನು ಉಂಟುಮಾಡುವ ಅತ್ಯುತ್ತಮ ಔಷಧಿ. ಅತಿರೇಕ ದೌರ್ಬಲ್ಯದಿಂದ ಉಂಟಾಗುವ ಎಂಥಾ ಸಮಯದಲ್ಲಿಯೂ ಶಕ್ತಿಯನ್ನು ಇರಗೊಳಿಸುವುದು. ದೇಹದಲ್ಲಿ ತಲೆದೋರುವ ಉಷ್ಣತೆ, ಒಣಕೆಮ್ಮು, ಕ್ಷಯ, ಎದೆನೋವು, ಒಳಜ್ವರ, ಪಿತ್ತದ ವಿಕಾರ, ತಲೆತಿರುಗುವುದು, ಮಲಬದ್ಧತೆ, ಇವುಗಳನ್ನೆಲ್ಲಾ ಹೋಗಲಾಡಿಸಿ ರುಚಿಯನ್ನೂ, ಹಸಿವನ್ನೂ, ಸುನಿದ್ರೆಯನ್ನೂ ಉಂಟುಮಾಡುವುದು. ದುರ್ಬಲವಾದ ನರಗಳಿಗೆ ಬಲವನ್ನು ಕೊಡುವುದು.

**ಕ್ರಯ: 24 ಔನ್ಸು ಬಾಟ್ಲಿ 1ರ ರೂಪಾಯಿ 2.**
**12 ಔನ್ಸು ಬಾಟ್ಲಿ 1ರ ರೂಪಾಯಿ 1—2—0.**
**8 ಔನ್ಸು ಬಾಟ್ಲಿ 1ರ ಆಣೆ 12.**

## ೧೨. ಜ್ಯಾಜಿಕ್ಯಾದಿ ಗುಟಿಕೆ

ಬರಿ ಅತಿಸಾರ, ರಕ್ತಾತಿಸಾರ, ಜ್ವರ ಕೂಡಿರುವ ರಕ್ತಾತಿಸಾರ, ಉಷ್ಣದ ಹೊರಕಡೆ, ಅಜೀರ್ಣದಿಂದ ಆಗುವ ಹೊರಕಡೆ, ಗ್ರಹಣಿ, ಹುಳದ ಉಪದ್ರದಿಂದ ಉಂಟಾಗುವ ಹೊರಕಡೆ ಇವುಗಳ ಮೇಲೆ ದಿವ್ಯ ಔಷಧಿ.

**ಬಾಟ್ಲಿ 1ರ ಆಣೆ 12. ಬಾಟ್ಲಿ 3ಕ್ಕೆ ರೂಪಾಯಿ 2—2—0.**

## ೧೩. ಕೊಲೆರಾ ಗುಟಿಕೆ

ಕೊಲೆರಾ, ವಾಂತಿಭೇದಿ, ಅಜೀರ್ಣದಿಂದ ಉಂಟಾಗುವ ಹೊರಕಡೆ ಇವುಗಳ ಮೇಲೆ ದಿವ್ಯ ಔಷಧಿ.

**ಬಾಟ್ಲಿ 1ರ ಆಣೆ 12. ಬಾಟ್ಲಿ 3ಕ್ಕೆ ರೂಪಾಯಿ 2—2—0.**

## ೧೪. ರಕ್ತಶೋಧಕ

ದೇಹದೊಳಗಿನ ರಕ್ತವು ಕೆಟ್ಟುಹೋದ ದೆಸೆಯಿಂದ ಉಂಟಾಗುವ ಕುರು, ಕಜ್ಜಿ, ಮೈತುರಿಸುವಿಕೆ, ಕಲೆ, ವ್ರಣ, ಫರಂಗಿ, ಸಂದು ಸಂದು ನೋವು, ಮೇಹ, ವಾತ ಇವುಗಳ ಮೇಲೆ ದಿವ್ಯ ಔಷಧಿ.

**ಬಾಟ್ಲಿ 1ರ ರೂಪಾಯಿ 1—2—0. 3 ಬಾಟ್ಲಿಗಳಿಗೆ 3—4—0**

"Kasturi" Ltd., Mangalore

## ೧೫. ಕಸ್ತೂರಿ ಮಿಶ್ರಣ ದಶಮೂಲ

(ಕಸ್ತೂರಿ ಮಿಶ್ರಿತವಾದದ್ದು.)

ಇದು ಪ್ರಸವಾ ನಂತರ ಬಾಳಾಂತಿಯರು ಉಪಯೋಗಿಸತಕ್ಕ ಅತ್ಯದ್ಭುತಕರವಾದ ಶಕ್ತಿವರ್ಧಕ ರಸಾಯನ. ಇದು ಪ್ರಸವಿಸಿದ ನಂತರ

ಉಂಟಾದ ಆಯಾಸವನ್ನು ಹೋಗಲಾಡಿಸಿ ಆ ಶ್ವಾಸನೆಯನ್ನು ಉಂಟು ಮಾಡುವುದು. ಕಸವನ್ನು ಬೇಗನೆ ಹೊರಗೆ ಮಾಡುವುದು. ಗರ್ಭಕೋಶದಲ್ಲಿ ಕೆಟ್ಟ ರಕ್ತವನ್ನು ನಿಲ್ಲದಂತೆ ಮಾಡುವುದು. ಗರ್ಭಕೋಶದವೇದನೆಗಳನ್ನು ಸಮಾಧಾನಪಡಿಸಿ ನಂಜಿನ ಜ್ವರಕ್ಕೆ ಅವಕಾಶ ಕೊಡದಂತೆ ಮಾಡುವುದು. ಉದರದೊಳಗಿನ ಅಂಗಗಳನ್ನು ಬಲಪಡಿಸಿ ಗತ ಶಕ್ತಿಯನ್ನು ಪುನಃ ತುಂಬಿಸುವುದು. ಜೀರ್ಣವನ್ನೂ, ಹಸಿವನ್ನೂ, ನಿದ್ರೆಯನ್ನೂ ಕ್ರಮದಂತೆ ನಡೆಸುವುದು. ಇದರ ಸೇವನೆಯಿಂದ ರಕ್ತಧಾತುವು ಅಭಿವೃದ್ಧಿಯಾಗಿ ಬಾಳಾಂತಿಯರು ಪುಷ್ಟಿಹೊಂದುವರಲ್ಲದೆ ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಇದನ್ನು ಎರಡು ತಿಂಗಳುಗಳ ತನಕ ಸೇವಿಸಿದ್ದಲ್ಲಿ ಬೇರೆ ಔಷಧಿಗಳ ಅಗತ್ಯವಿರುವುದಿಲ್ಲ.

**ಬಾಟ್ಲಿ 1ರ ರೂಪಾಯಿ 1-8-0. 2 ಬಾಟ್ಲಿಗಳ ರೂಪಾಯಿ 3.**
**3 ದಿವಸಗಳ ತನಕ ಸೇವಿಸುವ ಮಾತ್ರೆ 3ಕ್ಕೆ ಆಣೆ 3.**
**ಬಾಳಾಂತಿಯರಿಗೆ, ಮಗುವಿಗೆ ಬೇಕಾದ ತೈಲಗಳು ದೊರೆಯುತ್ತವೆ.**

## ೧೬. ಖಾಸಕುಠಾರ ಗುಟಿಕೆ

ಖಾಸಶ್ವಾಸ, ಕಫ, ದಮ್ಮು, ಕೆಮ್ಮು, ಉಬ್ಬಸ, ಗುರು ಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ರಾಮಬಾಣ.

**ಬಾಟ್ಲಿ 1ರ ಆಣೆ 10. ಬಾಟ್ಲಿ 3ಕ್ಕೆ ರೂಪಾಯಿ 1—12—0.**

## ೧೭. ವಾತಹಾರಿ ಕಷಾಯ

ಸರ್ವ ತರದ ವಾತರೋಗಗಳಿಗೆ ದಿವ್ಯ ಔಷಧಿ. ನರಗಳ ದೌರ್ಬಲ್ಯ, ಮುದಿತನದಿಂದ ಉಂಟಾಗುವ ಅಶಕ್ತತೆ, ಸೊಂಟನೋವು, ಗಂಟು ಗಂಟು ನೋವು ಇವುಗಳನ್ನು ಹೋಗಲಾಡಿಸಿ ಶರೀರಕ್ಕೆ ಶಕ್ತಿಯನ್ನು ಉಂಟು ಮಾಡುವುದು.

**ಬಾಟ್ಲಿ 1ರ ರೂಪಾಯಿ 1—4—0. ಬಾಟ್ಲಿ 3ಕ್ಕೆ 3—8—0.**

## ೧೮. ವಾತಹಾರಿ ತೈಲ

ಉಳುಕು, ಸಂದು ಸಂದು ನೋವು, ಮೇಹವಾತ ಇವುಗಳಿಗೆ ದಿವ್ಯ ಔಷಧಿ.

**ಬಾಟ್ಲಿ 1ರ ರೂಪಾಯಿ 1.**

## ೧೯. ಮಹಾಭ್ರಂಗರಾಜ ತೈಲ

ನಿದ್ರಾಹೀನತೆ, ತಲೆ ಬಿಸಿಯಾಗುವಿಕೆ, ಕಣ್ಣು ಉರಿ, ಕಣ್ಣಿನಿಂದ ನೀರು ಇಳಿಯುವುದು, ತಲೆನೋವು, ತಲೆ ಉರಿ, ತಲೆ ತಿರುಗುವಿಕೆ, ಮೆದುಳಿನ ಆಯಾಸ, ಜ್ಞಾಪಕಶಕ್ತಿ ಕಮ್ಮಿಯಾಗುವಿಕೆ, ಕೂದಲು ಉದುರುವಿಕೆ ಇವುಗಳನ್ನು ಗುಣಪಡಿಸುವುದು. ಇದಲ್ಲದೆ, ಕೂದಲನ್ನು ಕಪ್ಪು ಬಣ್ಣಕ್ಕೆ ಮಾರ್ಪಡಿಸುವುದು.

**ಬಾಟ್ಲಿ 1ರ ರೂಪಾಯಿ 1—4—0. ಬಾಟ್ಲಿ 3ಕ್ಕೆ 3—8—0.**

## ೨೦. ದ್ರಾಕ್ಷಾಸವ

ಕುಡಿಯಲಿಕ್ಕೆ ಬಹು ರುಚಿಕರ. ಇದು ದೇಹಕ್ಕೂ ಮೆದುಳಿಗೂ ಉಲ್ಲಾಸ ಕೊಡತಕ್ಕ ದಿವ್ಯ ಔಷಧಿ. ಬಲಹೀನ ದೇಹಕ್ಕೆ ಬಲವನ್ನೂ, ನಿದ್ರಾಹೀನರಿಗೆ ಸುಖನಿದ್ರೆಯನ್ನೂ, ಅಜೀರ್ಣಸ್ತರಿಗೆ ಜೀರ್ಣಶಕ್ತಿಯನ್ನೂ, ಹಸಿವಿಲ್ಲದವರಿಗೆ ಹಸಿವನ್ನೂ ಉಂಟುಮಾಡುವುದು. ಅರುಚಿಯನ್ನು ತಗ್ಗಿಸುವುದು, ಸುಖವಾಗಿ ಭೇದಿಯಾಗುವುದು. ಕಫ, ಕೆಮ್ಮು, ನೆಗಡಿ ಇವುಗಳನ್ನು ಗುಣಪಡಿಸುವುದು. ಮನಸ್ಸಿಗೆ ಉಲ್ಲಾಸವನ್ನುಂಟು ಮಾಡುವುದು.

**24 ಔನ್ಸು ಬಾಟ್ಲಿ 1ರ ರೂಪಾಯಿ 1—12—0.**
**12 ಔನ್ಸು ಬಾಟ್ಲಿಗೆ ರೂಪಾಯಿ 1.**
**8 ಔನ್ಸು ಬಾಟ್ಲಿಗೆ ಆಣೆ 12.**

## ೨೧. ಮೂಲವ್ಯಾಧಿ ಔಷಧಿ

ಎಲ್ಲಾ ನಮೂನೆಯ ಮೂಲ ವ್ಯಾಧಿ, ಮಲ ವಿಸರ್ಜನೆ ಆಗುವಾಗ ರಕ್ತ ಹೋಗುವುದು, ತುರಿಕೆ, ಉರಿನೋವು ಮುಂತಾದುವುಗಳನ್ನು ಹೋಗಲಾಡಿಸಿ ಸುಖವಾಗಿ ಭೇದಿ ಆಗುವುದು ಮತ್ತು ಶಕ್ತಿಯನ್ನು ಉಂಟುಮಾಡುವುದು.

**ಡಬ್ಬಿ 1ರ ರೂಪಾಯಿ 2—8—0.**
**ಮೂಲವ್ಯಾಧಿ ಮುಲಾಮು ಮತ್ತು ಮಾತ್ರೆ ಡಬ್ಬಿ 1ರ ಆಣೆ 8.**

## ೨೨. ಅಶೋಕಾರಿಷ್ಟ

ಹೆಂಗಸರ ಮುಟ್ಟುದೋಷ ಮತ್ತು ಎಲ್ಲಾ ಗುಪ್ತ ಕ್ಯಾಲೆಗಳಿಗೆ ಸಂಜೀವನ.

**24 ಔನ್ಸು ಬಾಟ್ಲಿಗೆ ರೂಪಾಯಿ 2—8—0.**
**12 ಔನ್ಸು ಬಾಟ್ಲಿಗೆ ರೂಪಾಯಿ 1—4—0.**
**8 ಔನ್ಸು ಬಾಟ್ಲಿಗೆ ರೂಪಾಯಿ 1.**

## ೨೩. ಮಹಾಮದನಕಾಮೇಶ್ವರಿ ಲೇಹ

**ಡಬ್ಬಿ 1ರ ರೂಪಾಯಿ 2.**

## ೨೪. ಸುಖಭೇದಿ ಗುಟಿಕೆ

ಆಯಾಸವನ್ನು ಉಂಟುಮಾಡದ ಸುಖ ವಿರೇಚಕ.

**ಬಾಟ್ಲಿ 1ರ ಆಣೆ 10. ಬಾಟ್ಲಿ 3ಕ್ಕೆ ರೂಪಾಯಿ 1—12—0.**

## ೨೫. ಟಿನ್ನೋ ಮಿಕ್ಷರ್

ಎಲ್ಲಾ ನಮೂನೆಯ ಜ್ವರಗೆಡ್ಡೆಯನ್ನು ಕರಗಿಸುವ ದಿವ್ಯ ಔಷಧಿ.

**ಬಾಟ್ಲಿ 1ರ ರೂಪಾಯಿ 1—2—0. ಬಾಟ್ಲಿ 3ಕ್ಕೆ 3—4—0.**

## ೨೬. ಟಿನ್ನೋ ಪಿಲ್ಸ್

ಎಲ್ಲಾ ನಮೂನೆಯ ಜ್ವರಗೆಡ್ಡೆಯನ್ನು ಕರಗಿಸುವ ದಿವ್ಯ ಔಷಧಿ.

**ಬಾಟ್ಲಿ 1ರ ರೂಪಾಯಿ 1. ಬಾಟ್ಲಿ 3ಕ್ಕೆ ರೂಪಾಯಿ 2—13—0.**

## ೨೭. ಹಲ್ಲುನೋವಿಗೆ ಖಾತ್ರಿ ಔಷಧಿ

**ಬಾಟ್ಲಿ 1ರ ಆಣೆ 8.**

## ೨೮. ಗಜಕರ್ಣ ಮುಲಾಮು

ಎಲ್ಲಾ ನಮೂನೆಯ ಕಜ್ಜಿ, ಗಜಕರ್ಣ ಇಸುಬು ಇವುಗಳ ಮೇಲೆ ದಿವ್ಯ ಔಷಧಿ.

**ಬಾಟ್ಲಿ 1ರ ಆಣೆ 5. ಡಜನ್ 1ಕ್ಕೆ ರೂಪಾಯಿ 3—6—0.**

## ೨೯. ಕ್ಷೀರಬಲಾ ೧೦೧ ಆವರ್ತನೆದ್ದು

ಎಲ್ಲಾ ನಮೂನೆಯ ವಾತ, ಉಳುಕು, ನೋವು, ಸೆಳತಕ್ಕೂ, ಪಕ್ಷವಾತಕ್ಕೂ, ವಾಯುರೋಗಗಳಿಗೂ ದಿವ್ಯ ಔಷಧಿ.

**ಔನ್ಸು ಬಾಟ್ಲಿಗೆ ರೂಪಾಯಿ 4. ಅರ್ಧ ಔನ್ಸಿಗೆ 2—2—0.**

೩೦. ಬಾಲಸಂಜೀವನಿ ಗುಟಿಕೆ ಬಾಟ್ಲಿ 1ರ ಆಣೆ 8. ೩೧. ಗೋರೋಜನಾದಿ ಗುಟಿಕೆ ಬಾಟ್ಲಿ 1ರ ರೂಪಾಯಿ 1. ೩೨. ಕಸ್ತೂರ್ಯಾದಿ ಗುಟಿಕೆ ಬಾಟ್ಲಿ 1ರ ರೂಪಾಯಿ 1. ೩೩. ಮಹಾನಾರಾಯಣ ತೈಲ ಬಾಟ್ಲಿ 1ರ ರೂಪಾಯಿ 1. ೩೪. ಮಹಾಚಂದನಾದಿ ತೈಲ ಬಾಟ್ಲಿ 1ರ ರೂಪಾಯಿ 1. ೩೫. ಕುಮಾರಿ ಆಸವ ಬಾಟ್ಲಿಗೆ ಆಣೆ 14. ೩೬. ಮಕರಧ್ವಜ 7 ದಿವಸದ ಔಷಧಿಗೆ ರೂಪಾಯಿ 1. ೩೭. ಸಿದ್ಧ ಮಕರಧ್ವಜ 7 ದಿವಸದ ಔಷಧಿಗೆ ರೂಪಾಯಿ 2.

**ಇದಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ.**

## ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಶಿಯನ್ಸ್,

### ರಥಬೀದಿ, ನಂಬ್ರ 8 ಮಂಗಳೂರು, ದ. ಕ.

1 ರೂಪಾಯಿ ಕಮ್ಮಿ ಔಷಧಿ ವಿ. ಪಿ. ಮಾಡಲಾಗುವುದಿಲ್ಲ. ನಂಬ್ರ 16, 17, 18, 19, 21, 25, 26, 27, 28, 29, 30, 31, 32, 33, 34, 36, 37 ಈ ಔಷಧಿಗೆ ಮಂಗಳೂರಿಗೆ ಬರೆಯಬೇಕು. **ನಮ್ಮ ಔಷಧಿ ಸಿಕ್ಕುವ ಸ್ಥಳ:** — ಮೆಸರ್ಸ್ ಮುಲ್ಲರ ಪೆಟೆಂಟ್ ಬ್ರದರ್ಸ್, 91 ಚಿಕ್ಕಪೇಟೆ, ಬೆಂಗಳೂರು ಸಿಟಿ.
ಮೆಸರ್ಸ್ ಕಾಮತ್ ಎಂಡ್ ಕೊ., ತಾರಾಹೌಸ್, ಗಿರಿಗಾಂವ್, ಬೇಕ್‌ರೋಡ್, ಮುಂಬಾಯಿ, ನಂ. 4. ದಿ ವೆರ್ಯಾಟಿಹೋಲ್, ಮಡಿಕೇರಿ, ಕೂರ್ಗ್.
ರಾವ್ ಫಾರ್ಮೆಶಿ, ಸಾಗರ. ಸುಬ್ರಾಯ ಪ್ರಭು, ಸುಳ್ಯ. ಕೆ. ಶ್ರೀನಿವಾಸ ಹೆಗ್ಡೆ, ಮರ್ಚಂಟ್, ತೀರ್ಥಹಳ್ಳಿ. ಡಾ। ಬಿ. ಯಚ್. ಪದ್ಮನಾಭ ಪೈ, ಚಿಕ್ಕಮಂಗಳೂರು.
ಡಾಕ್ಟರ್ ಬಿ. ಯಚ್. ವಾಸುದೇವ ಪೈ, ಕಡೂರು. ಡಾ। ಶ್ರೀನಿವಾಸ ಪೈ, ಪುತ್ತೂರು. ದ. ಕ. ಶ್ರೀ। ರಾಮಾ ಸ್ಟೇಶನರಿ ಹೌಸ್.
ಶ್ರೀ. ರಾಮಪೇಟೆ, ಕಾಸರಗೋಡು.

ಕೈರೋದಲ್ಲಿ 50 ಮಂದಿ ವಿದ್ಯಾರ್ಥಿಗಳಿಗೂ, ಕೆಲವು ಮಂದಿ ಪೋಲೀಸರಿಗೂ ಖಾಡಾಖಾತಿಯಾಗಿ ಸುಮಾರು 100 ಮಂದಿಗೆ ಗಾಯಗಳಾಗಿವೆ. ವಿದ್ಯಾರ್ಥಿಗಳ ಮುಷ್ಕರವೀಗ ದೇಶದಲ್ಲೆಲ್ಲಾ ಹಬ್ಬುತ್ತಿದೆ.

ಜರ್ಮನಿಯ ಇಂಜಿನಿಯರರೊಬ್ಬರು ಒಂದು ಯಂತ್ರದ ಮನುಷ್ಯನನ್ನು ತಯಾರಿಸಿದ್ದಾರೆ. ಅದು ಬೆಂಕಿಬಿದ್ದರೆ ಇಂತಹ ಕೊಠಡಿಯಲ್ಲಿಯೇ ಬೆಂಕಿಬಿತ್ತೆಂದು ಬೆಂಕಿ ಆರಿಸುವ ಇಲಾಖೆಯವರಿಗೆ ಟೆಲಿಫೋನಿನಲ್ಲಿ ತಿಳಿಸುವುದಂತೆ. ಕಳ್ಳತನವಾಗುವ ಸಂಭವದಲ್ಲಿ ಪೊಲೀಸರಿಗೆ ತಿಳಿಸುವುದಂತೆ. ಹೆಚ್ಚಿನ ಅನಾಹುತಗಳೇನಾದರೂ ಸಂಭವಿಸಿದರೆ ಪೊಲೀಸರಿಗೂ ಫಯರ್ ಬ್ರಿಗೇಡಿನವರಿಗೂ ಒಟ್ಟಿಗೆ ವಾರ್ತೆ ಕಳುಹಿಸುವುದಂತೆ.

## NOTICE.

Mr C. P. Appachu has been appointed by the Coffee Growers Association of India to recruit members (both full and Associate) for the association.

*Sunticoppa,* W. A. DAVIES
*1-2-1936.* *(Secretary.)*

# ಯುದ್ಧ ವಾರ್ತೆ.

### ಜನವರಿ ತಾ. 29

ಇಟಲಿಯವರನ್ನು ಸುತ್ತುಗಟ್ಟಿದರು

ಮಕೇಲಿನ ಬಳಿ ಒಂದು ಇಟಲಿಯ ಸೈನ್ಯದ ಮೇಲೆ ಅಬಿಸೀನಿಯದ ಚಿಕ್ಕ ದಳವೊಂದು ಬಿದ್ದು 35 ಸೈನಿಕರನ್ನು ಕೊಂದಿರುವರಲ್ಲದೆ 5 ಲಾರಿ ತುಂಬಾ ಗುಂಡಿನ ಸಾಮಾನನ್ನು 13 ಕೋವಿ ಮತ್ತು 25 ಮೆಶಿನ್ ಗನ್ನುಗಳನ್ನು ವಶಪಡಿಸಿಕೊಂಡಿರುವರು. ಅಲ್ಲದೆ ಟೆಂಬಿಯನ್ ಪ್ರಾಂತ್ಯದಲ್ಲಿನ ಅಬ್ಬಿ ಅಡ್ಡಿಗೆ ಇಟಲಿಯ ವಿಮಾನಗಳು ಬಾಂಬಿನ ಸುರಿಮಳೆಗರಿಯುತ್ತಿದ್ದಾಗ ಅಬಿಸೀನಿಯಾ ಸೈನಿಕರು ಗುಂಡು ಹೊಡೆದು ಒಂದು ವಿಮಾನವನ್ನು ನೆಲಕ್ಕುರುಳಿಸಿದರು.

### ಜನವರಿ ತಾ 30.

ದಕ್ಷಿಣದಲ್ಲಿ ಯುದ್ಧ.

ದಕ್ಷಿಣದಲ್ಲಿ ಯುದ್ಧವು ದಿನಂಪ್ರತಿಯೂಗುತ್ತಲಿದೆ. ರಾಸ್ ಡೆಸ್ಟಾರವರ ನಾಯಕತ್ವವು ಅಷ್ಟೆಂದು ತೃಪ್ತಿಯಿಲ್ಲದ್ದರಿಂದ ಅವರನ್ನು ಒದಲಿಸುವ ಏರ್ಪಾಡುಗಳಾಗುತ್ತಿವೆ. ರಾಸ್ ಸಯೂಮರು ದೊಡ್ಡ ಕದನಕ್ಕೆ ಅಸ್ಪದ ಕೊಡದೆ ಅಲ್ಲಲ್ಲಿ ಇಟಲಿಯೂಸರನ್ನು ಸುತ್ತುಗಟ್ಟುವ ಏರ್ಪಾಡು ಮಾಡುವ ಯತ್ನದಲ್ಲಿರುವರು. ರಾಸ್ ಡೆಸ್ಟಾರವರ ಸೈನ್ಯಕ್ಕೆ ಹೊಸ್ತ ಸೈನಿಕರನ್ನು ಕಳುಹಿಸುವ ಏರ್ಪಾಡಾಗಿದೆ.

### ಜನವರಿ ತಾ. 31

ವಡಾರದ ಬಳಿ ಯುದ್ಧ.

ಇಟಲಿಯವರ ಸೈನ್ಯವು ಮುಂದುವರಿಯುತ್ತಿದ್ದುದನ್ನು ಅಬಿಸೀನಿಯದ ಸೈನ್ಯವು ವಡಾರದಲ್ಲಿ ಎದುರಿಸಿ ಹಿಡಿಗಟ್ಟಿದರು. ಅಲ್ಲದೆ ಇಟಲಿ ವಿಮಾನಗಳು ಚಿಲ್ಲಾ ಎಂಬಲ್ಲಿ ಬಾಂಬುಗಳನ್ನು ಹಾಕಿದವು.

### ಫೆಬ್ರವರಿ ತಾ. 2.

3000 ಇಟಲಿಯನರ ಕೊಲೆ!

ಟೆಂಬಿಯನ್ ಪ್ರಾಂತ್ಯದಲ್ಲಿ ಜನವರಿ 19ರಿಂದ 30ರ ವರೆಗೆ ಒಂದು ಮಹಾ ಯುದ್ಧವು ನಡೆಯಿತು. ಅಂಥಾ ಯುದ್ಧವು ಈ ವರೆವಿಗೂ ಆಗಿರಲಿಲ್ಲ. ಅದರಲ್ಲಿ 3000 ಮಂದಿ ಇಟಲಿಯ ಸೈನಿಕರು ಹತರಾದಲ್ಲದೆ 29 ಫಿರಂಗಿಗಳೂ, 175 ಮೆಶಿನ್ ಗನ್ನುಗಳೂ, 2654 ರೈಫಲುಗಳೂ ಮತ್ತು ಅನೇಕ ತೋಟಾಗಳೂ ಅಬಿಸೀನಿಯರ ಕೈವಶವಾಗಿದೆ. ಇಟಲಿಯವರಿಗೆ ಮಹತ್ತಾದ ಸೋಲು ಉಂಟಾಗಿದೆ.

ನಾಯಕರ ಬದಲಾವಣೆ

ವಡಾರದ ಪಾರ್ಶ್ವದಲ್ಲಿ ಸೇನಾ ನಾಯಕರಾದ ರಾಸ್ ಡೆಸ್ಟಾರವರ ಬದಲಿಗೆ ಸಿಡಾಮೊ ಪ್ರಾಂತ್ಯದ ಗವರ್ನರಾಗಿದ್ದ ಡೆಡ್ಜಾಸ್ ಮೇಷ್ ಬಾಲ್ಚಾರವರ ನೇಮಕವಾಗಿದೆ.

### ಫೆಬ್ರವರಿ ತಾ. 4.

ಪುನಹ 1700 ಮಂದಿ ಹತರಾದರು.

ದಕ್ಷಿಣದಲ್ಲಿ ಅಬಿಸೀನಿಯರ ಸೈನ್ಯವನ್ನು ಎಸುರಿಸಲು ಇಟಲಿಯವರ ದಳವು ಪ್ರಯತ್ನಿಸಿದುದರ ಫಲವಾಗಿ 1700 ಇಟಲಿ ಸೈನಿಕರು ಮಡಿದರು.

ಅಡಿಗ್ರಾಟಿನ ಬಳಿ ಯುದ್ಧ.

ರಾಸ್ ಸಯೂಮರ ನಾಯಕತ್ವದಲ್ಲಿ ಅಬಿಸೀನಿಯಾ ಸೈನಿಕರು ಮಕೇಲನ್ನು ವಶ ಪಡಿಸುವ ಹವಣಿಕೆಯಲ್ಲಿರುವರು. ಎರಡು ದಿವಸಗಳಿಂದಲೂ ಅಲ್ಲಿ ಕೈ ಕೈ ಕಾಳಗಗಳಾಗುತ್ತಲಿವೆ. ಅವರಲ್ಲಿ ಅಬಿಸೀನಿಯರೇ ಜಯಶಾಲಿಗಳಾಗಿರುವರು.

## ಸಾರ್ವಜನಿಕ ಸಭೆಗಳು

(4ನೇ ಪುಟದಿಂದ ಮುಂದುವರಿದದ್ದು)

### ಫ್ರೇಜರ್‌ಪೇಟೆ.

ಈ ತಾ. 4 ನೇ ಮಂಗಳವಾರ ಮಧ್ಯಾಹ್ನದ ಮೇಲೆ 3½ ಗಂಟೆಗೆ ಫ್ರೇಜರ್‌ಪೇಟೆ ಸಂತೆಮೊಳದ ಬಳಿ ಶ್ರೀ ಆರ್ ಯಸ್. ರುದ್ರಾನಂದ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆಯಿತು. ಅಧ್ಯಕ್ಷರ ಅನುಮತಿಯಿಂದ ಮೆ. ಪಿ ಐ. ಬೆಳ್ಯಪ್ಪನವರು ಮೇಲಿನ ಎರಡು ಕಡೆಗಳಲ್ಲಿ ಮಾಡಿದಂತೆಯೇ ಕಂದಾಯ ಮೂಫಿ, ಭೂಮಿ ಗಿರ್ವಿ ಬ್ಯಾಂಕು ಮತ್ತು ರಾಜಕೀಯ ಸುಧಾರಣೆಗಳನ್ನು ಕುರಿತು ಭಾಷಣ ಮಾಡಿದರು. ಕಂದಾಯ ಮೂಫಿಯನ್ನು ಕುರಿತ ಪುಸ್ತಕ, ರಾಜಕೀಯ ಸುಧಾರಣೆಗಳ ವಿಷಯದ ತರಾವುಗಳಿಗೆ ಒತ್ತಾಸೆಯಾಗಿ ಮೆ. ಯಸ್. ಯನ್. ರಾಮಶೆಟ್ಟಿಯವರು ಮಾತಾಡಿದ ಮೇಲೆ ಅವುಗಳು ಸರ್ವಸಮ್ಮತದಿಂದ ಮಂಜೂರಾದವು. ಆದರೆ ಮೆ. ರಾಮಶೆಟ್ಟಿಯವರು ಭೂಮಿ ಗಿರ್ವಿ ಬ್ಯಾಂಕನ್ನು ಕುರಿತು ಮಾತಾಡುತ್ತಾ, ಈ ಹೋಬಳಿಯಲ್ಲಿರುವ ಹೆಚ್ಚಿನವರು ಸಾಗು ಹಿಡುವಳಿದಾರರಾಗಿರುವುದರಿಂದ ತಮಗೆ ಆ ಬ್ಯಾಂಕಿನಿಂದ ಲಾಭವಿಲ್ಲದೆ ನಷ್ಟ ಉಂಟಾಗಬಹುದೆಂದು ಮುಂತಾಗಿ ತರಾವನ್ನು ವಿರೋಧಿಸಿದರು. ಆ ದಿನ ಮಧ್ಯಾಹ್ನ ಅಲ್ಲಿಗೆ ಬಹಳ ಜೋರಾದ ಮಳೆ ಬಿದ್ದ ಕಾರಣ ವಿಷಯಗಳನ್ನು ಪ್ರಾರಂಭಿಸಲು ತಡವಾದುದರಿಂದ ಅಷ್ಟರಲ್ಲೇ ಸೇರಿದ್ದ ಜನರು ಹಲವರು ಹೋಗಲು ತೊಡಗಿದರು. ಆದುದರಿಂದ ಈ ವಿಚಾರ ಇನ್ನೊಂದು ಸಾರಿ ಸಭೆ ಸೇರಿ ಸಾಂಗವಾಗಿ ಚರ್ಚಿಸುವುದು ಉತ್ತಮವೆಂದು ತೀರ್ಮಾನಿಸಲಾಯಿತು. ಎಸ್ಟೇಟಿಗಿನ ಅಧ್ಯಕ್ಷರಿಗೂ, ಜವಾನ್ದಾರರ ಸಂಘದ ಪೈಸಿಡೆಂಟಂಗಳಿಗೂ ವಂದನೆಗಳಿಂದ ಸಭೆಯು ಕೊನೆಗೊಂಡಿತು ಈ ಮೂರು ಎಸ್ಟೇಟುಗಳಲ್ಲಿ ಪಾಸಾದ ತರಾವುಗಳ ನಕಲುಗಳು ಎಸ್ಟೇಟಿಗಿನ ಅಧ್ಯಕ್ಷರಿಂದ ಕಮಿಷನರವರಿಗೆ ಕಳುಹಿಸಲಾಯಿತು.


## ಆದಿಲ್ರೀ ಕಾವೇರಿ ಬಸ್ಸ್ ಸರ್ವಿಸ್ ಲಿಮಿಟೆಡ್, ಮಡಿಕೇರಿ.

**ಮೇಲ್ಕಂಡ ಕಂಪೆನಿಯಿಂದ ಶೇರು ಹೊಂದಿಕೊಂಡ ಮಹನೀಯರುಗಳು.**

(ಮುಂದುವರಿದದ್ದು)

| | | |
|---|---|---|
| ಮೆ. ರಾ. ಕಾಯಪಂಡ ಎ ದೇವಯ್ಯನವರು | 213 | ಶೇರು |
| ,, ಉದಿಯಂಡ ಎಸ್. ಅಣ್ಣಯ್ಯನವರು | 212 | ,, |
| ,, ಪಟ್ಟಮಂಡ ಬಿ ವೆಂಕಣ್ಣಪ್ಪನವರು | 150 | ,, |
| ,, ಕೂತಂಡ ಜೋಯಪ್ಪನವರು | 1 | ,, |
| ,, ಬಾಳೆಯಡ ಬೆಳ್ಯಪ್ಪನವರು | 2 | ,, |
| ,, ಬೊವ್ಯೇರಿಯಂಡ ಜಿ ಬೆಳ್ಯಪ್ಪನವರು | 10 | ,, |
| ,, ಅಮ್ಮತ್ತಿರ ವಿತ್ತಮ್ಮಯ್ಯನವರು | 1 | ,, |
| ,, ದೇವಂಗಡ ಪುಟ್ಟುಸಾಮಿಯವರು | 1 | ,, |
| ,, ಇಟ್ಟಿರ ಕುಟ್ಟಪ್ಪನವರು | 1 | ,, |

8—2


## ಬೇಕಾಗಿದ್ದಾರೆ.

'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಕುಶಲರೂ, ವ್ಯಾಪಕರೂ ಆದ ಏಜಂಟರು ಬೇಕು. ಶ್ರದ್ಧೆಯಿಟ್ಟು ಕೆಲಸ ಮಾಡುವವರಿಗೆ ಒಳ್ಳೆ ಸುಸಂದರ್ಭ. ಯೋಗ್ಯ ಕಮಿಷನುಗಳು ಕೊಡಲಾಗುವದು. ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡೆಯಿಸಿರಿ.

**ಮೇನೇಜರು,**
"ಕೊಡಗು" ಲಿಮಿಟೆಡ್,
ಮಡಿಕೇರಿ.

## "ಸುಮಸರ."

ಭಾಮಿನೀ ಷಟ್ಪದಿ.

ಶಿರಬಾಗಿ ಕೊರಳ ಕೊಂಕಿಸಿ, ನಿಜ |
ಕಂದೊಳ್ಪಿಡಿದೆ ನಾನಿಂದೊಂದು |
ವರ ಕುಸುಮ ಮೂಲೆಯನೆನ್ನ ಮೋಹಕನಿಗರ್ಪಿಸಲೆಂದು ||
ಸರಸದಲಿ ಮೆಲ್ಲಡಿ ಇಡುತೆ ಬರೆ |
ಬಿರಿದ ಕಂಗಳ ಬೆವಕಿನಲಿ ತೋರೆ |
ಸುರಮ್ಯನಿಧಿ ಎನಿಪೆನ್ನ ಶಿಕನ ಮೂರ್ತಿಗವಾಕ್ಕದಲಿ ||೧||

ಅಹಹ! ಏನಿದು? ವಿಧಿಯು ಸೊಬಗು |
ಮೋಹ ಮಿಂಚಿನ ಬಿಗಿದ ಬೆಡಗು |
ಸ್ನೇಹವಯ್ಯೋ? ಸರಸವಯ್ಯೋ? ಕನಕಮಣಿಯೋ?
'ಮುಹಿಯೆ ತಳಿವಂಗೆಣೆ ಎಸರಿಂರ' |
ಮುಹದೇವ! ನಾ ಧನ್ಯಳಾನೈ|
ಮುಹಾಪುರುಷ ನೊಲಿವೆನೆಂಬುದೆನ್ನ ಕಣ್ಮನಕೇ ||೨||

ಇಂತೆಂದು ಸುಮಸರವಹಿಸಿ |
ಕಾಂತನ ಕೊರಳಿಗೆ ಹಾಕುವೆನೆಂದು |
ಸಂತಸದಿ ಮುನ್ನಡಿ ಇಡೆ, ಹಾಯ್! ವೇಸಹೋಯಿತು |
ಕಾಂತನಲ್ಲ! ಕರಾಳ ಕಗ್ಗತ್ತಲೆ! |
ಚಿಂತಾವೇಶದಿ ನೀಡಿದ ಕೈ |
ನಿಂತಲ್ಲಾಯಿತ, ಬಿಸುಸುಯ್ದು, ಧರೆಗುರುಳೆ ಮೂರ್ಛೆಯಲಿ ||೩||

'ಪಾರ್ವತಿ'

## ನೋಟೀಸು.

ಅನ್‌ರೀಡಿಮ್ಡ್ ಜಾಗಗಳಲ್ಲಿರುವ ಗಂಧದ ಮರಗಳಿಗೆ ಬೋನು ಕೊಡುವುದನ್ನು ಕುರಿತು ಸರ್ಕಾರದವರು ಹೊರಡಿಸಿರುವ ಕಡತು ನಿಬಂಧನೆಗಳ ವಿಷಯ ಕಮಿಶನರವರಲ್ಲಿಗೆ ಒಂದು ಡೆಪ್ಯುಟೇಶನ್ ಕಳುಹಿಸುವುದನ್ನು ಆಲೋಚಿಸುವುದಕ್ಕಾಗಿ ಕೊಡಗು ಜವಾನ್ದಾರರ ಸಂಘದ ಕಾರ್ಯಕಾರಿ ಮುಂಡಳಿಯ ವಿಶೇಷ ಸಭೆಯು ತಾರೀಕು 9—2—36ನೇ ಆದಿತ್ಯವಾರ ಗೋಣಿಕೊಪ್ಪಲಲ್ಲಿ ಮಧ್ಯಾಹ್ನ 1 ಗಂಟೆಗೆ ನಡೆಯುವುದು. ಕಮಿಟಿ ಮೆಂಬರುಗಳೆಲ್ಲರೂ ತಪ್ಪದೆ ದಯಮಾಡಿಸಬೇಕಾಗಿ ಕೋರಿಕೆ.

ಜವಾನ್ದಾರರ ಸಂಘ, ಐ. ಪಿ. ಕಾರ್ಯಪ್ಪ
ತಾ, 30—1—'36, (ಗೌ. ಕಾರ್ಯದರ್ಶಿ,)
2—1


ಪ್ರಸಿದ್ಧ ಔಷಧಗಳು.

## ಮಲೇರಿಯಾಕ್ಕೆ ಒಂದೇ ಸಿದ್ಧೌಷಧ.

**ಶುದ್ಧವಾದ ಹಿಂದೂಸ್ಥಾನದ ಮೂಲಿಕೆಗಳಿಂದ ತಯಾರಾದದ್ದು. ಕ್ವಿನಿನನ್ನು ಯಾವ ರೂಪದಲ್ಲಾ ಸೇರಿಸಿಲ್ಲ.**

**"ನವರತ್ನ ಅಲ್ಮಾರಿಯಾ"**

ಹಿಂದೂದೇಶದ ಔಷಧಗಳ ವಿಚಾರದಲ್ಲಿ ಶ್ರೇಷ್ಠತೆಯನ್ನು ಪಡೆದ ಡಾ. ಕೆ. ಯಂ ನಾಡ್ಕರ್ಣಿ ಮತ್ತು ಡಾ. ಕೆ. ಸಿ. ಬೋಸ್‌ರವರ ಗ್ರಂಥಗಳಿಗನುಗುಣವಾಗಿ ಅತೀ ಪರಿಣಾಮಕಾರಕ ಔಷಧಗಳ ಸುಯೋಜನೆಯಿಂದ ತಯಾರಿಸಲ್ಪಟ್ಟ ಈ ಔಷಧವು ಹೆಚ್ಚು ಫಲಕಾರಿಯಾಗಿರುವದು.

**ಇದರಲ್ಲಿರುವ ಔಷಧಗಳು.**

1. Andrographis P niculate
2. Cocculas Cordifolius
3. Berriberies Aristata
4. Vernonis Cinerarea
5. Evolvulas Alsinoides
6. Dashmoola
7. Aconitum Heterophylum
8. Alstonia Scholaris

ಮಲೇರಿಯಾಕ್ಕೆ ಅತ್ಯುತ್ತಮ ಔಷಧಿ ಕ್ವಿನಿನನ್ನು ಯಾವ ವಿಧದಲ್ಲಾ ಸೇರಿಸದೆ ಯಾವ ಬಾಧೆಯನ್ನೂ ಹಾನಿಕರವಾಗದ ಸುಜೀವನ. ಇದನ್ನು ಎಷ್ಟು ಸೇವಿಸಿದರೂ ಕ್ವಿನೀನ್ ಸೇವನೆಯಿಂದ ಉಂಟಾಗಬಹುದಾದ ಮಹಾ ಹಾನಿಗಳ ಭಯವೇ ಇಲ್ಲ. ಒಮ್ಮೆ ಪರೀಕ್ಷಿಸಿದಲ್ಲು ಮತ್ತೆ ಬಿಡಲಾರಿರಿ.

ತಯಾರಿಸುವವರು:—**ದಿ ನವರತ್ನ ಫಾರ್ಮಸಿ,**
**ಪೋ. ಬಾ. ನಂಬರು 68, ಕೊಚಿನ್.**

ಸ್ಟಾಕಿಸ್ಟ್—ಎ. ಎಸ್. ವೂಚಯ್ಯ, ಬಟ್ಟೆ ವ್ಯಾಪಾರಿ, ಸುಂಟಿಕೊಪ್ಪ. 52—37
ಏಜೆಂಟ್—ವಿ. ಬಿ. ಕಾವುತ್, ಮಹದೇವಪೇಟೆ, ಮಡಿಕೇರಿ.

ನವರತ್ನ ಫಾರಿಸಿ,

## ಜಿಲ್ಲಾ ದೇಶ.

1935 ನೇ ಡಿಸೆಂಬರು ತಿಂಗಳಲ್ಲಿ ಕೊಡಗಿನಲ್ಲಿ 309 ಮರಣಗಳೂ, 277 ಜನನಗಳೂ ಸಂಭವಿಸಿದವು.

ಮಡಿಕೇರಿ ಮುನಸೀಫರ ಹುದ್ದೆಯು ಇಂಡಿಯಾ ಸರ್ಕಾರದಿಂದ ಮಂಜೂರಾಗಿದೆಯೆಂದು ತಿಳಿಯಬರುತ್ತದೆ.

ಕಳೆದ ವಾರ ಫ್ರೇಜರ್‌ಪೇಟೆ ಹೋಬಳಿಯ ತೊರೆನೂರಿನಲ್ಲಿ ಮೂವರಿಗೆ ಪ್ಲೇಗು ಅಂಟಿತೆಂದು ತಿಳಿಯುತ್ತೇವೆ.

ಈ ವಾರ ಮಡಿಕೇರಿಯಲ್ಲಿ ಕಾಫಿ ಖಂಡಿಗೆ ರೂ. 132 ಮತ್ತು ವೀರಾಜಪೇಟೆಯಲ್ಲಿ ಭತ್ತ ಗಾಡಿಗೆ ರೂ. 35 ಕ್ರಯ ಎತ್ತಿಂದು ತಿಳಿಯಬರುತ್ತದೆ.

ನಾಪೋಕ್ಲು ಹಯರ್ ಎಲಿಮೆಂಟರಿ ಶಾಲೆಯ 60 ನೇ ವರ್ಷದ ವಜ್ರೋತ್ಸವವು ಈ ತಾ. 15 ನೇ ಶನಿವಾರ ನಡೆಯುವದೆಂದು ತಿಳಿಯಬರುತ್ತದೆ.

ಮಡಿಕೇರಿನಾಡು ಬೆಟ್ಟಗೇರಿ ಗ್ರಾಮದ ಮ. ರಾ. ಕುಟ್ಟಿಯಪ್ಪಚ್ಚನವರು ಈ ತಾ 4 ರಂದು ಸ್ವರ್ಗಸ್ಥರಾದರೆಂದು ತಿಳಿಯುತ್ತೇವೆ.

ಹಿಂದೀ ಪ್ರಾಥಮಿಕ, ಮಧ್ಯಮಿಕ ಮತ್ತು ರಾಷ್ಟ್ರ ಭಾಷಾ ಪರೀಕ್ಷೆಯು ಈ ತಾ. 9 ನೇ ಆದಿತ್ಯವಾರ ಮಡಿಕೇರಿ ಸೆಂಟ್ರಲ್ ಹೈಸ್ಕೂಲು ಹಾಲ್‌ನಲ್ಲಿ ನಡೆಯುವುದು.

ಈ ತಾ. 4 ರಲ್ಲಿ ಕೊಡಗಿನ ಹಲವು ಕಡೆಗಳಲ್ಲಿ ಜೋರಾದ ಮಳೆ ಬಿದ್ದು ಭತ್ತಕ್ಕೂ, ರಾಗಿಗೂ, ಕಾಫಿಗೂ ನಷ್ಟ ಸಂಭವಿಸಿದೆ. ಆ ದಿನ ಮಡಿಕೇರಿಯಲ್ಲಿ 24 ಸೆಂಟ್ ಮಳೆಯಾಯಿತು.

ಕೊಡಗು ಶಾಲಾ ಇನ್‌ಸ್ಪೆಕ್ಟರಾದ ಮೆ. ಎಡ್ಮಂಡ್ಸ್‌ರವರು ತಮ್ಮ ಹೊಸ ಹುದ್ದೆಯಾದ ಒಂದು ವಿಚಾರಣಾ ಕಮಿಟಿಯ ಸೆಕ್ರೆಟರಿತನವು ಮುಗಿದ ಕೂಡಲೆ ಎಂಟು ತಿಂಗಳು ರಜೆ ತೆಗೆದುಕೊಳ್ಳುವರು.

ರಾಜಮಹೇಂದ್ರಿ ಸರ್ಕಾರಿ ಟ್ರೈನಿಂಗ್ ಕಾಲೇಜಿನ ಪ್ರಿನ್ಸಿಪಾಲರಾದ ಮೆ. ಯಂ. ಯಸ್. ಹಡ್. ಥಾಮಸನ್‌ರವರು ಈ ತಾ 8 ರಿಂದ ಕೊಡಗು ಮತ್ತು ಬೆಂಗಳೂರು ಶಾಲೆಗಳ ಹಂಗಾಮಿ ಇನ್‌ಸ್ಪೆಕ್ಟರಾಗಿ ನೇಮಿಸಲ್ಪಟ್ಟಿರುವರು.

ಈ ತಾ. 21 ರಲ್ಲಿ ಶ್ರೀಮಂಗಲನಾಡು ಕುಚ್ಚಿ ಗ್ರಾಮದಲ್ಲಿ ನಡೆಯುವ ಮಹಾ ಶಿವರಾತ್ರಿಯ ಇವ್ಹಾ ಜಾತ್ರೆಗೆ ಪ್ಲೇಗು ಯಾ ವಾಂತಿಭೇದಿ ರೋಗ ತಗಲಿದ ಪ್ರದೇಶಗಳಿಂದ ಜನರು ಬರುವುದನ್ನು ಚೀಫ್ ಕಮಿಷನರು ನಿರೋಧಪಡಿಸಿರುವರು.

ಮೂವುಕೂಟ ರಸ್ತೆಯ ಮೇಮನಕೊಲ್ಲಿಯಲ್ಲಿರುವ ಒಂದು ಒರಟಿಗೆ ಕೊಂಬಾನಿಯು 'ರೋಗ್' (ಕಳ್ಳ)ನೆಂದು ನಿಶ್ಚಯಿಸಲ್ಪಟ್ಟಿದೆಯೆಂದೂ, ಅದನ್ನು ಕೊಲ್ಲಲು ಇಚ್ಛಿಸುವವರು ಲೈಸನ್ಸಿಗೆ ಅರ್ಜಿ ಹಾಕಬಹುದೆಂದೂ ಕಮಿಷನರವರು ಪ್ರಕಟಿಸಿರುವರು.

ಕೊಡಗಿನ ಕಮಿಷನರಾಗಿರುವ ಮೆ. ಜಿ. ಯಸ್. ಬಾಸ್ ಮೆನ್‌ರವರು ಇಂಡಿಯಾ ಸರ್ಕಾರದ ವಿದ್ಯಾ, ಆರೋಗ್ಯ ಮತ್ತು ಜವಾನು ಇಲಾಖೆಯ ಡೆಪ್ಯುಟಿ ಸೆಕ್ರೆಟರಿಯವರಾಗಿ ನೇಮಿಸಲ್ಪಟ್ಟಿರುವರು. ಇವರು ಬರುವ ಮಾರ್ಚಿ ತಿಂಗಳ ಸುರುವಿನಲ್ಲಿ ಡೆಲ್ಲಿಗೆ ಹೋಗುವರಾಗಿ ತಿಳಿಯಬರುತ್ತದೆ

ಮಡಿಕೇರಿ ಮುನಸೀಫ್ ಕೋರ್ಟಿಗೆ ಉತ್ತರ ಕೊಡಗು ಪೂರ್ತಿ ಮತ್ತು ನಾಪೋಕ್ಲು ನಾಡಿನ ನಾಲಡಿ, ಅಯ್ಯಂಗೇರಿ, ಫಲಿಕೋಟು, ಬಲ್ಲಮಾವಟಿ, ಪೇರೂರು, ನೆಲಜಿ, ಯೆಮ್ಮೆವಾಡು, ನಾಪೋಕ್ಲು, ಕೊಳಕೇರಿ, ಕುಂಜಿಲ ಮತ್ತು ಬೇತು ಗ್ರಾಮಗಳು ಸೇರುತ್ತವೆ. ವೀರಾಜಪೇಟೆ ಮುನಸೀಫ್ ಕೋರ್ಟಿಗೆ ನಾಪೋಕ್ಲು ನಾಡಿನ ಮೇಲಿನ 11 ಗ್ರಾಮಗಳ ಏನಹ ಇಡೀ ದಕ್ಷಿಣ ಕೊಡಗು ಸೇರುತ್ತದೆ ಎಂದು ಗಜೆಟಿನಲ್ಲಿ ಪ್ರಕಟವಾಗಿದೆ.

ಮೈಸೂರು ಸೈನ್ಯದಲ್ಲಿ ಕೇಡೆಟ್ ಆಫೀಸರಾಗಿರುವ ಮೆ. ಕೂತಂಡ ಯಂ. ಚಂಗಪ್ಪನವರು ಕಳೆದ ಜನವರಿ ತಿಂಗಳಲ್ಲಿ ನಡೆದ ಮೈಸೂರು ಸಂಸ್ಥಾನದ 'ಒಲಿಂಪಿಕ್' ಸ್ಪೋರ್ಟ್ಸ್'ನಲ್ಲಿ 220 ಗಜ, 440 ಗಜ, 880 ಗಜ ಮತ್ತು 1 ಮೈಲು ಓಟಗಳಲ್ಲೆಲ್ಲಾ (1933—34 ರ ತಮ್ಮ 'ರೆಕಾರ್ಡ್'ಗಳನ್ನೆಲ್ಲಾ ಏರಿ) ಒಂದನೇ ಇನಾಮುಗಳನ್ನು ಪಡೆದರೆಂದೂ, ಅವರ ಅರ್ಹತೆಯನ್ನು ಅರಿತು ಒಲಿಂಪಿಕ್ ಕಮಿಟಿಯವರು ಈ ತಾ. 14 ಮತ್ತು 15 ರಲ್ಲಿ ಲಾಹೋರಿನಲ್ಲಿ ನಡೆಯುವ ಅಖಿಲ ಭಾರತ 'ಒಲಿಂಪಿಕ್ ಸ್ಪೋರ್ಟ್ಸ್'ಗೆ ಅವರನ್ನು ಮೈಸೂರು ಸಂಸ್ಥಾನದ ಪ್ರತಿನಿಧಿಯಾಗಿ ಆರಿಸಿರುವರೆಂದೂ ಕೇಳಿ ಸಂತೋಷಪಡುತ್ತೇವೆ.

---

## ಹಿಂದೂದೇಶ.

ಮದರಾಸು ಸರ್ಕಾರವು ಈ ವರ್ಷದ ಭೂಕಂದಾಯದಲ್ಲೂ ಕಳೆದ ವರ್ಷದ ಹಾಗೆ ಶೇಕಡ 12½ ಗೆ ಏರಿದೆ ಮೂಫಿ ಬಿಡಲು ನಿರ್ಧರಿಸಿದೆ.

ಬಿರುದು ಬಾವಲಿಗಳನ್ನು ಪಡೆದಿರುವವರಾರೂ ಕಾಂಗ್ರೆಸ್ ಸದಸ್ಯರಾಗಲನರ್ಹರೆಂದು ಕರೆಕುಡಿಯಲ್ಲಿ ನಡೆದ ತಮಿಳು ನಾಡು ಕಾಂಗ್ರೆಸ್ಸಿನ ಸಮ್ಮೇಳನದಲ್ಲಿ ತೀರ್ಮಾನವಾಗಿದೆ.

ಗುರುದ್ವಾರದ ಪ್ರಭಾಂಡಕ್ ಸಮಿತಿಯ ಶ್ರೀ ನಾನ್ಕಾನಾ ಸಾಹೇಬರು ಹರಿಜನೋದ್ಧಾರಕ್ಕಾಗಿ 3 ಲಕ್ಷ ರೂಪಾಯಿಗಳನ್ನು ದಾನ ಕೊಟ್ಟಿರುವರು.

ತಮಿಳುನಾಡು ಪ್ರಾಂತೀಕ ಕಾಂಗ್ರೆಸ್ ಕಮಿಟಿಗೆ ಪುನಃ ಶ್ರೀ ಸತ್ಯಮೂರ್ತಿಯವರೇ ಅಧ್ಯಕ್ಷರಾಗಿ ಜುನಾಯಿತರಾಗಿದ್ದಾರೆ. ಶ್ರೀಮತಿ ರುಕ್ಮಿಣಿ ಲಕ್ಷ್ಮೀಪತಿಯವರು ಉಪಾಧ್ಯಕ್ಷರಾಗಿರುವರು.

ಪಂ. ಜವಾಹರಲಾಲರು ಕರಾಚಿಗೆ ಬಂದಾಗ ನೂತನವಾಗಿ 3 ಲಕ್ಷ ರೂ. ಖರ್ಚಿನಿಂದ ಕಟ್ಟಿಸಿರುವ ಹಿಂದಿ ವ್ಯಾಪಾರಿ ಸಂಘದ ಕಟ್ಟಡದ ಪ್ರವೇಶೋತ್ಸವನ್ನು ಮಾಡುವರಾಗಿ ತಿಳಿದು ಬರುತ್ತದೆ.

ಲೂದಿಯಾನದಲ್ಲಿ ಸ್ವದೇಶಿ ಪಿಕ್ಚರ್‌ಗಳನ್ನು ಮಾಡುವ ಸ್ಥಳವನ್ನು ಪತ್ತೆ ಮಾಡುವ ಕೆಲಸದಲ್ಲಿ ಪೊಲೀಸರು ಮಗ್ನರಾಗಿದ್ದಾರೆ. ಈಚೆಗೆ ಕೆಲವು ಸ್ವದೇಶಿ ಪಿಕ್ಚರ್‌ಗಳು ಕಂಡು ಹಿಡಿಯಲ್ಪಟ್ಟಿವೆಯಂತೆ.

ಗೋವಿಂದಲಾಲ್ ಘೋಷ್ ಎಂಬವರು ಕಳೆದ ಜನವರಿ ತಾ. 18ರಲ್ಲಿ ಬಂಗಾಳದ ಪ್ರಧಾನ ನ್ಯಾಯಾಧೀಶರ ಆಸನದಲ್ಲಿ ಕುಳಿತ ಆಪಾದನೆಯ ಮೇಲೆ ಅವರಿಗೆ ಹಿಂದು ವರ್ಷ ಕಠಿಣ ಸಜೆ ವಿಧಿಸಲ್ಪಟ್ಟಿರುವರು.

ವಾಯವ್ಯ ಪ್ರಾಂತಗಳ ಕೆಂಪಂಗಿಗಳ ಪಕ್ಷದವರು ಪೇಶಾವರ ಜಿಲ್ಲೆಗೆ ಸೇರಿದ ಮೂರ್ದಾನ್ ನಗರ ಸಭೆಯ ಚುನಾವಣೆಗೆ ತಮ್ಮ ಕಡೆಯ ಉಮೇದ್ವಾರರನ್ನು ನಿಲ್ಲಿಸುವುದಕ್ಕೆ ನಿರ್ಧರಿಸಿದ್ದಾರೆ. ಎಂಟು ಸ್ಥಾನಗಳ ಪೈಕಿ ಏಳಕ್ಕೆ ಇರುವ ತಮ್ಮ ಪ್ರತಿನಿಧಿಗಳನ್ನು ನಿಲ್ಲಿಸುವರು.

ವೇದಾಂತ ವಿಷಯದಲ್ಲಿ ಅದ್ವಿತೀಯ ಪಂಡಿತರೂ, ಪ್ರಕೃತ ಆಂಧ್ರ ವಿಶ್ವವಿದ್ಯಾಲಯದ ವೈಸ್ ಚಾನ್ಸಲರೂ ಆಗಿರುವ ಡಾ. ಸರ್ ರಾಧಾಕೃಷ್ಣನ್‌ರವರು ಆಕ್ಸ್‌ಫೋರ್ಡ್ ವಿಶ್ವವಿದ್ಯಾಲಯದ ಪ್ರೊಫೆಸರರಾಗಿ ನೇಮಕಹೊಂದುವರೆಂದು ವದಂತಿಯಿದೆ. ಡಾ. ರಾಧಾಕೃಷ್ಣನರವರು ಪ್ರೊಫೆಸರ್ ಆಫ್ ಕಂಪೇರಿಟಿವ್ ರಿಲಿಜನ್ಸ್ ಆಗಿ ಕೆಲಸಮಾಡುವರು.

ಬೊಂಬಾಯಿಯ ಸುಪ್ರಸಿದ್ಧ ಕಾಂಗ್ರೆಸ್ ಮಹಿಳೆಯಾದ ಮಿಸ್ ಸೋಫಿಯಾ ಸೋವಿಯವರ ಮತ್ತು ಡಾಕ್ಟರ್ ಖಾನ್‌ಸಾಹೇಬ್ ಎ. ಎಸ್. ಎ. ಯವರ ಪುತ್ರ ಎಂ. ಸಾದುಲ್ಲಾ ಖಾನರ ವಿವಾಹವು ಕಳೆದ ತಾ. 26ರಲ್ಲಿ ಬೊಂಬಾಯಿಯಲ್ಲಿ ಹಲವು ರಾಷ್ಟ್ರ ಮುಖಂಡರ ಸಮಕ್ಷಮದಲ್ಲಿ ವಿಧಿವತ್ತಾಗಿ ನೆರವೇರಿತು.

ಕಳೆದ ಒಂದು ವಾರದಲ್ಲಿ 76,93,967 ರೂ. ಗಳ ಬೆಲೆ ಬಾಳುವಷ್ಟು ಚಿನ್ನವು ಮುಂಬಯಿಂದ ವಿದೇಶಗಳಿಗೆ ಹೋಯಿತು. ವಿಲಾಯಿತಿಯಲ್ಲಿ ಚಿನ್ನದ ನಿಷೇಧವಾಜ್ಞೆ ಬೆಲೆಯು ತಪ್ಪಿದನಂತರ ಭಾರತದಿಂದ 2,59,92,52,473 ರೂ. ಗಳ ಬೆಲೆ ಬಾಳುವ ಚಿನ್ನವು ಹೊರಟು ಹೋಗಿದೆ.

ಹಿಂದೂಸ್ಥಾನದಲ್ಲಿ ಬೆಳೆದ ಕಾಫಿಯನ್ನು ಸಮುದ್ರದ ಮೇಲಾಗಲಿ, ಭೂಮಿಯ ಮೇಲಾಗಲಿ ಬ್ರಿಟಿಷ್ ಇಂಡಿಯಾ ದೇಶದಿಂದ ಹೊರದೇಶಗಳಿಗೆ ರಫ್ತು ಮಾಡಿದಲ್ಲಿ 28 ಪರ್ಸೆಂಡ್ ತೂಕಕ್ಕೆ ಎರಡಾಣೆಯಂತೆ ಸುಂಕ ವಸೂಲುಮಾಡಲಾಗುತ್ತೆಂದು ಇಂಡಿಯಾ ಸರ್ಕಾರದವರು ಪ್ರಕಟಣೆ ಹೊರಡಿಸಿರುತ್ತಾರೆ.

ಮ. ಗಾಂಧಿಯವರು ದಿನ ದಿನಕ್ಕೂ ಗುಣಹೊಂದುತ್ತಿರುವುದಾಗಿಯೂ, ಆರು ಪೌಂಡಿನಷ್ಟು ಅವರ ತೂಕ ಈಗ ಹೆಚ್ಚಿರುವುದಾಗಿಯೂ ಡಾಕ್ಟರು ಅಭಿಪ್ರಾಯಪಟ್ಟಿರುತ್ತಾರೆ. ಮ. ಗಾಂಧಿಯವರು ಅಹಮದಾಬಾದಿನ ಗುಜರಾತ್ ವಿದ್ಯಾಪೀಠದಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾರೆ. ಅವರು ಪೂರ್ಣ ಗುಣಹೊಂದಬೇಕಾದಲ್ಲಿ ಇನ್ನೂ ಮೂರು ವಾರಗಳು ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ವೈದ್ಯರು ತಿಳಿಸಿರುತ್ತಾರೆ.

ಕಾನ್‌ಪುರದಿಂದ 40 ಮೈಲು ದೂರದಲ್ಲಿರುವ ಮುಖಾನ್‌ಪುರ ಮೇಳ ಪೊಲೀಸ್ ಸ್ಟೇಷನಿನಲ್ಲಿ ಅಕಸ್ಮಾತ್ ಬೆಂಕಿ ತಗಲಿ 20 ಬಂದೂಕುಗಳೂ 200 ತೋಟಗಳೂ ಕೆಲವು ಪಾತ್ರೆಗಳೂ ಪೊಲೀಸರ ಉಡುಪುಗಳೂ ಸುಟ್ಟು ಹೋದವು. ಚಳಿಗಾಗಿ ಹಾಕಿದ್ದ ಬೆಂಕಿಯು ಹುಡಿ ಈ ಅನಾಹುತ. ಕೆಲವು ಪೊಲೀಸರ ಮೈ ಸ್ವಲ್ಪ ಮಟ್ಟಿಗೆ ಸುಟ್ಟು ಹೋಗಿದೆಯಂತೆ.

ಪೂನಾದಲ್ಲಿ ಜರಗಿದ ಶುದ್ಧಿ ಮತ್ತು ಸಂಘಟನೆ ಪರಿಷತ್ತುಗಳಿಗೆ ಅಧ್ಯಕ್ಷತಾಗಿನ್ದ ಜಗದ್ಗುರು ಶ್ರೀ ಶಂಕರಾಚಾರ್ಯರು (ಡಾ. ಕುರ್ತು ಕೋಟಿಯವರು) ಅಸ್ಪೃಶ್ಯತಾ ನಿವಾರಣ ಸಂಘವೆಂಬ ಒಂದು ಹೊಸ ಸಂಘವನ್ನೇರ್ಪಡಿಸಿ ಹರಿಜನರ ಉದ್ಧಾರಕ್ಕಾಗಿ ಬೇಕಾದ ಕೆಲಸಗಳನ್ನು ಮಾಡುತ್ತಿರುವರು. ಇವರ ಸಂಘದವರ ಯತ್ನದಿಂದ ಹರಿಜನ ಮತ್ತು ಇತರ ಹಿಂದುಗಳಲ್ಲಿದ್ದ ವೈಷಮ್ಯವು ಕಡಿಮೆಯಾಗುತ್ತಿದೆ.

ಕಾಕೋರಿ ಕೇಸಿನ ಕೈದಿಯಾದ ಜೋಗೇಶ ಚಟರ್ಜಿಯವರು 86 ದಿನಸಗಳಿಂದ ನಿರಾಹಾರ ವ್ರತವನ್ನು ಕೈಕೊಂಡಿರುವರು. ಅವರ ಪ್ರಕೃತಿಯು ಕಳವಳಾಸ್ಪದವಾಗಿರುತ್ತದಾದುದರಿಂದ ಭಾರತದ ಅನೇಕೆಡೆಗಳಲ್ಲಿ ಸಭೆಗಳು ಕೂಡಿ ಅವರ ಕೇಳಿಕೆಗಳನ್ನು ಪೂರೈಸಿ ಮನ್ನಿಸುವಂತೆ ಸರ್ಕಾರದವರಿಗೆ ಅಪೀಲು ಮಾಡಿದವು. ಈ ವಿಷಯದ ಒಂದು ಠರಾವನ್ನು ಅಖಿಲ ಚಂದ್ರ ದತ್ತರು ಎಸೆಂಬ್ಲಿಯಲ್ಲಿ ತರಬೇಕಾದದಕ್ಕೆ ಸರ್ಕಾರದ ಅನುಮತಿ ದೊರೆಯಲಿಲ್ಲ.

ಅಲ್ಲಹಾಬಾದಿನ ಕುಂಭಮೇಳಕ್ಕೆ ತನ್ನ ಯಜಮಾನನಾದ ಒಬ್ಬ ಸಾಧುವಿನೊಂದಿಗೆ ಅತನು ಸಾಕಿದ ಒಂದು ಹುಲಿಯೂ ಬಂದಿತ್ತು. ಆದರೆ ಈ ಪ್ರಾಣಿ ಕ್ರೂರವಲ್ಲ, ಸಾಧುವಿನಷ್ಟೇ ಸಾಧು. ಇದರ ಆಹಾರ ತರಕಾರಿಗಳು ಇದು ಮತಬೋಧೆ ನಡೆಯುವಲ್ಲೆಲ್ಲ ಹೋಗಿ ಅದನ್ನು ಕಿವಿಗೊಟ್ಟು ಕೇಳುತ್ತಿದ್ದಿತು. ಗೀತಾಧರ್ಮಮಂಡಲದ ಕ್ಯಾಂಪಿನಲ್ಲಿ ಇದು ಯಾವಾಗಲೂ ಯಜಮಾನನೊಂದಿಗೆ ಹಾಜರು. ಇದರ ಯಜಮಾನ ಸಾಧುವು ಬೊಂಬಾಯಿಯ ಬಾಬಾ ಕೃಷ್ಣಾನಂದ.

ಸರ್ ಜೆ ಸಿ ಬೋಸರಿಗೂ, ಸರ್ ಪಿ. ಸಿ. ರೇಯವರಿಗೂ ಡಾಕ್ಟರ್ ಆಫ್ ಸೈನ್ಸ್ (ವಿಜ್ಞಾನ ಆಚಾರ್ಯ), ಬಂಗಾಳದ ಮಾನ್ಯ ಗವರ್ನರ್ ಸರ್ ಜಾನ್ ಎಂಡರ್ಸನ್‌ರವರಿಗೂ, ಎಬ್ಲಿ ಪ್ರೆಸಿಡೆಂಟ್ ಸರ್ ಅಬ್ದುಲ್ ರಹೀಮರಿಗೂ ಡಾಕ್ಟರ್ ಆಫ್ ಲಾ (ನ್ಯಾಯಶಾಸ್ತ್ರ ಪಂಡಿತ), ಅಲ್ಲದೆ ಸರ್ ಜಾದುನಾಥ್ ಸರ್ಕಾರ್, ಕವಿವರ್ಯ ರವೀಂದ್ರನಾಥ್ ಠಾಗೂರ್ ಬಂಗಾಳಿ ನಾವೆಲ್ಲುಗಳ ಸುಪ್ರಸಿದ್ಧ ಲೇಖಕ ಶ್ರೀ ಶರತ್ಚಂದ್ರ ಚಟರ್ಜಿ, ಸರ್ ಮಹಮದ್ ಇಕಬಲ್‌ರವರಿಗೆ ಡಾಕ್ಟರ್ ಆಫ್ ಲಿಟರೇಚರ್ (ಸಾಹಿತ್ಯ ಆಚಾರ್ಯ) — ಈ ರೀತಿ ಗೌರವಾರ್ಥದ ಬಿರುದುಗಳನ್ನು ಡಾಕಾ ಯೂನಿವರ್ಸಿಟಿ ಕೋರ್ಟ್‌ನವರು ಕೊಟ್ಟಿರುತ್ತಾರೆ.

ಬೆಂಗಳೂರು ಎಪೆಕ್ಸ್ ಬ್ಯಾಂಕ್ ಹಣವ್ಯವಹಾರವನ್ನೆ ನೆಚ್ಚಿದ್ದವರೆಲ್ಲರ ಕಷ್ಟವನ್ನು ಕಳೆವ ತೀರ್ಮಾನವನ್ನು ಕಳೆದ ಶನಿವಾರ ಸಭೆ ಮ್ಯಾಜಿಸ್ಟ್ರೇಟ್ ಮೆ ಬಿ. ಎನ್. ನಾಗರಾಜಾಚಾರಿಯರು ಹೇಳಿದರು ದೇನೆಂದರೆ—ಬ್ಯಾಂಕಿನ ಅ. ಸೆಕ್ರೆಟರಿ ಎಸ್. ವೆಂಕಟಸುಬ್ಬಯ್ಯನು ನಂಬಿಕೆ ದ್ರೋಹ ಮಾಡಿದನೆಂದು ಎರಡು ವರುಷ ಕಠಿಣ ಸಜಾ ಶಿಕ್ಷೆಯನ್ನೂ, 1,000 ರೂಪಾಯಿ ಜುಲ್ಮಾನೆ ವಸೂಲಕ್ಕೆಗಳನ್ನು ತಿದ್ದಿದನೆಂಬ ತಕ್ಸೀರಿಗಾಗಿ ಇನ್ನಾ ಎರಡು ವರ್ಷ ಕಠಿಣ ಸಜಾ ಶಿಕ್ಷೆಯನ್ನೂ, ಈ ಎರಡು ಶಿಕ್ಷೆಗಳೂ ಏಕಕಾಲದಲ್ಲಿಯೇ ಅನುಭವಿಸತಕ್ಕದ್ದು. ಜುಲ್ಮಾನೆ ವಸೂಲಾಗದಿದ್ದಲ್ಲಿ ಇನ್ನೂ ಆರು ತಿಂಗಳ ಕಠಿಣ ಶಿಕ್ಷೆ ಅನುಭವಿಸಬೇಕೆಂದೂ ಜುಲ್ಮಾನೆ ವಸೂಲಾದಲ್ಲಿ 500 ರೂ. ಬ್ಯಾಂಕಿಗೆ ಪರಿಹಾರ್ಯವಾಗಿ ಕೊಡಬೇಕೆಂದೂ ತೀರ್ಮಾನಿಸಿರುತ್ತಾರೆ.

---

## ವಿದೇಶ.

ಈಗ ಹೊಸ ನಮೂನೆಯ ಯಂತ್ರವೊಂದು ತಯಾರಾಗಿದೆ. ಹಾಳು ನಾಣ್ಯಗಳನ್ನು ಕೊಟ್ಟರೆ ಆ ಯಂತ್ರವು ಅವುಗಳನ್ನು ಹಿಂದಕೊಡುವುದಲ್ಲದೆ 'ಮಯೂರಾಡಿ ಒಳ್ಳೆ ನಾಣ್ಯಗಳನ್ನು ಕೊಡಿ ಸ್ವಾಮಿ' ಎನ್ನುತ್ತದೆ.

ಸ್ವಿಟ್ಸರ್‌ಲೇಂಡಿನ ಜ್ಯೂರಿನ್ ನಾಜೀ ಪಕ್ಷದ ಮುಖ್ಯರಾದ ಹರ್ ಗಸೆಲ್ಟ್‌ಲೀಫ್ ಎಂಬವರನ್ನು ಡೇವಿಡ್ ಫ್ರಾಂಕ್‌ಫರ್ಟರ್ ಎಂಬ ಯೆಹೂದಿಕನು ಗುಂಡು ಹೊಡೆದು ಕೊಂದಿರುವನು. ಈತನು ಅನಂತರ ಪೊಲೀಸರ ಕೈಗೆ ಸಿಕ್ಕಿರುವನು. ಹಿಟ್ಲರ್ ಹಿಟ್ಲರರು ಈ ವಿಷಯದಲ್ಲಿ ತಮ್ಮ ಸಹಾನುಭಾವವನ್ನು ಸೆಲ್ಟ್‌ಲೀಫರ ಪತ್ನಿಯವರಿಗೆ ತಿಳಿಸಿರುವರು.

ಆಗೋಸ್ತು ತಿಂಗಳಲ್ಲಿ ಲಾಡನಲ್ಲಿ ವಿಶೇಷವಾದ ಸಂಚಾರ ಬಿಸಿಲಿತ್ತು. ಇದರಿಂದ ಬಸ್ ಟ್ರಾಮ್‌ವೇ ಕಾರುಗಳ ಮೂಲೀಕರಿಗೆ ಒಳ್ಳೆಯ ಲಾಭವಾಯಿತು. ಬಸ್ಸುಗಳಲ್ಲಿಯೂ ಟ್ರಾಮುಗಳಲ್ಲಿಯೂ ಸಂಚರಿಸುವ ಜನರು ಅವಸರದಲ್ಲಿ ಹೋಗುವಾಗ ಕೊಡೆಗಳನ್ನು ಹಿಂದೆ ಬಿಟ್ಟುವರಿಂದ ಒಂದು ವಾರದೊಳಗೆ 1158 ಕೊಡೆಗಳು ಕಂಪೆನಿಯವರಿಗೆ ದೊರೆಯಂತೆ!

ಜಪಾನ್ ಸೈನಿಕರಿಗೂ ವ್ಯೋಮಯಾನಕೂಪೋ ಸೈನಿಕರಿಗೂ ಕಳೆದವಾರ ವ್ಯೋಮಯಾನಕೂಪೊಂದಿಗೆ ಪೂರ್ವದಿಕ್ಕಿನಲ್ಲಿ ವಿಮಾನ್ ಎಂಬ ಊರಿನ ಬಳಿ ಕಾದಾಟ ನಡೆಯಿತು. ಎರಡು ಪಕ್ಷದವರಲ್ಲೂ ಹಲವರು ತೀರಿಹೋಗಿರುತ್ತಾರೆ. ಸೋವಿಯಟ್ ರಷ್ಯಾ ಸರ್ಕಾರದವರು ವ್ಯೋಮಯಾನಕೂಪೊಯವರಿಗೆ ಬೆಂಬಲವಾಗಿ ನಿಂತು ಈ ಕಲಹ ನಡೆಸಿರುತ್ತಾರೆಂದು ಜಪಾನಿನವರು ಆಕ್ಷೇಪಿಸಿರುತ್ತಾರೆ.

ಜರ್ಮನಿಗೆ ಸೇರಿದ ಕಿಚೆನ್ ಎಂಬಲ್ಲಿ ಒಂದು ಮನೆ ಬೆಂಕಿತಗಲಿತು. ಆ ಊರಲ್ಲಿ ಬಾವಿಗಳೆಲ್ಲಾ ಬತ್ತಿಹೋದದರಿಂದ ಬೆಂಕಿ ಆರಿಸುವ ರೀತಿಯು ಗ್ರಾಮಸ್ಥರಿಗೆ ತೋಚಿಹೋಯಿತು. ಕೊನೆಗೆ ಅವುಗೆ ತಮ್ಮಲ್ಲಿದ್ದ ಹಾಲಿನ ಪುಂಜ ಬಂತು. ಹಾಲನ್ನು ತಂದು ಅಗ್ನಿದೇವನ ಮೇಲೆ ಸುರಿದು. ಅಗ್ನಿದೇವನು ಶಾಂತನಾದನು. ಹಾಲೇನೋ ಸಾಕಷ್ಟು ನಷ್ಟವಾಯಿತು

---

## ವಿಜ್ಞಾಪನೆ.

ಕುಂದಾಯ ಮೂಫಿ ಭೂಮಿ ಗಿವಿ ಬ್ಯಾಂಕು, ಮತ್ತು ಕೊಡಗಿನ ರಾಜಕೀಯ ಸುಧಾರಣೆ—ಈ ವಾಗ್ದಾನ್ಯ ವಿಷಯಗಳನ್ನು ಚರ್ಚಿಸಲಿಕ್ಕಾಗಿ ಕೊಡಗು ಜವಾನ್ವಾರು ಸಂಘದ ಆಶ್ರಯದಲ್ಲಿ ಈ ಕೆಳಗಿನ ಸ್ಥಳಗಳಲ್ಲಿ ಸಾರ್ವಜನಿಕ ಸಭೆಗಳು ನಡೆಸಲ್ಪಡುವವು. ಸರ್ವರೂ ದಯಮಾಡಿಸಬೇಕಾಗಿ ಕೋರಲಾಗಿದೆ.

| ಸ್ಥಳ. | ತಾರೀಕು. |
|---|---|
| ಹುದಿಕೇರಿ | 10—2—'36 ಮಧ್ಯಾಹ್ನ |
| ಅಮ್ಮತ್ತಿ | 11—2—'36 ,, |
| ವೀರಾಜಪೇಟೆ | 12—2—'36 ,, |
| ನಾಪೋಕ್ಲು | 17—2—'36 ,, |
| ಮಡಿಕೇರಿ | 20—2—'36 ,, |

ಜವಾನ್ವಾರು ಸಂಘ, ಐ. ಪಿ. ಕಾರ್ಯದರ್ಶಿ
ತಾ. 5—2—'36. (ಗೌ. ಕಾರ್ಯದರ್ಶಿ)

## ಪ್ರಶ್ನವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ]

### ತಲೆಹೊಡೆದು ಅಳತೆಮಾಡಬೇಕೆಂದು ಬಲಾತ್ಕರಿಸುವುದು ಕಾನೂನಿಗೆ ವಿರೋಧ.

ಅಯ್ಯಾ,

ಕೊಡಗಿನಲ್ಲಿ ಶೇರು ಪಾವುಗಳ ಅಳತೆಯ ವಿಷಯವಾಗಿ ಗೊಂದಲವೆದ್ದಿದೆ. ಹೊಸ ಶೇರು ಮತ್ತು ಪಾವುಗಳಲ್ಲಿ ತಲೆ ತುಂಬಕೊಟ್ಟರೂ, ತಲೆ ಹೊಡೆದುಕೊಟ್ಟರೂ ಅಂಗಡಿಯವರು ಹಿಂದೇ ಕ್ರಯವನ್ನು ತೆಗೆದುಕೊಳ್ಳುತ್ತಿರೆ. ಮೂತ್ರವಲ್ಲದೆ ನೀರುಳ್ಳಿ, ಬೆಳ್ಳುಳ್ಳಿ, ಅವ, ತೊಗರಿ ಮುಂತಾದವುಗಳನ್ನು ಕೊಂಡುಕೊಳ್ಳುವಾಗ್ಗೆ ಕೊಂಡುಕೊಳ್ಳುವವರಿಗೆ ತೀರ ಅನ್ಯಾಯದ ಪರಿಮಾಣಗಳು ಸಿಕ್ಕುತ್ತವೆ. ಅಳತೆಗಳ ವಿಷಯದಲ್ಲಾ ಸಹ ಕೊಡಗಿಗೆ ಪ್ರತ್ಯೇಕತೆಯೂ ಬೇಕೆಂದರೆ ಹೊಸ ಬೆಲೆಯ ಧಾನ್ಯಗಳನ್ನೂ ಸಹ ತಯಾರಿಸಿ, ಮೈಸೂರು, ಮಲಬಾರುಗಳ ಅಳತೆಗಳ ಕ್ರಯಗಳಿಗೂ ಕೊಡಗಿನ ಅಳತೆಗಳ ಕ್ರಯಗಳಿಗೂ ಪರಿಸ್ಪರ ಸಂಬಂಧ ಕಲ್ಪನೆಯನ್ನ ನಿಷ್ಕರ್ಷೆ ಮಾಡಲು ಅನುಕೂಲ ಕೊಡಬೇಕು. ಹಾಗಿಲ್ಲದೆ ಇರುವಾಗ, ಅಳತೆಗಳ ಇನ್‌ಸ್ಪೆಕ್ಟರವರು ತಲೆಹೊಡೆದೇ ಅಳತೆಮಾಡಬೇಕೆಂದು ಜನರನ್ನು ಒಲಾತ್ಕರಿಸುವುದನ್ನು ನೋಡಿದರೆ ಪ್ರತಿಯೊಬ್ಬರಿಗೂ ಮೈಯುರಿಯದೆ ಇರುವುದಿಲ್ಲ. ತಲೆಹೊಡೆದು ಅಳತೆಮಾಡುವುದು ಬೇಗ ಬೇಗ ಅಳತೆಮಾಡುವುದಕ್ಕೆ ಅಡ್ಡಿಯಾಗುತ್ತದೆ; ಮೂತ್ರವಲ್ಲದೆ ಕೊಂಡುಕೊಳ್ಳುವವರಿಗೂ ಮಾರುವವರಿಗೂ ಅನ್ಯಾಯವಾಗುತ್ತದೆ. ಅಳತೆಯಲ್ಲಿ ಹೆಚ್ಚು ಕಡಿಮೆ ಮಾಡುವುದಕ್ಕೆ ಇನ್ನಷ್ಟು ಸುಲಭವಾಗುತ್ತದೆ. ಕೊಂಡುಕೊಳ್ಳುವವರಿಗೂ ನಷ್ಟವು ವಿಪರೀತ. ಆದುದರಿಂದ ಪ್ರತಿಯೊಬ್ಬರೂ ಮೊದಲಿನಂತೆ ತಲೆತುಂಬಿಯೇ ಕೊಂಡುಕೊಳ್ಳಲೂ, ಮಾರಲೂ ಬೇಕೆಂದು ನಾನು ಅಪೇಕ್ಷಿಸುತ್ತೇನೆ. ಕೊಡಗಿನಲ್ಲಿ ಅಳತೆಯ ಕಾನೂನು ಮಾಡುವುದಕ್ಕೆ ಸಲಹೆ ಕೊಟ್ಟವರು ವ್ಯವಹಾರಾಂದ ವಾಸನೆ ಎಳ್ಳಷ್ಟು ಇಲ್ಲದವರೇ ಆದವರೆಂದು ಹೇಳಬಹುದಾದರೂ ಕಾನೂನು ಇರುವಷ್ಟು ಮಟ್ಟಿಗೆ ಜನರು ಅನುಕೂಲಪಟ್ಟು ಕೊಳ್ಳುವುದಕ್ಕೆ ಯಾವ ಅಭ್ಯಂತರವೂ ಇಲ್ಲ.

ಇಂಡಿಯನ್ ಪಿನಲ್ ಕೋಡಿನ 265ನೆಯ ಸೆಕ್ಷನ್ ನೋಡಿ ಯಾರಾದರೂ ಕೊಡಬೇಕಾದ ಅಳತೆಗಿಂತಲೂ ಒಂಚನೆಯಿಂದ ಕಡಿಮೆ ಅಳತೆ ಕೊಟ್ಟರೆ ಅದು ಶಿಕ್ಷಾಸ್ಪದವೇ ಹೊರತು ಹೆಚ್ಚು ಕೊಟ್ಟರೆ ಅದು ಶಿಕ್ಷಾಸ್ಪದವಲ್ಲ. ಒಂದು ಸೇರಿಂದ ಐದಂಕರವು ಹೇಳಿದಷ್ಟು ನೀರನ ಅಳತೆಗೆ ತಕ್ಕದ್ದಾಗಿರಬೇಕು. ಅದೇ ಎತ್ತರ ಮತ್ತು ಅಗಲವಾಗಿರಬೇಕು, ತಲೆಹೊಡೆದು ಕೊಡುವಷ್ಟಕ್ಕಂತಲೂ ಕಡಿಮೆ ಸಾಮಾನುಕೊಡಬಾರದು. ಆದರೆ, ಸರ್ಕಾರವು ಹೇಳಿರುವುದಕ್ಕಿಂತಲೂ ಹೆಚ್ಚು ಅಳತೆಯನ್ನು ಕೊಡಬೇಕೆಂದು ಗಿರಾಕಿಗಳು ಕೇಳುವುದೂ ಅಂಗಡಿಯವರು ಕೊಡುವುದೂ ಶಿಕ್ಷಾಸ್ಪದವಲ್ಲ. ಆದುದರಿಂದ ಅಳತೆಗಳ ಇನ್‌ಸ್ಪೆಕ್ಟರವರು ತಲೆಹೊಡೆದೇ ಕೊಡಲೇಬೇಕೆಂದು ಜನರನ್ನು ಒಲಾತ್ಕರಿಸುವುದು ಕಾನೂನಿಗೆ ವಿರೋಧ. ಸರ್ಕಾರವು ಅವರಿಗೆ ಆ ಅಧಿಕಾರವನ್ನು ಕೊಡಲೂ ಇಲ್ಲ; ಕೊಡುವುದಕ್ಕೂ ಆಗುವುದಿಲ್ಲ.

'ಕೆ. ಎನ್.'

---

## ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ಗವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ಪಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

**ಸಬ್ ಏಜೆಂಟರುಗಳು.**

ವಿರಾಜಪೇಟೆ—ಮೆ. ಮಂಡೇಪಂಡ ಸೋಮೈಯ್ಯನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮೂದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು
ಹುದಿಕೇರಿ & ತಿತಿಮತ್ತಿ—ಮೆ. ಬಿ. ಮೂದಯ್ಯನವರು
ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಮಾಚಯ್ಯನವರು,
ಸೋಮವಾರಪೇಟೆ—ವೆ. ಕ. ಮೊಗಪ್ಪನವರು
ನಾಪೋಕ್ಲು—ಮೆ. ಬೆಳ್ಳಿಪಂಡ ಯಂ. ಪೂಣಚ್ಚನವರು,
(ನಾಪೋಕ್ಲು ಸ್ಟೋರ್ಸ್)

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾವ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್.
ಮಡಿಕೇರಿ.

---


ಸನ್ 1882ನೇ ಇಸವಿ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರಕಾರದ ಭರವಸೆಯುಳ್ಳ

**ದಿ ಬೋಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.**

ಅಧ್ಯಕ್ಷರು—ಮಾನನೀಯ ಸರ್ ಲಲ್ಲುಭಾಯಿ ಕಾನ್ಮಲಜಿ,
ಕೆ. ಟಿ. ಸಿ. ಐ. ಇ., ಜೆ. ಪಿ. ಯವರು.

ಕೊಚ್ಚಿಕಾರ್ ಬ್ರದರ್ಸ್ ಮದ್ರಾಸು ಬ್ರಾಂಚ್ ಸೆಕ್ರೆಟರಿಗಳು.

ಕಳೆದ ಲಾಭ ಹಂಚುವಿಕೆಯಲ್ಲಿ ರೂ. 18ರಿಂದ 23ರ ವರೆಗೆ ಬೋನಸ್ ಡಿಕ್ಲೇರಾಗಿರುತ್ತೆ.

ಹಿಂದಿಯರಿಂದ ಸ್ಥಾಪಿಸಲ್ಪಟ್ಟು ಹಿಂದೂದೇಶದವರಿಗಾಗಿ ಜೀವವಿಮೆಗೆ ಸಮ್ಮಂದಪಟ್ಟಿರುವ ಅತ್ಯುತ್ತಮ ಕಾದ ಲಕ್ಷಣಗಳಿಂದ ಕೂಡಿ ಕಮ್ಮಿ ಪ್ರೀಮಿಯಮ್ ದರದಲ್ಲಿ ಪಾಲಿಸಿ ಕೊಡುವ ಕಂಪೆನಿ ಇದೆಂದು ಮನವೊಪ್ಪಿದ ನುಡಿ.
ಪತಿ ವರ್ತಿಯರು ಮತ್ತು ವ್ಯಾಪಾರಸ್ಥರು ವಗೈರೆಯುಗೆ ವಿಶೇಷವಿಧಿ (ಜಾಯಿಂಟ್ ಲೈಫ್)
ಪಾಲಿಸಿ ಕಮ್ಮಿ ಪ್ರೀಮಿಯಮ್ ದರದಲ್ಲು ಕೊಡುವ ಈ ಕಂಪೆನಿಯು ಹೆಸರುಗೊಂತಿದೆ.
ಪಾಲಿಸಿದಾರರು ಅಕಾಲಾತ್ಕಾತಿಗಿ ಅಂಗಹೀನರಾದರೆ ಅಂಥವರಿಗೆ ಪಾಲಿಸಿಯು ವೊಖಲಗನ್ನು ಮುಂದಳ ಪ್ರೀಮಿಯಮ್ ವಸೂಲಾತಿ ಇಲ್ಲದೆ ಪೆನ್ಶನ್ ರೀತಿಯಲ್ಲು ಉದಾರತ್ವದಿಂದ ಕೊಡಲು ಈ ಕಂಪೆನಿಯು ಎದುರು ನಿಂತಿದೆ ಎಂದು ನೆನಪಿರಲಿ.
ಮುತುವರ್ಜಿಯಿಂದ ಕಲಸ ಮಾಡಲು ಇಚ್ಛಿಸುವ ಗುಡಸರು ಮತ್ತು ಹೆಂಗಸರಿಗೆ ಉತ್ತಮ ತಾಹವ ಕಮಿಶನ್ ವಗೈರೆಯುಂದ ಏಜೆನ್ಸಿ ಕೊಡಲಾಗುತ್ತೆ.

ಹೆಚ್ಚಿನ ಮಾಹಿತಿಗೆ—ಬಿ. ಎಸ್. ಐಯ್ಯಪ್ಪು,
ಕೊಡಗು ಚೀಫ್ ಏಜೆಂಟ್,
ಮಹದೇವಪೇಟೆ, ಮಡಿಕೇರಿ.
26—9



"ನೀನು ನಿನ್ನ ವಸ್ತ್ರಗಳ ವಿಷಯದಲ್ಲಿ ಹೆಚ್ಚು ಜಾಗರೂಕಳಾಗಿರುವಿ."

"ಹೌದು, ಆದ್ದರಿಂದಲೇ ನಾನು ಅವನ್ನು 501 ಸಾಬೂನಿನಿಂದ ಒಗೆಯುವುದು."

TOMCo

ಟಾಮ್‌ಕೋ ವೂರಾಟದ ಮಳಿಗೆ,
೧, ಸೆಂಟ್ರಲ್ ಸ್ಟ್ರೀಟ್, ಬೆಂಗಳೂರು ದಂಡು.

**501 Soap**

ವೆಚ್ಚ ಕಡಿಮೆ.
ವಸ್ತ್ರ ಬಾಳಿಕೆ.
ಶ್ರಮ ಅತೀ ಕಡಮೆ!

ತಯಾರಿಸುವವವರು—ತಾತಾ ಆಯಿಲ್ ಮಿಲ್, ಕಂಪೆನಿ, ಲಿಮಿಟೆಡ್, ಬೊಂಬಾಯಿ, ಮತ್ತು ತಾತಾಪುರ.
52—37. ಕೊಡಗಿನ ಡಿಸ್ಟ್ರಿಬ್ಯೂಟರ್—ಬಿ. ಎಸ್. ಸುಬ್ಬಣ್ಣ, ಸಂತೆಪೇಟೆ, ಮೈಸೂರು.

ನೂತನ! ಮನೋಲ್ಲಾಸಕರ!! ಶುಚಿಕರ!!! ಆದರ್ಶ ವಿಶ್ರಾಂತಿಗೃಹ!!!!

**ಬೊಂಬಾಯಿ ರೆಸ್ಟೋರೆಂಟ್**

ಇದೇ ತಾ. 19—12—1935ರಲ್ಲಿ ಮಡಿಕೇರಿ ಚೌಕದಲ್ಲಿರುವ ಹೊಸ ಕಟ್ಟಡದಲ್ಲಿ ತೆರೆಯಲ್ಪಟ್ಟಿದೆ.

ಆರೋಗ್ಯಕರವೂ ಅಧ ನಿಕವೂ ಆದ ಉಪಹಾರ ಗೃಹವೊಂದನ್ನು ನಿರೀಕ್ಷಿಸುವ ಮಹನೀಯರುಗಳ ಸೌಕರ್ಯಕ್ಕಾಗಿ ತೆರೆಯಲಾಗುವುದು.

ಶುದ್ಧವೂ, ಪುಷ್ಟಿಕರವೂ, ಆರೋಗ್ಯಕರವೂ ಆದ ತಿಂಡಿತಿನಸುಗಳನ್ನೂ
ಕಾಫಿ—ಚಹಾ—ಕೊಕ್ಕೋ—ಶರ್ಬತ್ತು ಇತ್ಯಾದಿ ಪಾನೀಯಗಳೂ—
ಕೇವಲ ಹಲವು ವರ್ಷಗಳ ಅನುಭವಿಕರಿಂದ ತಯಾರಿಸಲ್ಪಡುವುವು.

ಗಿರಾಕಿಗಳ ಸೌಕರ್ಯವನ್ನು ಲಕ್ಷಿಸಿ, ಆಸನಗಳ—ವಿಶಾಲ ಕೊಠಡಿಗಳ—ಕಾರ್ಯೋತ್ಸಾಹೀ ವಿನೀತ ಸೇವಕರ ಏರ್ಪಾಡು ಇದೆ.

ಅಯಕ್ಕೆ ತಕ್ಕ ವ್ಯಯಮಾಡುವವರು, ವ್ಯಯಕ್ಕೆ ತಕ್ಕ ಆಯವನ್ನು ಹೊಂದಬೇಕಾದ ಅತ್ಯಾಧುನಿಕ ಈ ವಿಶ್ರಾಂತಿಗೃಹದಲ್ಲಿ—

ನೀವು ಅಪೇಕ್ಷಿಸಿದ—ನೀವು ನಿರೀಕ್ಷಿಸಿದ—ನೀವು ಹೊಂದಲೇಬೇಕಾದ—
ಸಕಲ ಅನುಕೂಲತೆಗಳನ್ನು ಕಂಡು, ಪೂರ್ಣ ತೃಪ್ತಿಹೊಂದಿರಿ.

ಮದುವೆ ಮತ್ತು ಉಪನಯನ ಸಮಾರಂಭಗಳಲ್ಲಿಯೂ ಮತ್ತು "ಟೀ"ವಾರ್ಟಿ—
"ಎಟ್-ಹೋಮ್"ಗಳಲ್ಲಿಯೂ ನಮ್ಮನ್ನು ಮರೆಯಬೇಡಿ.

52—8 ಪ್ರೊಪ್ರೈಟರ್:—ನಾಮುನ ರಾವ್, ಗಾಯತೊಂಡೆ.

## ನಮ್ಮವರೇ ತಾವಾಗಿ ತಂದುಕೊಂಡ ಕ್ಷಾಮ.

(3ನೇ ಪುಟದಿಂದ ಮುಂದುವರಿದದ್ದು)

death trap' ಎಂಬ ಪುಸ್ತಕವನ್ನು (೧—2—9 ಕಳುಹಿಸಿ) ತರಿಸಿಕೊಂಡು ಓದುವುದು ಒಳ್ಳೆಯದು.

ಇದು ನಮ್ಮಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಯನ್ನು ಕಡಿಮೆ ಮಾಡುವುದರಿಂದ ಅವರ ಬಡತನವು ನೀಗುವುದೆಂದು ನಮ್ಮಲ್ಲಿ ಹಲವು ಸುಶಿಕ್ಷಿತರು ಹೇಳಿ, ಅದಕ್ಕೆ 'ಬರ್ತ್ ಕಂಟ್ರೋಲ್' (ಸಂತಾನ ನಿರೋಧವೇ) ಮುಖ್ಯ ಉಪಾಯವೆಂದು ಸಾಧಿಸುತ್ತಿರುವರು. ಆ ವಿಚಾರವಾಗಿ ಆಜೆ ವರ್ಷ (1933)ದಲ್ಲಿ 'ಬರ್ತ್ ಕಂಟ್ರೋಲ್ ಇಂಟರ್‌ನೇಶನಲ್ ಇನ್‌ಫರ್‌ಮೇಷನ್ ಸೆಂಟರ್' ಅವರು 'ಲಂಡನ್, ಸ್ಕೂಲ್ ಆಫ್ ಹೈಜಿನ್ ಅಂಡ್ ಟ್ರಾಪಿಕಲ್ ಮೆಡಿಸನ್. ಅವರು ಒಂದು ಸಭೆಯನ್ನು ಕರೆದು 'ಏಷ್ಯಾ ಖಂಡದಲ್ಲಿ ಸಂತಾನ ನಿರೋಧ' ಎಂಬ ವಿಷಯವಾಗಿ ಚರ್ಚೆಯನ್ನು ನಡೆಸಿದರು. ಆ ಸಭೆಯು ಚರ್ಚೆಯಲ್ಲಿ ಭಾಗ ವಹಿಸಿದವರಲ್ಲಿ ಸಂತಾನ ನಿರೋಧ ಡಳಿತ ಕರ್ತೃಯಾದ ಸುಪ್ರಸಿದ್ಧ ಡಾ ಮೇರಿ ಸ್ಟೊಪ್ಸ್, ಪ್ರೊಫೆಸರ್ ಹೆಚ್. ಜೆ. ಲಾಸ್ಕಿ, ಪಿ. ಕೆ. ವಟ್ಟಲ್ (ಇವರು ಇಂಡಿಯಾ ದೇಶದ ಜನಸಂಖ್ಯೆಯ ವಿಚಾರದಲ್ಲಿ ಅತ್ಯುತ್ತಮವಾದ ಪುಸ್ತಕವನ್ನು ಬರೆದಿರುವರು) ಮಿಸೆಸ್ ಹಾ ಮಟ್ರ್‌ನ್, ಮಿಸ್ ರಾಥ್‌ಬೋನ್ ಎಂ. ಪಿ, ಚೀನಾ ಮತ್ತು ಜಪಾನ್ ಪ್ರತಿನಿಧಿಗಳೂ ಮುಖ್ಯರಾಗಿದ್ದರು. ಆ ಸಭೆಗೆ ಬಂದವರು 'ಏಷ್ಯಾ ಖಂಡದಲ್ಲಿ ಜನಸಂಖ್ಯೆಯು ಹೆಚ್ಚುತ್ತಿರುವುದಕ್ಕೆ ಅಲ್ಲಿ ಜನರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದೇ ಮುಖ್ಯ ಉಪಾಯವೇ ಹೊರತು ಗರ್ಭನಿರೋಧವು ಮುಖ್ಯವಲ್ಲ' ಎಂಬ ತೀರ್ಮಾನಕ್ಕೆ ಬಂದಿರುವರು. ಆ ವಿಚಾರವಾಗಿ ಹಿಂದೂಸ್ಥಾನದ ಪ್ರತಿನಿಧಿಯಾದ ಶ್ರೀಮತಿ ಪ್ರೊಫೆಸರ್ ಲಾಸ್ಕಿಯವರು ಹೀಗೆಂದರು:—'ಹಿಂದೂಸ್ಥಾನದ ಜನ ಸಂಖ್ಯೆಯು ಹೆಚ್ಚುವುದಕ್ಕೆ ಅಲ್ಲಿನ ಬಡ ಆರ್ಥಿಕ ಸ್ಥಿತಿಯೇ ಮುಖ್ಯ ಕಾರಣವಾಗಿದೆ, ಅವರ ಮುಖ್ಯವಾಗಿ ರೈತಾಪಿ ಜನರ ಆರ್ಥಿಕ ಸ್ಥಿತಿಯನ್ನು ಸುಧಾರಿಸಿದರೆ, ಆಗ ಜನ ಸಂಖ್ಯೆಯು ತಾನಾಗಿಯೇ ಕಡಿಮೆಯಾಗವುದು. ಇದು ಇತಿಹಾಸದಿಂದ ತಿಳಿಯುವ ಅನುಭವವಾಗಿದೆ.' ಈಗ ನಮ್ಮ ಜನಾಂಗದ ಸದುಸ್ಯೆಗೆ ಗರ್ಭನಿರೋಧವೇ ಮುಖ್ಯ ಉಪಾಯವೆಂದು ಸಾರುತ್ತಿದ್ದ ಮೂಲ್‌ಥ್ಯೂಸಿಯನ್ ಶಿಷ್ಯಕೋಟಿಯವರಿಗೆ ಈ ನಿದ್ಧಾಂತದಿಂದ ಬೆಂಬಲವು ಸಿಕ್ಕದಂತಾಗಿದೆ. ಇದರ ವಿಚಾರವನ್ನು ಇನ್ನೂ ಚೆನ್ನಾಗಿ ತಿಳಿಯಲಪೇಕ್ಷಿಸುವವರು 'Birth control in Asia' edited by Michael Feiding. (Birth Control International Information Centre, London, price 5 sh ) ವನ್ನು ತರಿಸಿ ಓದಬಹುದು.

"ತ್ರಿ"

## ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ]

### ಭೂ ಮಿ ಗಿ ರ್ವಿ ಬ್ಯಾಂಕು.

ದೇಶಬಾಂಧವರೆ,

ನಮ್ಮ 'ಕೊಡಗು' ಪತ್ರಿಕೆಯಲ್ಲು ಜಮ್ಮ ಉಂಬಳಿ ವಗೈರೆ ಬ್ಯಾಂಕಿಗೆ ಗಿರವಿ ಎಂಬ ಸಂಗತಿ ಓದಿದ ಕೂಡಲೇ ವೃದ್ಧನಾದ ನನ್ನ ರಕ್ತಕ್ಕೆ ಕಾವೇರಿತು. ಇನ್ನು ಯುವಕರ ರಕ್ತವು ಬಿಸಿಯಾಗುವದು ಆಶ್ಚರ್ಯವಲ್ಲ. ಆದರೆ ಮಾನ್ಯ ಸಂಪಾದಕರ ಅಭಿಪ್ರಾಯವು ತುಂಬ ಸಮಾಧಾನವುಂಟುಮಾಡಿದ್ದರಿಂದ ಯೋಗ್ಯ ಅಭಿಪ್ರಾಯ ಬರೆಯಲು ಕಾರಣವಾಯಿತು.

ಬಹು ಪೂರ್ವ, ಬಾದಾವರ್ತಿ ಜನ್ಮದ ಬುಡಕ್ಕೆ ಕೊಡ್ಲಿ ಬಿದ್ದು ಕೊಂಚ ಕಾಲದಲ್ಲೇ ಅದೆಷ್ಟೋ ಸಾವಿರ ಒಟ್ಟು ಜಮ್ಮ ಪರಾಧೀನವಾಗಿ ಘನ ಸಾವುಕಾರರ ಮತ್ತು ಜನಾಂಗದ ಧನಿಕರ ಹಸ್ತಗತವಾಯಿತು. ಆಗ್ಗೆ ಕೊಡಗಿನ ಕಳಬ ದೇಶಾಭಿಮಾನಿಗಳ ಮುಚ್ಚಿದ ಕಂಣು ತೆರೆದು ಸಾಗಿನ ಕೊಡಗರಾಗುವ ಕಾಲ ಬಂತೆಂದು ಯೋಚಿಸಿ, ದೇಶದ ಉದ್ದಗಲಕ್ಕೆ ವಿಂಟಿಂಗ್ ನಡಿಸಿ ಪರಾಧೀನದ ಹುಕುಂ ರದ್ದಾಗಬೇಕೆಂದು ವಿನಮ್ರತೆಯಿಂದ ಅರ್ಜಿ ತಯ್ಯಾರಿಸಿ ಚೀಫ್ ಕಮಿಷನರವರ ಬರುವಿಕೆಯ ನಿರೀಕ್ಷಣೆಯಲ್ಲು ಇದ್ದಂತೆ (1889 ಯೂ 90 ನೇ ಇಸವಿಯೊಗರಬಹುದು.) ಚೀಫ್ ಕಮಿಷನರವರು ಬಂದು ಆ ಕಾಲದ ಪದ್ಧತಿಯಂತೆ ಹೈಸ್ಕೂಲಿನಲ್ಲಿ ದರಬಾರ್ ನಡಿಸಿದರು.

ಪರಾಧೀನ ರದ್ದಾಗಬೇಕೆಂಬ ದೇಶದವರ ಅರ್ಜಿಯನ್ನು ಸ್ವೀಕರಿಸಿದ ಬಿದ್ದಂಡ ಬೋಪಣ್ಣನವರು ದೊರೆಗಳಿಗೆ ಕೊಟ್ಟು, ಹಿಂದುಸ್ಥಾನಿಯಲ್ಲು ಅರ್ಧ ಗಂಟೆ ಸಮಯ ಅರಿಕೆ ಮಾಡಿದ್ದೇನಂದರೆ—

'ಈ ಜಮ್ಮವೆಂಬದು ಕೊಡವರ ಪಿತ್ರ, ಪಿತಾಮಹಾದಿಗಳು ಕಲ್ಲು ಕಾವೇರಿ ಪಿಲ್ಲು ಭೂಮಿ ಇರುವ ಪರಿಯಂತು ಸಂಸಾರದ ಜೀವನೋದ್ಧಾರಕ್ಕೆ ಇರಬೇಕೆಂಬ ಮಹಾ ಸಂಕಲ್ಪದಿಂದ ಪಡೆದದ್ದಾಗಿರುತ್ತೆ. ಇದರಿಂದಲೇ ಕೊಡಗು ದೇಶ, ಕೊಡವರು, ಆಯುಧಪಾಣಿಗಳು, ಯುದ್ಧ ಪ್ರಿಯರು ಎಂಬ ನಾಮಧೇಯಪಡೆದದ್ದು ಇನ್ನೂ ಮಾಸಿರುವದಲ್ಲ. ಇಂಥಾ ರಿಯಾಯಿತಿ ದಕ್ಷಿಣ ಇಂಡಿಯಾದಲ್ಲಿ ಇರುವದು ವಿರಳವೆಂದು ನೆನಸುತ್ತೇನೆ ಹೀಗಿರುವಲ್ಲು ಗುಮಾಸ್ತರಿಯರು ಪಡೆದ ಜಮ್ಮ ಉಂಬಳಿಯ ಪರಾಧೀನಕ್ಕೆ ಹುಕುಂ ಆದ್ದರಿಂದ ದೇಶದವಂಚನೆಯಂಬ ವ್ಯಸನಪಡುವ ಕಾರಣ ಆ ಹುಕುಂ ರದ್ದುಪಡಿಸಬೇಕೆಂದು ಬೇಡುತ್ತೇನೆಂಬದಾಗಿ ಕಂಣಾನಿಂದ ಜಲಧಾರೆ ಸುರಿಸಿ ನಮಸ್ಕರಿಸಿದರು. ಒಕ್ಕಡೆ ಕೂತಿದ್ದ ನಾನು ಇದನ್ನು ಇನ್ನೂ ಮರಿಯಲಿಲ್ಲ.

ಬೋಪಂಣನವರ ದುಃಖದ ಮಾತನ್ನು ಕೇಳಿ ದೊರೆಗಳು ಆಗ್ಗೆ ಕಮಿಷನರವರಾಗಿದ್ದ ಕರ್ನಲ್ ಕ್ಲಾರ್ಕ್ ಸಾಹೇಬರವರ ಮುಖ ನೋಡುತ್ತಲೇ ಕ್ಲಾರ್ಕ್ ಸಾಹೇಬರವರು ದೇಶದವರ ಅರ್ಜಿಯನ್ನು ಸವಿಸ್ತರವಾಗಿ 'ಈ ಜಮ್ಮ ಪರಾಧೀನದ ಹುಕುಂ ಮುಂದಕ್ಕೂ ಸ್ಥಿರವಾದರೆ ಕೊಡಗರು ಭಿಕ್ಷುಕರಾಗುವದು ನಿಜ. ಇದಲ್ಲದೆ ಈ ಜಮ್ಮದಿಂದ ಕೊಡಗರಿಗೂ ಕೊಡಗು, ಸರಕಾರಕ್ಕೂ ತುಂಬ ಮರ್ಯಾದೆ ಉಳಿದಿರುವದರಿಂದ ಹುಕುಂ ರದ್ದುಪಡಿಸುವದು ತನಗೆ ಸಂತೋಷವೆಂದು' ಹೇಳಿದರು.

'ಅರ್ಜಿದಾರರೆ, ನಿಮ್ಮ ವ್ಯಸನಕ್ಕೆ ಸಂಯೋಗಿ ಕಮಿಷನರು ಒಪ್ಪುವದರಿಂದ ಕಳೆದದ್ದು ಕಳೆಯಿತು. ಮುಂದಕ್ಕೆ ಈ ಹುಕುಂ ರದ್ದಾಗಿಬೇಕು. ಯಾವ ಕಾಲದಲ್ಲು ಯಾವ ಸಬಬಿಗೂ ಪರಾಧೀನವಾಗಕೂಡದು' ಎಂದು ಆಗ್ಗೆ ಹುಕುಂ ಕೊಟ್ಟದ್ದರಿಂದ ಜಮ್ಮ ಇಲ್ಲಿ ವರೆಗೆ ಉಳಿಯಿತು.

ಇಂಥಾ ಹುಕುಮಿಗೆ ವಿರೋಧವಾಗಿ ಗಿರವಿಕೊಟ್ಟಲ್ಲಿ ಸಾಗಿನ ಕೊಡಗರಾಗುವದಕ್ಕೆ ಹೆಚ್ಚು ಕಾಲ ಬೇಡ ಗಿರವಿ ಕೊಟ್ಟಕ್ಷಣ ಪರಾಧೀನವಾಗಲಬಹುದೆಂಬ ಭರವಸೆಯಿಂಬಹುದು. ಸಾಲ ಪಡಕೊಂಡವರು ಕುತ್ತಿಗೆ ಸಲ್ಯಯಾಗಿ ಸಲ್ಯೆಸೂಡುವ ಕಾಲವು ತ್ರೇತಾಯುಗದ ರಾಮಂತಾಜ್ಯ ಅವಸಾನಕ್ಕೆ ಅಂತ್ಯವಾಗಿದೆ. ಈ ಕಲಿಯುಗದಲ್ಲಿ ಸಾಲ ತೆಗೆದರೆ ಸಲ್ಯೆಗ ಅನುಕೂಲವಿಲ್ಲವೆಂಬ ಒಂದು ಗುಪ್ತ ರೋಗ ಇರುವದಕ್ಕೆ ಪೂರ್ವದಲ್ಲು ಎಷ್ಟೋ ಸಾವಿರ ಬಟ್ಟಜಮ್ಮ ಕಳಕೊಂಡದ್ದು ಸಾಕ್ಷಿಯಾದ್ದರಿಂದ ಭರವಸೆಯು ವ್ಯರ್ಥ.

ಆರ್ಥಿಕ ಹೀನಸ್ಥಿತಿಯಿಂದಲೇ ಸಾಲಗಾರರಾಗಿದ್ದೇವೆಂಬ ಒಂದೇ ಸಬಬಿಗೆ ಒಪ್ಪತಕ್ಕದ್ದು ನ್ಯಾಯವಲ್ಲ. ಅದಕ್ಕೆ ಅದೆಷ್ಟೋ ಕಾರಣ ಇದೆಯೆಂಬದನ್ನು ಜನಾಂಗದವರು ತಿಳಿಯುವ ಉದ್ದಿಶ್ಯ ನಮ್ಮ ಸ್ವಭಾಷೆಯಲ್ಲೇ ಮಾಡಿದ ಕೆಳಗಿನ ಪದವನ್ನು ದಯವಿಟ್ಟು ನೋಡಿ ಸಮಾಧಾನ ತಂದುಕೊಂಡು, ಹ್ಯಾಗೂ ವಿಷದಂತ ಸಾಲಕ್ಕೆ ಜನ್ಮವೆಂಬ ಅಮೃತವನ್ನು ಬೆರಸಬಾರದಾಗಿ ವಿನಯದಿಂದ ಪ್ರಾರ್ಥಿಸುತ್ತೇನೆ.

### ರಾಗ ಕಾಂಬೋದಿ.

(ಅರಿಗಾಪರೂ ಪೂರ್ವ ಕರ್ಮ ಬಿಡದು ಎಂಬಂತೆ)

ಕಲಿಯುಗತ್ ಮಾಳ್ಪುಮೆ ಕಾಂಬದ್‌ರೊ ನೇರ್ ‖ ಪ ‖

ಪಲಕತ್ ರಾಜ ಮಹರಾಜಾಗಡ ದರ್ಬಾರ್ ಜೋರ್ ‖ಅ‖

ಗುರುಪೂಜೆ ಮಾಡುವಳ ಕ್ಷತ್ರಿಯಾಡ ಕೊಡುಮಲೆಕ್ |
ಅರು ಸೇರುವಕಯ್ಯ ಪಂಡ್ ‖
ತರ ತರತ್ ಪಟ್ಟವುರೊ ವಿಜ್ಞ ಬಂದವು ನಿಂದ್ |
ಊರ್ ಕೇರಿಕ್ ತಿರಿಕೆ ಡಾಚಿ ‖೧‖

ಅಂಗಿರಿಕೆ ಕುಡ್‌ತ್‌ಟ್ಟ್ ಕೊಂಬತೊಪ್ಪಿಯಲ್‌ಟ್ಟ್ |
ಲಿಂಗಶೆಟ್ಟಿಯೆಡೊಬ್ಬ ಬಂದ್ ‖
ತಿಂಗಾರ್ ಮನೆ ಮನೆಯೊ ತಿರ್ ತಿರ್‌ಗಿ ಜೋತ್ ಆ |
ಜಂಗಮನೆ ಕೊಡುಮಲೆಗ್ ಮಹರಾಜನಾಚಿ ‖೨‖

ತುರುಕ ಹೆದರ್ ಟೀವುಸುಲ್ತಾನ ಪಡೆಬಂದ್ |
.... .... .... .... ....
ಗಮನತ್‌ಲ್ ಒಹು ಜನಕ ಲಿಂಗ ತುದಿ ಅಂತ್ ‖
ಕೂಂ ಕೊಡವರ ಜೋತ್ |
ದರ್‌ಬಾರ್ ಕಳುದಮಂದಿ ಮಹ್ಮದಿರು ಪೋಚಿ ‖೩‖

ವೀರರಾಜಂಡ ಪಟ್ಟ, ಧೀರ ಕೊಡನಡ ಕಾಲ |
ಸೂರ್ಯ ಚಂದ್ರನ ಸಾಕ್ಷಿ ಬೆಚ್ಚಿ |
ದೂರತುಳ್ಳ ಅಂಗ್ರೇಜಿ ಸಂಕಾಂ ಸ್ನೇಹಾಚಿ |
ಭಾರತಕೆ ಬಹುನಲ್ಲ ದೇಶಾಂದ್ ಡಾಚಿ ‖೪‖

ಲಿಂಗರಾಜಂಡ ವೋಂವ ವೀರರಾಜಾಡ ಕಾಲ |
ತಂಗೆ ದೇವಮ್ಮಜಿ ದೂರ್‌ನಲೊ ಕೇಟ್ ‖
ಅಂಗ್ರೇಜಿ ವೂದೂರೆ..... |
ಜಾಗಮಡ ಕಡೆ ರಾಜ ಕಾಶಿಕ್‌ಲೊಪೋಚಿ ‖೫‖

.....ಈ ದೇಶ ನಿಂಗ ಬಾನಳ ಸೀಮೆ |
ನಿಂಗಳೇ ದೊರೆಯಾಯಿ ಬಾಳಿಂಡಣ್ಣಾ ‖
ಕೆಂಗುದರೆ ಕೊಡಿಲಳಕ್ ಪೊಂದೊಪ್ಪಲೆಂಣುವಕ |
ಅಂಗ್‌ಲೆಣ್‌ನ ದೇಶ ಜನತ್‌ಡ ಅರಿಕೆ ‖೬‖

ಪಡಿಯಾತ್ ಬೆಂದುವಳೆ ಈ ದೇಶ ಬೆಚ್ಚಂಡ್ |
ಬಡತನವೊ ತಕ್ಕತ್ತೆ ಪೊಲತಂಡುಂದೆಣ್ಣಾ ‖
ನತ್ತಮಜ್ಜಣನೇರ ಪಡಿತೊದಂದ್ ದೇಶತ್‌ನ |
ಕೊಡ್‌ತ್ ದಾಸಂಗಳಾಚಿ ಪೊಂ‌ನೂರ್ ಕಾಲ ‖೭‖

ಪೊನ್ನೆದೇಶವೊ ಹಿಣ್ಣ ಕಂಣ್ ಬೆಳ್‌ಕಯಿಂಗಾಚಿ |
ಪನ್ನೆರಂಡ್ ಮಹಕಾಲ ಶುಭಕಾಲಡಾಚಿ ‖
ಎಂಣಸಟ್ಟಯಿಂಡೆಲ್ಲ ಅಧಿಕಾರ ಜೋರಾಚಿ |
ಡೆನ್ನೆನೊ ಕಳಿ ಸಿರಿಯು ಮಿನ್ನುವಕ್ ಡಾಚಿ ‖೮‖

ಕಾಡ್‌ಕಾಪಿಯೋಲಾಚಿ ಗಾಡಿಸಾಮೋಟಾಚಿ |
ಕುಡಿಪಕಾಚಿಲ ಬ್ಯಾಂಡಿ ಏಶ್ರಿ ‖
ಇಡುವಕ್‌ಲೊ ಕೋಟಾಚಿ ನಡಪಕ್‌ಲೊ ಬೂಟಾಚಿ |
ಕಡುಬಡವಕು ಹ್ಯಾಟ್ ಮುಂಡೆಕ್‌ಲೊಡಾಚಿ ‖೯‖

ನೋಟುವಕ್ ಕಂಣ್‌ಕ್‌ಲೊ ಕನ್ನಡಿಯೊ ಬೋಂಡು |
ಬೋಟಿಕ್‌ಲೊ ಬ್ರಿಜ್ಜೋಡ್ ತೋಟಕೋಕಾಂಡು ‖
ಜುಟ್ಟ ಸಿಗ್ರೇಟಿಲ್ಲತೆ ದಾಕಕ್ಕಯ್ಯ |
ವೋಟಾರ್ ಒಸ್ಸಿಲ್ಲತ್ತೆದಾರು ನಡಯು | ‖೧೦‖

ಅಂಬ್‌ಲನ ಬುಟ್ಟತ್, ಒಟ್ಟಿ ಕಾಪಿಯೊಲಾಚಿ |
ಉಂಬ್ಲಕ್‌ಲೊ ಸೈಕಂಳ್ ಪಲಾವು ಕೆಚ್‌ಡ ‖
ತಿಂಬಕರು ಕಟ್ಲೀಸ್ ಕೈಮ ಚಾಪೀಸ್ ರೋಸ್ಟ್‌ಡಾಚಿ |
ಕೊಂಬವೊಶೆಕು ಕೂಡ ಬಹಿಷ್ಕಾರಡಾಚಿ ‖೧೧‖

ಪೊಂಣಾಳ್ ಉಡುತನಕ್ ಕಾಶ್ಮೀರ್ ಪೊಡೆಮ |
ಪವುನ್‌ಪರ ಪೊಂಗಡಗ ಕಂಪ್ಯೋಲೆಡಾಚಿ ‖
ಗಾನ್ ಜಾಕಟ್‌ಚಿ ನೊಣಕಳಿಯೊ ಜೋರಾಚಿ |
ಕನ್ನಿಯಡ ಯೆದೆವೆಲೆಕ್ ಪೊಂಬಡಿಯೊಡಾಚಿ ‖೧೨‖

ಬಗೆ ಒಗೆಯು ರಾಜಂಗಡ ಆಚಾರ ಧರ್ಮೊ |
ಯುಗದೋಷದೆಂಣುವಳ ಕಲಿಕಾಲ ಕರ್ಮೋ ‖
ಯೋಗಕೇಸರಯೆನ್ನುವ ಉಂಬಕ್‌ಲೊ ಕೂಳಿಲ್ಲೆ |
ಬಾಗಿಯಕ್ ಕೊರಪಲ್ಲೆ ಒಡತನವೆ ಜೋರ್ ‖೧೩‖

ಇರ್‌ಪಡೆನ ಮಂದಿತ್ ದರ್‌ಬಾರ್ ಕಳಚಿತ್ |
ಗಿರವಿಕೊಡ್‌ಕನ ಜಮ್ಮ ಉಂಬಳಿನಂದೆಣ್ಣಾ ‖
ಒರ್‌ಗೇನಯಿಕ್ಕೊಂದ್ ಪೊ ಬುದ್ದ ಈ ಮಾತ್ರ |
ಪರದೇಶ ಪೊರಡುವಕ್ ಒಲವಾನಯೂತ್ರೆ ‖೧೪‖

ನೂರಾರ್ ಸಂಸಾರ ಮರ್‌ಮಕ್ಕ ಕರ್‌ಮಂಕ್ಕ |
ಯೆರಂದ್‌ಪೋಡುವಕಾಗ ನಾಳೇಕಂದೆಂಣಾ ‖
ಗುರುದೇವಗಳಿನ ಸ್ಥಿರಜಮ್ಮ ಉಂಬಳಿನ |
ಗಿರವಿಕೊಡ್‌ತಿನೊಉಂಡ್ ಹಾದಾಸಂಡಾನೆ

ಹರದಾಸ ೮


# EMPIRE OF INDIA LIFE ASSURANCE CO., LTD.

ESTD. 1897.

## TEN YEARS' PROGRESS.

| | 1925 | 1935 |
|---|---|---|
| | Rs. | Rs. |
| Income .... .... .... .... | 45,50,127 | .... 73,28,467 |
| New Assurances .... .... .... | 78,07,000 | .... 1,47,57,880 |
| Total Assets .... .... .... | 2,46,08,120 | .... 4,50,03,372 |
| Assurances in force .... .... | 6,95,93,793 | .... 11,56,12,828 |

Form of proposal and other particulars will be sent on Application.

Head office:— Empire of India Life Building, BOMAY. } 52—12 { Branch Office:— 152/3—Commercial Street, BANGALORE.

## ಎಕ್ಸರ್ ಮೇತ್ಯುಸ್ ಎಬ್ರಹಾಮ್.
## ದಂತ ವೈದ್ಯರು.
### ಗೀತಾಂಜಲಿ ಬಂಗ್ಲೆ.
(ಪೋಸ್ಟಾಫೀಸು ಎದುರುಗಡೆ.)

ಕಲ ಹಲ್ಲು ನೋವುಗಳನ್ನು ಶೀಘ್ರವಾಗಿ ಗುಣಪಡಿಸುವರ
ಂದರವಾದ ಕೃತ್ರಿಮ ಹಲ್ಲುಗಳನ್ನು ಮನ ಒಪ್ಪುವಂತೆ ಕ
ು. ಒಮ್ಮೆ ಪರೀಕ್ಷಿಸಿದಲ್ಲು ತಿಳಿಯುವುದು [52—16]

ಂ ವರ್ಷಗಳಿಂದ ಅನುಭವಪಟು ಪ್ರಖ್ಯಾತಿ
ಹೊಂದಿದ

# ಕರ್ಕಕಂಪನಿ ೧೯೩೩

## ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥೆ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟ. ಖ. ೭ ಆಣೆ. ಜರೂರು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕೆ,
(25—18) ಮತ್ತು ಕಂಪನಿ,
ಗಿರಗಾಂವ, ಮುಂಬಯಿ.

## HIROMANI NARAYANACHARYA
Choukhamba Benares City.

ಶಾಸ್ತ್ರಿಗಳೇ, ಪೂರ್ವಿಕರು ಆರೋಗ್ಯರೇ ಅಥವ ಈಗಿನವರೇ? ರಾಮಣ್ಣಯ್ಯನವರೇ, ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ. ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆಮಾಡುತ್ತ ಇದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿಸಂಪತ್ತು, ಕೀರ್ತಿ ಇವುಗಳೆಲ್ಲಾ ಆಗುವುವು ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿಯಿಂದ ನಮ್ಮ ಕಾಶೀ ಚೌಖಂಬಾ ಶಿರೋಮಣೀ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷೀ ದೊರೆಯುವುದು.

ಸಣ್ಣ ಅಡ್ಡೆ ಪ್ರವೊಣದ ಈತರ 1ಕ್ಕೆ ಆಣೆ 1 ರಿಂದ ರೂ. 25ರ ವರೆಗೆ. 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 3ರಿಂದ ರೂ. 25ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 3ರಿಂದ ರೂ. 50ರ ವರೆ. ಮತ್ತು 3—4—5—6—7—8 ಮುಖಗಳ ಕಾಳು 1ಕ್ಕೆ ಆಣೆ 4 ದ ರೂ. 10. ಮತ್ತು 9—10—11 ಮುಖಗಳುಳ್ಳ ಕಾಳು 1ಕ್ಕೆ ರೂ. ಂದ 30ರ ವರೆಗೆ. 12—13—14 ಮುಖದ ಕಾಳು 1ಕ್ಕೆ ರೂ 4ರಿಂದ 0ರ ವರೆಗೆ. ಸಣ್ಣ ರುದ್ರಾಕ್ಷೀ ಅವರೆ ಕಾಳಿಗಿಂತ ಸಣ್ಣದಾಗುತ್ತ ಯು ಜಾಸ್ತಿ. ದೊಡ್ಡ ರುದ್ರಾಕ್ಷೀ ಅಡಕೆಗಿಂತ ದೊಡ್ಡದಾಗುತ್ತ ಯು ಜಾಸ್ತಿ ಆಗುವದು. (ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಸಹಿಸುತ್ತೇವೆ. 1 ಆಣೆ ಸ್ಟಾಂಪು ಕಳುಹಿಸಿದರೆ 3 ಇನಾಮುಗಳು—ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ, 1 ಕಾಶಿ ಪಂಚಾಂಗ ಕೆಟಲಾಗಿನೊಂದಿಗೆ ಇನಾಮುಗಳು.)

ಶಿರೋಮಣಿ ನಾರಾಯಣಾಚಾರ್ಯ,
52—23 ಚೌಖುಬಾ ಬೆನಾರಿಸ್, (ಕಾಶೀ)

## ಮೊರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮವಾಗಿ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಪ್ತಿ ಮಂಜೂರಾತಿ ಫಾರಮುಗಳೂ, ಕುಂಬಸ್ತರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸೆಕ್ಯೂರಿಟಿ ಕೇಪರ್ ಖರಾರು ಫಾರಮುಗಳೂ ವಜರ್ ಪುಸ್ತಕಗಳೂ, ರಸೀತಿ ಪುಸ್ತಕಗಳೂ, ಜಮಾ ಖರ್ಚಿ ರಿಜಸ್ಟರ್ ಪುಸ್ತಕಗಳೂ, ಮತ್ತು ಚೆಕ್ ಪುಸ್ತಕಗಳೂ ನಮ್ಮ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಮುದ್ರೆ ಬರಲಿಕ್ಕೆ ಇವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್
"ಕೊಡಗು, ಲಿಮಿಟೆಡ್",
ಮಡಿಕೇರಿ.

## ಗುಂಡು ಹೊಡೆಯುವ ಕ್ರಮಗಳು.
## ಉಪಯುಕ್ತ ಸೂಚನೆಗಳು.

ಶಿಕಾರಿಗಳಿಗೆ:—
ನಮ್ಮ ಕೋವಿ ಮತ್ತು ತೋಟಾಗಳು ಶಿಕ್ಷಕ (Our arms and ammunition GUIDE 3) ಇದರಲ್ಲಿ ಗುಂಡು ಹೊಡೆಯುವ ನೂತನ ವಿಧಾನಗಳ ವಿಷಯ ಅತೀ ಉಪಯುಕ್ತ ಸೂಚನೆಗಳಿವೆ.

## Goolamhusain Allibhoy & Sons, Ltd.,
26—18 210, Abdulrehman Street, B O M B A Y 3.

# ಧಾತುಪುಷ್ಟಿ ಲೇಹ

### ಸ್ವರ್ಣ ಕಲ್ಪದ ಸಾಲಾಮಿಶ್ರಿ ಮಿಶ್ರಿತ.

ಇದು ಒಲಹೀನರಿಗೆ ಅದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಊತ್ಪಾದೊಡನೆ ಹೊರ ಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಆಶಕ್ತತೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಹಸಿವನ್ನೂ. ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯ ವೃದ್ಧಿಯನ್ನು, ಸಂಭೋಗ ಶಕ್ತಿಯನ್ನು ಮತ್ತು ಜ್ಞಾಪಕ ಶಕ್ತಿಯನ್ನು ವೃದ್ಧಿ ಮಾಡುವುದು. ಶರೀರಕ್ಕೆ ಆರೋಗ್ಯವನ್ನೂ ದಿವ್ಯ ಶಕ್ತಿಯನ್ನೂ, ಕಾಂತಿಯನ್ನೂ. ಉಂಟುಮಾಡುವುದು.

ಡಬ್ಬಿ 1ರ ರೂ. 2—8—0. 3ಕ್ಕೆ ರೂ. 7—0—0

### ಮುತೇರಿಯೂ ನಿವಾರಿಣಿ.

ಮಲಬದ್ಧತೆ, ಚಳಿಜ್ವರ, ದಿನಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಗೆಡ್ಡ ಬಂದ ಜ್ವರ, ಪುರಾಣ ಜ್ವರ, ವಾಯಿದೆ ಜ್ವರ. ಯಾವುದೆಯೆಂಜಾ, ನಿಮೋನಿಯೂ ಜ್ವರ, ಕಫ ಜ್ವರ, ವಳಜ್ವರ. ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿಯನ್ನುಂಟುಮಾಡುವುದು.

ಬಾಟ್ಲಿ 1ರ ರೂ. 1—8—0. ಸಣ್ಣ ಬಾಟ್ಲಿಗೆ 0—13—0.

### ಅಶೋಕಾರಿಷ್ಟ ಮತ್ತು ಮೂತ್ರ

ಇದು ಸ್ತ್ರೀಯರಿಗೆ ಅತ್ಯುತ್ತಮವಾದ ಟಾನಿಕ್. ಹುಟುಶೂಲೆ, ಕ್ರಮತಪ್ಪಿ ಮುಟ್ಟಾಗುವಿಕೆ, ಅತಿರೇಕ ಅಥವಾ ಅತ್ಯಲ್ಪ ಸ್ರಾವ, ಮುಟ್ಟು ಸಂಪೂರ್ಣವಾಗಿ ನಿಲ್ಲುವುದು, ಬಿಳುಪು ಹೋಗುವುದು, ಬಂಜೆತನ ನಡುವಿನ ನೋವು, ರಕ್ತಹೀನತೆ, ಒಳಜ್ವರ, ತಲೆನೋವು, ಮಲಬದ್ಧತೆ, ಕೈಕಾಲು ಬಚ್ಚುವುದು, ಅಕಾಲದಲ್ಲಿ ಗರ್ಭಪತನವಾಗುವಿಕೆ ಮತ್ತು ಸ್ತ್ರೀಯರಿಗೆ ಸಂಬಂಧಪಟ್ಟ ಇತರ ಎಲ್ಲಾ ದೋಷಗಳನ್ನು ಹೋಗಲಾಡಿಸಿ ಸೌಂದರ್ಯವನ್ನೂ ತೇಜಸ್ಸನ್ನೂ ಉಂಟುಮಾಡುತ್ತದೆ. ಬಾಟ್ಲಿ 1ರ ರೂ. 2—4—0

### ರಕ್ತಶೋಧಕ.

ದೇಹದೊಳಗಿನ ರಕ್ತವು ಕೆಟ್ಟುಹೋದ ಕಾರಣದಿಂದ ಉಂಟಾಗುವ ಕುರು, ಕಜ್ಜಿ, ವೈತುರಿಸುವಿಕೆ, ಕಲೆ, ವ್ರಣ, ಫರಂಗಿ ಸಂದು ಸಂಧಿ ನೋವು, ಮೇಹ, ವಾತ ಇವುಗಳ ಮೇಲೆ ದಿವ್ಯ ಔಷಧಿ. ಬಾಟ್ಲಿ 1ರ ರೂ. 1—2—0, 3 ಬಾಟ್ಲಿಗಳಿಗೆ 3—4—0.

ಕೆಟಲಾಗಿಗೆ ಬರಿರಿ. ಕಾಯಿಲೆ ಸಂಗತಿ ಬರದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ಚುನಾಯಿಸಿ ರವಾನಿಸಬಹುದು.

**ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಶಿಯನ್ಸ್. ರಥಬೀದಿ, ಮಂಗಳೂರು.**

(1) ಎ. ಬಿ. ಕಾಮುಕ್. ಮಹದೇವಪೇಟೆ, ಮಡಿಕೇರಿ (ಕೊಡಗು).
(52—30) (2) ಎ. ಎಸ್. ಮೂಜಯ್ಯ, ಬಟ್ಟೆ ವ್ಯಾಪಾರಿ, ಸುಂಟಿಕೊಪ್ಪ.

# GOVERNMENT SOAP FACTORY,
## Bangalore.

## ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ ಯಾವ ಗುಣಗಳು ಅವಶ್ಯಕವೆಂದು ನೀವು ತಿಳಿದಿರುತ್ತೀರೋ ಆ ಗುಣಗಳೆಲ್ಲ

**ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.**

ನಾವು ನಿಮಗೆ ಭರವಸೆಯನ್ನೀಯುತ್ತೇವೆ
ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನ್‌ಮೆಂಟ್ ಸೋಪ್ ಫ್ಯಾಕ್ಟರಿ.

52—49 ಬೆಂಗಳೂರು.

# ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಕೋ-ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

| | ರೂ. |
|---|---|
| ಶೇರ್ ಬಂಡವಾಳ — | 50,000— 0—0 |
| ವಸೂಲಾದ ಶೇರ್ ಮೊಬಲಗು — | 36,990— 0—0 |
| ಜಮೂಬಂದ ಠೇವಣಾತಿ — | 2,58,909—6—10 |
| ವಸೂಲಾದ ಕ್ಷೇಮನಿಧಿ — | 1,03,541— 4—0 |

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಠೇಕಡ ಸಾಲಿಯಾನ ರೂ 4-8-0ರ ದರದಲ್ಲಿಯೂ ಒಂದು ವರ್ಷದ ಠೇವಣಾತಿಗಳಿಗೆ ಠೇಕಡ ಸಾಲಿಯಾನ 4ರ ದರದಲ್ಲಿಯೂ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟು ಮಾಡುತ್ತಾರೆ.

ಪ್ರೆಸಿಡೆಂಟರು, ಪಂದ್ಯಂಡ ಐ. ಬೆಳ್ಯಪ್ಪನವರು.

ಮ್ಯಾನೇಜರ್ ರಾ. ಸಾ. ಪಾಂಡಂಡ ಚಂಗಪ್ಪನವರು,

ಸೆಕ್ರಟರಿ ಮನೆಯಪ್ಪಂಡ ಬೆಳ್ಯಪ್ಪನವರು.

ಕಾರ್ಯಕ 1—11—1935.

---

'ಭಾರತದ ಮುಂದಿನ ಜನಾಂಗದ ಆರೋಗ್ಯ ಮತ್ತು ಕ್ಷೇಮ ವರ್ಧನೆಯು ಇಂದಿನ ಅನೇಕ ರಾಜಕೀಯ ಮತ್ತು ಸಾಮಾಜಿಕ ಮುಂದಾಳುಗಳ ದೃಷ್ಟಿಯಲ್ಲಿರುವ ಒಂದು ದೊಡ್ಡ ಸಮಸ್ಯೆಯಾಗಿರುತ್ತದೆ. ತಮ್ಮ ಮಕ್ಕಳ ದೇಹವು ಪುಷ್ಟಿಯಾಗಿಯೂ ಸುದೃಢವಾಗಿಯೂ ಇರಲಿಕ್ಕೆ ಬೇಕಾದ ಒಂದು ಅಪೂರ್ವವಾದ ಸಂಜೀವಿನಿಯನ್ನು ಎಲ್ಲರೂ ತಿಳಿದದ್ದಾಗಿದ್ದರೆ ಈ ವಿಚಾರವು ಇಷ್ಟು ಕಠಿಣತರವಾಗಿರುತ್ತಿದ್ದಿಲ್ಲ. ಈ ಸಂಜೀವಿನಿಯಂತಿರುವ ಔಷಧವನ್ನು ಹೆಚ್ಚು ಸಫಲತೆಯಿಂದ ಅನೇಕರು ಭಾರತದ ಉದ್ದಗಲಕ್ಕೂ ಕಳೆದ 50 ವರ್ಷಗಳಿಂದ ಉಪಯೋಗಿಸುತ್ತಲಿರುವರು ಮಗುವು ಹೆಚ್ಚು ಕೃಶವಾಗಿ, ನಿರ್ಬಲತೆಯಿಂದ ಕೂಡಿ ಹಾಲನ್ನು ಸಹ ಜೀರ್ಣಿಸಿಕೊಳ್ಳಲಶಕ್ಯವಾಗಿ, ಆಗಿಂದಾಗ್ಗೆ ಶೀತ, ಕೆಮ್ಮು ಮೊದಲಾದ ರೋಗಗಳಿಗೀಡಾಗಿರುವಾದರೆ ಒಡನೆ ಪ್ರಸಿದ್ಧಿ ಹೊಂದಿರುವ

**ಡೋಂಗರೆ ಬಾಲಾಮೃತವನ್ನು**

ಕೊಡಬೇಕು. ಡೋಂಗ್ರೆ ಬಾಲಮೃತವು ಒಂದು ಟಾನಿಕ್. ಎಲ್ಲೆಡೆಗಳಲ್ಲೂ ದೊರೆಯುವುದು.

ಪ್ರೊಪ್ರಾಯಿಟರ್ಸ್—
ಕೆ. ಟಿ. ಡೋಂಗರೆ ಕಂಪೆನಿ,
(52—49) ಗಿರಿಗಾಂವ್, ಬೊಂಬಾಯಿ.

---

# ಷಿಕಾರಿಗೆ ಬೇಕಾಗುವ ನಾನಾ ವಿಧದ

ಕೋವಿ, ರೈಫಲು, ರಿವಾಲ್ವರು, ತೋಟಾಗಳು, ಬೇಟೆಯಾಡಲು ಮತ್ತು ಮೀನು ಹಿಡಿಯಲು ಆವಶ್ಯಕವಾದ ಎಲ್ಲಾ ಸಲಕರಣಗಳ ವಿಶೇಷ ಆಸ್ಥೆಯ ಭವವುಳ್ಳವರು.



ಕೆಟಲಾಗು ಉಚಿತ.] [CURRENT CATALOGUE FREE.

**The Bombay Armoury,**
329—331, Abdul Rehman Street,
BOMBAY, 3.

26—25

---

## ಪಂಡಿತ ಜವಾಹೀರಲಾಲ್ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕವನ್ನು ಪಡೆದ,

ಒಂದೇ ಸಮನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸಟೆ ಫಿಕೇಟುಗಳು ಮತ್ತು ಭಂಗಾರದ ಮೆಡಲುಗಳನ್ನು ಪಡೆದು ಪರದೇಶದಲ್ಲಿ ಧಾರಾಳವಾಗಿ ಬಜಾರ್‌ಗುವ

**ಶಕ್ತಿವರ್ಧಕ ಉತ್ತಮ ತರಗತಿಯ ಟಾನಿಕ್**

# ದ್ರಾಕ್ಷಾಮೃತ

ಅನೇಕ ವನಸ್ಪತಿ ರಸಾರ್ಕಗಳಿಂದ ಶಾಸ್ತ್ರೋಕ್ತವಾಗಿ ಸ್ವದೇಶೀ ಯಂತ್ರೋಪಕರಣದಿಂದ ತಯಾರಿಸಿದ ಮಧುರಾಮೃತ.

ಇದರ ಸೇವನೆಯಿಂದ ಉಷ್ಣ (ಗರಮಿ), ಧಾತುಸ್ರಾವ, ಸ್ವಪ್ನಾವಸ್ಥೆ, ಕೈಕಾಲು, ಕಣ್ಣೊಳಗೆ ಉರಿ, ಮಂಲಬದ್ಧ ಮುಂತಾದವು ಗುಣವಾಗುವದಲ್ಲದೆ ಜೀರ್ಣಶಕ್ತಿಯು ಹೆಚ್ಚಿ ದೇಹದಾರ್ಢ್ಯವುಂಟಾಗುವುದು. ಇದರಿಂದ ನಪುಂಸಕತ್ವ ದ್ದಲ್ಲ ಆದು ಹೋಗಿ ವೀರ್ಯ ವೃದ್ಧಿಯೂಗುವದು. ಹೆಂಗಸರಿಗೂ. ಗಂಡಸರಿಗೂ ಇದು ಗುಣಕಾರಿ ಇದೆ. ಮುಟ್ಟಾಗದ್ದರೆ ಮತ್ತು ಉಷ್ಣ (ಗರಮಿ) ರೋಗಗಳಿದ್ದರೆ ಅವೆಲ್ಲವೂ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯೂಗುವದು. ಈ ಔಧದ 3 ಬಾಟ್ಲಿಗಳ ಸೇವನೆಯಿಂದ ಪೂರ್ಣ ಗುಣ ಆಗುತ್ತದೆ. 1 ಬಾಟ್ಲಿಯನ್ನು ಸೇವಿಸುವದರಲ್ಲೇ ಇದರ ಗುಣ ಕಂಡು ಬರುವದು. ಪ್ರಮಾಣ:—ಬೆಳಗಿನಲ್ಲಿ ಒಂದು ತೊಲೆ ಮತ್ತು ಸಂಜೆಗೆ ಒಂದು ತೊಲೆ ತಕ್ಕೊಳ್ಳಬೇಕು.

ಬೆಲೆ—1 ಬಾಟ್ಲಿಗೆ ರೂ. 1—4-0, 3 ಬಾಟ್ಲಿಗೆ ರೂ. 3—8—0, 1 ಡಜನ್ ಬಾಟ್ಲಿಗಳಿಗೆ ರೂ. 12—0—0;

**ಮ್ಯಾನೇಜರ್:—ದ್ರಾಕ್ಷಾವೃತ ಡಿಪೊ ವೋಸ್ತ್ ನಿಪ್ಪಾಣಿ ಜಿಲ್ಲಾ (ಬೆಳಗಾವಿ.)**

52—22 ಕೊಡಗಿನ ಏಜಂಟರು—ನಾವೆಲ್ಟಿ ಸ್ಟೋರ್ಸ್, ಮಡಿಕೇರಿ
ಬಿ ಪುಟ್ಟಯ್ಯ ಶೆಟ್ಟಿ & ಸನ್ಸ್, ಸೋಮವಾರಪೇಟೆ.
ಭಕ್ತಾ ಬ್ರದರ್ಸ್, ಕಾಸರಗೋಡು.] ಎ. ಎನ್. ಹುಚ್ಚಯ್ಯ, ಮರ್ಚೆಂಟ್, ಗೋಣಿಕೊಪ್ಪಲು.

---

# ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೆ ಕಂಪೆನಿ ಲಿಮಿಟೆಡ್.

(1881ನೇ ಇಸವಿಯಲ್ಲಿ ಇಂಡಿಯಾದಲ್ಲಿ ಸ್ಥಾಪನೆಯಾದದ್ದು) (ಹೆಡ್ ಆಫೀಸು—ಬೊಂಬಾಯಿ)

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

| | | | |
|---|---|---|---|
| ಹೊಸ ಪಾಲಿಸಿಗಳ ಪ್ರೀಮಿಯಂ | .... | .... | ರೂ. 7,62,42,761 |
| ವಾರ್ಷಿಕ ಉತ್ಪತ್ತಿ | .... | .... | ರೂ. 3,14,01,970 |
| ಚಾಲ್ತಿಯಲ್ಲಿರುವ ಒಟ್ಟು ಪಾಲಿಸಿಗಳು | .... | | ರೂ. 54,20,38,518 |
| ಕ್ಲೇಯಿಮ್ಸ್‌ಗಳಿಗೆ ಕೊಟ್ಟ ಒಟ್ಟು ಹಣ | .... | | ರೂ. 16,29,88,814 |
| ಫಂಡ್ಸ್ ಹೆಚ್ಚಿದ್ದು | .... | .... | ರೂ. 15,53,88,843 |

**ಈ ಮೇಲಿನ ಫಲಿತಾಂಶಗಳು 'ಓರಿಯಂಟಲ್' ಕಂಪೆನಿಯ ಸುಸಂಘಟನೆಯನ್ನೂ ಮತ್ತು ಪ್ರಸಿದ್ಧಿಯನ್ನೂ ವಿಷದಗೊಳಿಸುತ್ತವೆ.**

ಈ ಪ್ರಸಿದ್ಧಿಗೊಂಡಿರುವ ಮತ್ತು ಅಭಿವೃದ್ಧಿಯಲ್ಲಿರುವ ಇಂಡಿಯನ್ ಜೀವ ವಿಮೆ ಕಂಪೆನಿಯಲ್ಲಿ ವಿಮೆ ಇಳಿಸಲು ಸಾವಕಾಶ ಮಾಡಬೇಡಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

**ಮೇನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.**

(ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

| | | | | |
|---|---|---|---|---|
| ಆಗ್ರ | ಕಲ್ಲಿಕೋಟೆ | ಕರಾಚಿ | ಮೊಂಬಾಸ | ರಂಗೂನು |
| ಅಹ್ಮದಾಬಾದು | ಕಲ್ಕತ್ತಾ | ಕೊಲಾಲಂಪೂರು | ನಾಗಪುರ | ರಾವಲ್‌ಪಿಂಡಿ |
| ಅಜ್ಮೀರ್ | ಕೊಲಂಬೊ | ಲಾಹೋರ್ | ನಾಟ್ಣ | ಸಿಂಗಪುರ |
| ಅಲ್ಲಾಹಾಬಾದು | ಡಕ್ಕಾ | ಲಕ್ನೊ | ಪೂನ | ಸುಕ್ಕೂರು |
| ಅಂಬಾಲಾ | ಡೆಲ್ಲಿ | ಮದ್ರಾಸು | ರಾಯಪುರ | ತಿರುಚಿನಾಪಳ್ಳಿ |
| ಒಳ್ಳಾರಿ | ಗೌಹತಿ | ಮಂಡಲೆ | ರಾಜಶಾಹಿ | ತಿರುವೆಂಡ್ರಮ್ |
| ಬರೇಲಿ | ಜಲಗಾಂ | ಮಡಿಕೇರಿ | ರಾಂಚಿ | ವಿಶಾಖಪಟ್ಟಣ |
| ಕೊಯಂಬತ್ತೂರು | ಗುಂಟೂರು | ಜಲ್‌ಪೇಗುರಿ | ಜಬ್ಬಲ್‌ಪುರ | ಮಧುರೆ & ಮೈಸೂರು |

ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್ ಪೇರೇಡ್, ಬೆಂಗಳೂರು,

52—4

ಯಂ. ವಿ. ಮುತ್ತುಕೃಷ್ಣ ನಾಯುಡು,
(ಬ್ರಾಂಚ್ ಸೆಕ್ರೆಟರಿ.)